UNIVERSAL LIBRARY
OU_200327
UNIVERSAL LIBRARY

ಮನೋರಂಜನ 'ಪ್ರಕಾಶ'ನ; ೫

# ಶ್ರೀಕಾಂತ

## ( ಚತುರ್ಥ ಭಾಗ )

ಮೂಲ ಲೇಖಕರು :
ದಿ|| ಶರಶ್ಚಂದ್ರ ಚಟ್ಟೋಪಾಧ್ಯಾಯರು

ಅನುವಾದಕರು :
ಶ್ರೀ. ಗುರುನಾಥ ಜೋಶಿ

★

ಪ್ರಥಮ ಮುದ್ರಣ ] [ ಒಂದೂವರೆ ರೂಪಾಯಿ

ಡಿಶಂಬರ — ೧೯೪೪

ಮನೋರಂಜನ ಪ್ರಕಾಶನ ಸಮಿತಿ, ಧಾರವಾಡ.

ಪ್ರಕಟವಾಗಿದೆ! ತ್ವರೆ ಮಾಡಿರಿ!!

# ಕ್ರಾಂತಿಯ ವಿಜಯ

ಸದ್ಯದ ಯುದ್ಧದಲ್ಲಿ ನಡೆಯುತ್ತಿರುವ ಭೀಕರ ಕೊಲೆ, ಅತ್ಯಾಚಾರ, ಮೋಸ, ದಬ್ಬಾಳಿಕೆ ಮೊದಲಾದ ಸತ್ಯ ಸಂಗತಿಗಳನ್ನು ತಿಳಿಸುವ ಹೊಸ ಕಾದಂಬರಿ.

ಬೆಲೆ : ಎಂಟಾಣೆ

ಮನೋರಂಜನ ಪ್ರಕಾಶನ ಸಮಿತಿ, ಧಾರವಾಡ.

---

# ಶ್ರೀಕಾಂತ

**೫ನೆಯ ಭಾಗದಲ್ಲಿ ಏನಿದೆ?**

ರಾಜಲಕ್ಷ್ಮಿಯು ಶ್ರೀಕಾಂತನನ್ನು ಪಾಟನಾಕ್ಕೆ ಕರೆದೊಯ್ದು ಒಂದು ತಿಂಗಳವರೆಗೆ ಆರೈಕೆ ಮಾಡಿಸುವಳು — ಡಾಕ್ಟರರ ಸಲಹೆಯಮೇರೆಗೆ ಗಂಗಾಮಾಟಿ (ಒಂದು ಅಸ್ಪೃಶ್ಯರ ಊರು)ಗೆ ಹವಾ ಬದಲಾವಣೆಗಾಗಿ ಕರೆದುಕೊಂಡು ಹೋಗುವಳು — ದಾರಿಯಲ್ಲಿ ಆನಂದನೆಂಬ ಸಾಧುವಿನ ಪರಿಚಯ — ಆವನನ್ನು ರಾಜಲಕ್ಷ್ಮಿ ಶ್ರದ್ಧೆ-ಆದರ-ಭಕ್ತಿ-ಪ್ರೀತಿಯಿಂದ ಕಾಣುವುದು — ಸಾಧುವಿನ ದೇಶದ ಬಡಜನರ ಸೇವೆಯನ್ನು ಶ್ರದ್ಧೆಯಿಂದ ಕಾಣುವುದು — ಶ್ರೀಕಾಂತನೂ ರಾಜಲಕ್ಷ್ಮಿಯೂ ಸೇರಿ ಹರಿಜನ ಬಾಲಕ ಬಾಲಕಿಯರ ಮದುವೆ ಮಾಡುವುದು — ಸುನಂದೆಯೆಂಬ ಸ್ತ್ರೀಯೊಡನೆ ಶ್ರೀಕಾಂತನ ಪರಿಚಯ — ಸುನಂದೆಯನ್ನು ಶ್ರೀಕಾಂತನು ಕಾಣುವ ಅದ್ಭುತ ರೀತಿ — ಮನಸ್ಸನ್ನು ಸೆರೆಹಿಡಿದು ಬಿಡುವ ಪಾತ್ರಪರಿಪೋಷಣೆ — ವಿಚಾರಪ್ರಚೋದನೆ — ಪ್ರತಿಪಾದನೆಯ ಹೃದಯವಿಹಾರಿಣಿ ಕಥಾಪ್ರವಾಹ.

ಇದೆಲ್ಲವೂ ಇದೆ.

ಜನೆವರಿ ಕೊನೆಯ ವಾರದಲ್ಲಿ ಪ್ರಕಟವಾಗುವುದು.

ಪ್ರಕಾಶಕರು:

ಮನೋರಂಜನ ಪ್ರಕಾಶನ ಸಮಿತಿ, ಧಾರವಾಡ

# ಶ್ರೀಕಾಂತ

## ( ನಾಲ್ಕನೆಯ ಭಾಗ )

— ೧ —

ಈಗ ನನಗೆ ಅಭಯಾಳ ಗಂಡನಿಂದ ಒಂದು ಪತ್ರವು ಬಂದಿರುವುದು. ಅವನು ಮೊದಲಿನಂತೆಯೆ ಪತ್ರದತುಂಬೆಲ್ಲ ಕೃತಜ್ಞತೆಯನ್ನು ಚಂದವಾದ ನುಡಿಗಳಲ್ಲಿ ವರ್ಣಿಸಿ, ತಾನು ಸಂಕಟದಲ್ಲಿರುವೆನೆಂದೂ ತನಗೆ ಮಾರ್ಗವನ್ನು ತೋರಿಸಿಕೊಡಬೇಕೆಂದೂ ಬರೆದಿರುವನು. ಅವನಿಗೆ ಬಂದ ಸಂಕಟ ಇದಾಗಿದ್ದಿತು:—ಅವನು ತನ್ನ ಶಕ್ತಿಮೀರಿ ಹೆಚ್ಚು ವೆಚ್ಚಮಾಡಿ ಒಂದು ದೊಡ್ಡ ಮನೆಯನ್ನು ಬಾಡಿಗೆಗೆ ಹಿಡಿದಿದ್ದ. ಒಂದು ಭಾಗದಲ್ಲಿ ತನ್ನ ಬರ್ಮೀ ಹೆಂಡತಿಯನ್ನೂ ಮಕ್ಕಳನ್ನೂ ಇಟ್ಟು ಇನ್ನೊಂದು ಭಾಗದಲ್ಲಿ ಅಭಯಾಳನ್ನು ಇಡುವ ಪ್ರಯತ್ನ ಮಾಡುತ್ತಿದ್ದ. ಆದರೆ ಇದಕ್ಕೆ ಆಕೆಯು ಒಪ್ಪುತ್ತಿರಲಿಲ್ಲ. ಸಹಧರ್ಮಿಣಿಯು ಈ ರೀತಿಯಾಗಿ ಹಟಮಾಡತೊಡಗಿದ್ದರಿಂದ ಅವನಿಗೆ ಅತ್ಯಂತ ದುಃಖವಾಗತೊಡಗಿರುವುದು. ಇದೆಲ್ಲವೂ 'ಕಲಿಕಾಲ'ದ ಫಲ, 'ಸತ್ಯಯುಗ'ದಲ್ಲಿ ಹೀಗೆಂದಿಗೂ ಆಗುತ್ತಿರಲಿಲ್ಲ. ಇದೇ ಮುಂತಾಗಿ ದೊಡ್ಡ ದೊಡ್ಡ ಋಷಿಮುನಿಗಳ ವಿಷಯವನ್ನೆತ್ತಿಕೊಂಡು ಮತ್ತು ಅನೇಕ ಉದಾಹರಣೆಗಳನ್ನು ಕೊಟ್ಟು ಬರೆದಿರುವನು "ಅಯ್ಯೋ! ಆ ಆರ್ಯಲಲನೆಯರು ಈಗೆಲ್ಲಿ ಇರುವರು? ಆ ಸೀತಾ-ಸಾವಿತ್ರಿಯರು ಎಲ್ಲಿಗೆ ಹೋದರು? ತಮ್ಮ ಪತಿಯ ಚರಣಕಮಲಗಳನ್ನು ತಮ್ಮ ಹೃದಯದಲ್ಲಿರಿಸಿಕೊಂಡು ನಗುನಗುತ್ತ ಚಿತೆಯಲ್ಲಿ ಪ್ರಾಣಬಿಡುತ್ತಿದ್ದ ಆ ಆರ್ಯನಾರಿಯರು ಈಗೆಲ್ಲಿರುವರು? ಕುಷ್ಟರೋಗದಿಂದ ಪೀಡಿತನಾದ ಲಂಪಟ ಪತಿದೇವನನ್ನು ವೇಶ್ಯೆಯ ಮನೆಯ ವರೆಗೆ ಕರೆದುಕೊಂಡು ಹೋದ ಹಿಂದೂಲಲನೆಯಂತಹ ಲಲನೆಯರು ಈಗೆಲ್ಲಿರುವರು? ಆ ಪತಿಭಕ್ತಿಯು ಈಗೆಲ್ಲಿರುವುದು! ಅಯ್ಯೋ ಭಾರತವೇ! ನಿನ್ನ ಅಧಃಪತನವು ಒಮ್ಮಿಂದೊಮ್ಮೆಗೆ ಆಗಿಹೋಯಿತೆ! ಅದೆಲ್ಲವನ್ನು—ಹಿಂದಿನ ಗೌರವವೆಲ್ಲವನ್ನು ನಾವು

ಒಂದು ಬಾರಿಯಾದರೂ ಈ ಕಣ್ಣುಗಳಿಂದ ನೋಡಲಾರೆವೇ! ಮತ್ತು ನಾವು-" ಇತ್ಯಾದಿ ಇತ್ಯಾದಿ. ಈ ರೀತಿಯ ನುಡಿಗಳಿಂದ ಪತ್ರದ ಎರಡು ಪುಟಗಳು ತುಂಬಿಹೋಗಿದ್ದುವು. ಆದರೆ, ಅಭಯಾ ಇಲ್ಲಿಯ ವರೆಗೆ ಮಾನಸಿಕ ವ್ಯಥೆಯನ್ನು ಪತಿದೇವರಿಗೆ ಕೊಟ್ಟರೂ ಶಾಂತಳಾಗಿಲ್ಲ ಎಂದು ಬರೆದು ಇನ್ನೂ ಬರೆದಿರುವ—"ಅಭಯಾ ಇನ್ನೂ ಪರರ ಮನೆಯಲ್ಲೇ ಇರುವಳು. ರೋಹಿಣಿ ಎಂಬ ಯಾವನೊ ಒಬ್ಬನು ಆಕೆಗೆ ರೂಪಾಯಿ ಗಳನ್ನೂ ಕಳುಹಿರುವನು ಮತ್ತು ಪತ್ರ ಬರೆದಿರುವನು ಎಂಬ ಸಂಗತಿಯು ಪೋಸ್ಟಮಾಸ್ತರರಿಂದ ಗೊತ್ತಾಯಿತು. ಈ ನಿರ್ಭಾಗ್ಯನ ಮರ್ಯಾದೆಗೆ ಎಷ್ಟು ಕುಂದು ಬಂದಿರುವುದೆಂಬುದನ್ನು ಬರೆದು ತಿಳಿಸಲಾಗುವುದಿಲ್ಲ."

ಪತ್ರವನ್ನು ಓದುವಾಗ ನನಗೆ ವಿಪರೀತ ನಗುವು ಬಂದಿತು. ಅದನ್ನು ಬಿಗಿಹಿಡಿಯಲಾಗಲಿಲ್ಲ. ಆದರೆ, ರೋಹಿಣಿಯ ವ್ಯವಹಾರದ ಬಗ್ಗೆಯೂ ನುಡಿಯ ಬಗ್ಗೆಯೂ ಕಡಮೆ ಕೋಪಬರಲಿಲ್ಲ. ಈಗ ಅವನು ಪತ್ರವನ್ನು ಏಕೆ ಬರೆಯಬೇಕಾಗಿದ್ದಿತು? ರೂಪಾಯಿಗಳನ್ನು ಏಕೆ ಕಳಿಸಬೇಕಾಗಿದ್ದಿತು? ಗಂಡನ ಗೃಹವನ್ನು ಸೇರಲು ಇಷ್ಟು ಪ್ರಯತ್ನ ಮಾಡಿದ ಮತ್ತು ಇಷ್ಟು ಕಷ್ಟಪಟ್ಟ ಅಭಯಾಳ ಚಿತ್ತಕ್ಕೆ ತಿಳಿದೊ ತಿಳಿ ಯದೆಯೊ ಇಷ್ಟೇಕೆ ದುಃಖವನ್ನು ಕೊಡಬೇಕಾಗಿದ್ದಿತು? ಅಭಯಾ ಕೂಡ ಇಷ್ಟು ಆಗ್ರಹವನ್ನೇಕೆ ಸುರುವುಮಾಡಿದಳು? ಆಕೆಗೇನು ಬೇಕಾಗಿರುವುದು? ಆಕೆಯ ಗಂಡನು ತನ್ನ ಹೆಂಡತಿಯಾಗಿ ಸ್ವೀಕರಿಸಿದ ಬರ್ಮೀ ಸ್ತ್ರೀಯನ್ನೂ ಆಕೆಯ ಹೊಟ್ಟೆಯಲ್ಲಿ ಹುಟ್ಟಿದ ತನ್ನ ಮಕ್ಕ ಳನ್ನೂ ತೊರೆದು ಕೇವಲ ಆಕೆಗಾಗಿ ಗೃಹಸ್ಥಿಕೆಯನ್ನು ನಡೆಯಿಸ ಬೇಕೆ? ಬರ್ಮೀ ಸ್ತ್ರೀಯರು ಸ್ತ್ರೀಯರಲ್ಲವೇ? ಅವರಿಗೇನು ಸುಖ-ದುಃಖದ, ಮಾನ-ಅಪಮಾನದ ಅರಿವು ಇಲ್ಲವೇ? ನ್ಯಾಯಾನ್ಯಾಯದ ಕಾನೂನನ್ನು ಅವರಿಗೋಸ್ಕರವಾಗಿ ಒಂದು ಮಡಿಕೆಯಲ್ಲಿ ಹಾಕಿ ನೆಲು ವಿನ ಮೇಲೆ ಇಟ್ಟುಬಿಡಬೇಕೇ? ಹಿಗಿದ್ದ ಪಕ್ಷದಲ್ಲಿ ಆಕೆಯು ಅಲ್ಲಿಗೇಕೆ ಹೋಗಬೇಕಾಗಿದ್ದಿತು? ಈ ಎಲ್ಲ ಜೊಂಜಾಟವನ್ನು ಇಲ್ಲಿಂದಲೇ ಸ್ಪಷ್ಟ ಮಾಡಿ ಬಗೆಹರಿಸಬಹುದಾಗಿದ್ದಿತಲ್ಲವೆ?

ಇಂದಿನ ವರೆಗೆ ರೋಹಿಣಿಯನ್ನು ಭೇಟಿಯಾಗಲು ನಾನು ಹೋಗಿ ರಲಿಲ್ಲ. ಅವನು ವ್ಯರ್ಥವಾಗಿ ದುಃಖವನ್ನು ಪಡುತ್ತಿರುವನೆಂದು ನಾನು

ಯೋಚಿಸಿ ಅವನ ಬಳಿಗೆ ಹೊರಡಲು ಮುಂದೆ ಹೆಜ್ಜೆಯಿಕ್ಕಲಿಲ್ಲ. ಆದಾಗ್ಯೂ ಈ ದಿನ ಬಿಡುವು ಆಗುವ ಮೊದಲೇ ನಾನು ಗಾಡಿಯೊಂದನ್ನು ತರಲು ಮನುಷ್ಯನನ್ನು ಕಳಿಸಿದೆ. ಇನ್ನು ಏಳುಜೇಕೆನ್ನುವಷ್ಟರಲ್ಲಿ ಅಭಯಾಳ ಪತ್ರವು ಬಂದು ಬಿಟ್ಟಿತು. ಪತ್ರವನ್ನು ತೆರೆದು ನೋಡ ಲಾಗಿ ಮೊದಲಿಂದ ಕೊನೆಯ ವರೆಗೆ ರೋಹಿಣಿಯ ಸಂಬಂಧವಾಗಿ ಮಾತುಗಳು ತುಂಬಿಹೋಗಿದ್ದುವು. ಆಕೆಯು ತಾನು ಯಾವಾಗಲೂ ಅವನ ಮೇಲೆ ಕೃಪಾದೃಷ್ಟಿಯನ್ನು ಇಟ್ಟುಕೊಂಡಿರಬೇಕು ಮತ್ತು ಅವನು ಎಷ್ಟು ದುಃಖಿ, ಎಷ್ಟು ನಿರ್ಬಲ, ಎಷ್ಟು ಅಪಟು, ಎಷ್ಟು ನಿಃಸಹಾಯ ಇರುವನೆಂಬ ಮಾತನ್ನು ಪ್ರತಿಯೊಂದು ಸಾಲಿನಲ್ಲಿ ಅಕ್ಷರ-ಅಕ್ಷರದಲ್ಲಿ ತೋರಿಸಿ, ಮರ್ಮಾಂತಿಕ ವ್ಯಥೆಯನ್ನು ವ್ಯಕ್ತಗೊಳಿಸಿದ್ದಳು. ಸರಳ ಚಿತ್ತದ ಯಾವ ಮನುಷ್ಯನಾದರೂ ಸರಿಯೆ, ಅವನು ಈ ವಿನಂತಿಯ ತಾತ್ಪರ್ಯವನ್ನು ತಿಳಿದುಕೊಳ್ಳುವುದರಲ್ಲಿ ತಪ್ಪು ಮಾಡಲಾರ ಎಂದು ಎನಿಸಿತು. ಅದರಲ್ಲಿ ಆಕೆಯ ಸುಖದುಃಖದ ಮಾತು ಇರಲೇ ಇಲ್ಲವೆಂದು ಹೇಳಬಹುದು. ಕೊನೆಗೆ ಪತ್ರದಲ್ಲಿ ಅವನು ಈಗ ಎಲ್ಲಕ್ಕೂ ಮೊದಲು ಇದ್ದ ಸ್ಥಳದಲ್ಲಿಯೆ ಇರುವನೆಂದೂ ಬರೆದಿದ್ದಳು.

ಪತಿಯು ಪತ್ನಿಯ ಪರಮೇಶ್ವರನು ಆಗಬಲ್ಲನೊ ಇಲ್ಲವೊ ಎಂಬು ದನ್ನು ಕುರಿತು ನಾನು ನನ್ನ ಅಭಿಪ್ರಾಯವನ್ನು ಮುದ್ರಿಸುವ ದುಃಸಾ- ಹಸವನ್ನು ಮಾಡುವಷ್ಟು ಸ್ಥೈರ್ಯ ನನ್ನಲ್ಲಿ ಇಲ್ಲ, ಮೇಲಾಗಿ ಅದು ಇಲ್ಲಿ ಆವಶ್ಯಕವೆಂದೂ ಎನಿಸುವುದಿಲ್ಲ. ಆದರೆ, ಸರ್ವಾಂಗಸುಂದರ ಸತಿ ಧರ್ಮದ ಅಪೂರ್ವತೆಯ, ದುಃಸಹ ದುಃಖದ, ಮತ್ತು ಅನ್ಯಾಯದ ಮಧ್ಯದಲ್ಲಿಯೂ ಆಕೆಯ ಆಕಾಶ ಭೇದಿಸುವಂತಹ ವಿರಾಟ-ಮಹಿ ಮೆಯು ನನ್ನ ಅನ್ನದಾ ಜೀಜೀಯ ಸ್ಮೃತಿಯೊಡನೆ ನನ್ನ ಮನಸ್ಸಿನ ಅಂತರಾಳದಲ್ಲಿ ಕೆತ್ತಲ್ಪಟ್ಟಿರುವುದು. ಯಾರ ಅಸಹ್ಯ ಸೌಂದರ್ಯವು ಕಣ್ಣುಗಳಿಗೆ ಗೋಚರಿಸದೆ ಮನಶ್ಚಕ್ಷುಗಳಿಗೂ ಕಾಣಿಸದೊ, ಯಾರು ಒಟ್ಟಿಗೇ ನಾರಿಯನ್ನು ಅತ್ಯಂತ ಕ್ಷುದ್ರ ಮತ್ತು ಅತ್ಯಂತ ಶ್ರೇಷ್ಠ ಮಾಡಿರು ವರೊ ಅವರ ನೆನಹು ಚಿರಕಾಲದ ವರೆಗೆ ನನ್ನ ಅಂತಃಕರಣದಲ್ಲಿ ಮನೆ ಮಾಡಿದೆ. ಅದೇ ನೆನಹು ಮತ್ತು ಮಹಿಮೆ ಈ ದಿನ ಅಭಯಾಳ ಈ ಪತ್ರದಿಂದ ತರಂಗಿತವಾಯಿತು.

ಎಲ್ಲರೂ ಅನ್ನದಾ ಜೀಜಿಯಂತೆ ಇರುವುದಿಲ್ಲ ಎಂಬುದನ್ನು ನಾನು ಬಲ್ಲೆ---ಆದರೆ ಆ ಕಲ್ಪನಾತೀತ ನಿಷ್ಠುರತೆಯನ್ನು ಎದೆಯ ತೆರೆದು---ಹೃತ್ಪೂರ್ವಕವಾಗಿ ಧೈರ್ಯದಿಂದ ಅಪ್ಪಿಕೊಳ್ಳುವಂತಹ ಎದೆಗಾರಿಕೆಯೂ ಎಲ್ಲ ಸ್ತ್ರೀಯರಲ್ಲಿ ಇರುವುದಿಲ್ಲ; ಯಾವಳು ಇಲ್ಲವೋ ಆಕೆಯನ್ನು ನೆನಸಿಕೊಂಡು ದಿನಾಲು ಶೋಕಪ್ರದರ್ಶನ ಮಾಡುವುದು ಗ್ರಂಥಕಾರನ ಏಕಮೇವ ಕರ್ತವ್ಯವು ಆಗಿರುವುದೋ ಇಲ್ಲವೋ ಎಂಬುದನ್ನು ವಿಚಾರಪೂರ್ವಕವಾಗಿ ನಾನು ನಿಶ್ಚಯ ಮಾಡದಾಗಿರುವೆ; ಆದಾಗ್ಯೂ ಇಡಿ ಚಿತ್ತವು ವೇದನೆಯಿಂದ ತುಂಬಿ ಹೋಯಿತು ಮತ್ತು ಸಿಟ್ಟು ಬಂದಿತು. ನಾನು ಗಾಡಿಯಲ್ಲಿ ಕುಳಿತೆ, ಆ ನಿರ್ಬಲ ಪರಸ್ತ್ರೀ-ಆಸಕ್ತನಾದ ರೋಹಿಣಿಗೆ ಹೇಳಬೇಕೆಂದಿರುವ ಬಿರುನುಡಿಗಳನ್ನು ಆಗಾಗ ಬಾಯಿಪಾಠ ಮಾಡುತ್ತ ಅವನ ಮನೆಯ ಕಡೆಗೆ ಹೊರಟೆ. ಗಾಡಿಯಿಂದ ಇಳಿದು, ಬಾಗಿಲ ತೆರೆದು, ನಾನು ಅವನ ಮನೆಯನ್ನು ಹೊಕ್ಕಾಗ ಹಗಲಿನ ಬೆಳಕು ನಂದಿ ಇಳಿಯ ಕತ್ತಲು ಮೆಲ್ಲಮೆಲ್ಲನೆ ಇಳಿಯತೊಡಗಿದ್ದಿತು ಮತ್ತು ದೀಪ ಹಚ್ಚುವ ವೇಳೆಯಾಗಿದ್ದಿತು.

ಆಗ ಭಾದ್ರಪದ ಮಾಸವೂ ಇರಲಿಲ್ಲ, ಆಗಸದಲ್ಲಿ ಮೋಡಗಳೂ ತುಂಬಿ ಬಂದಿರಲಿಲ್ಲ.---ಆದರೆ, ಜನ-ಶೂನ್ಯ ಮನೆಗೂ ಒಂದು ಆಕಾರ-ರೂಪ ಇದ್ದರೆ ಅದು ಆ ದಿನ ನನಗೆ ಆ ಬೆಳಕು ಮತ್ತು ಕತ್ತಲೆಯ ನಡುವೆ ಕಾಣಿಸಿತು. ನನಗೆ ಅಂದು ಕಂಡ ರೂಪದ ಹೊರತು ಬೇರೆ ಯಾವ ರೂಪವು ಶೂನ್ಯ ಮನೆಗೆ ಇರುವುದೆಂಬುವನ್ನು ನಾನು ಇದುವರೆಗೆ ಅರಿತಿರುವುದಿಲ್ಲ. ಮನೆಯು ಬಣ ಬಣ ಎನ್ನುತ್ತಿದ್ದಿತು, ಕೇವಲ ಅಡುಗೆಯ ಮನೆಯೊಳಗಿಂದ ಹೊಗೆಯು ಮಾತ್ರ ಹೊರಡುತ್ತಿದ್ದಿತು. ಬಲಗಡೆಗೆ ಸ್ವಲ್ಪ ಇಣಿಕಿ ನೋಡಿದೆ, ಒಲೆಯು ಹೊತ್ತಿ ಆರತೊಡಗಿದ್ದಿತು. ಅದರ ಬಳಿಯಲ್ಲಿಯೇ ನೆಲದ ಮೇಲೆ ರೋಹಿಣಿ ಬಾಬು ಒಂದು ಬದನೆಕಾಯನ್ನು ಎರಡು ಹೋಳು ಮಾಡಿ ಈಳಿಗೆಯ ಮಣೆಯ ಬಳಿ ಸುಮ್ಮನೆ ಕುಳಿತಿದ್ದ. ನನ್ನ ಕಾಲ ಸಪ್ಪಳವು ಅವನ ಕಿವಿಯನ್ನು ಮುಟ್ಟಲಿಲ್ಲ. ಏಕೆಂದರೆ ಕರ್ಣೇಂದ್ರಿಯದ ಯಜಮಾನ ಆಗ ಮತ್ತೆ ಎಲ್ಲಿಯಾದರೂ ಇರಬಹುದು, ಆದರೆ ಬದನೆಕಾಯ ಮೇಲೆ ಇರಲಿಲ್ಲ ಎಂಬುದನ್ನು ನಿಸ್ಸಂದೇಹವಾಗಿ ನಾನು ಹೇಳಬಲ್ಲೆ. ನಾನು ಸುಮ್ಮಗೆ

ಹಿಂತಿರುಗಿ ಆ ಎರಡೂ ಕೋಣೆಗಳ ನಡುವೆ ಇದ್ದ ನಡುಮನೆಯಲ್ಲಿ ಬಂದು ನಿಂತೆ. ಉತ್ಕಟ ವೇದನೆಯಿಂದ ತುಂಬಿದ ಅಳುವು ಇಡಿ ಮನೆಯನ್ನು ವ್ಯಾಪಿಸಿ ಬಿಕ್ಕುತ್ತ ಹಿಮಾಲಯದಂತೆ ಸ್ಥಿರವಾಗಿ ನಿಂತಿರುವುದೊ ಏನೊ ಎಂಬಂತೆ ನನಗೆಸಿಸಿತು. ಅದು ಸಂಪೂರ್ಣ ಸಮಾಜ, ಸಂಪೂರ್ಣ ಧರ್ಮಾಧರ್ಮ, ಸಮಸ್ತ ಪಾಪ-ಪುಣ್ಯದ ಆಚೆಗಿನ— ಅತೀತದ ವಸ್ತುವು.

ಹೊರಗೆ ಬಂದು ಕಟ್ಟೆಯ ಮೇಲೆ ಒಂದು ಕಡೆಗೆ ನಾನು ಕುಳಿತೆ. ಎಷ್ಟೋ ಹೊತ್ತಾದ ಬಳಿಕ ದೀಪವನ್ನು ಹಚ್ಚುವುದಕ್ಕಾಗಿ ರೋಹಿಣಿ ಬಾಬು ಹೊರಗೆ ಬಂದ. ಭಯಭೀತನಾಗಿ ಕೇಳಿದ "ಯಾರವರು?"

"ನಾನು ಶ್ರೀಕಾಂತ" ಎಂದು ಹೇಳಿದೆ.

"ಶ್ರೀಕಾಂತ ಬಾಬೂ! ಓಹೋ" ಎಂದು ಅವನು ಒತ್ತರದಿಂದ ಬಳಿಗೆ ಬಂದ. ಬಳಿಕ ಒಳಗೆ ಹೋಗಿ ದೀಪ ಹಚ್ಚಿದ ಮತ್ತು ನನ್ನನ್ನು ಒಳಗೆ ಕರೆದೊಯ್ದು ಕುಳ್ಳಿರಿಸಿದ. ಬಳಿಕ ಇಬ್ಬರ ಬಾಯಿಂದಲೂ ಯಾವ ಮಾತೂ ಹೊರಬೀಳಲಿಲ್ಲ. ಸುಮ್ಮಗೆ ಕುಳಿತಿದ್ದೆವು. ಕೊನೆಗೆ ನಾನೇ ಮೊದಲು ಬಾಯಿ ತೆರೆದೆ "ರೋಹಿಣಿ ಭೈಯಾ, ಇಲ್ಲಿ ಇನ್ನೇಕೆ ನೀನಿರುವೆ? ನನ್ನ ಸಂಗಡ ನಡೆ."

ರೋಹಿಣಿಯು "ಏಕೆ?" ಎಂದು ಕೇಳಿದ.

"ಇಲ್ಲಿ ನಿನಗೆ ಕಷ್ಟವಾಗುತ್ತಿರುವುದು, ಅದಕ್ಕೋಸ್ಕರ."

ರೋಹಿಣಿಯು ಸ್ವಲ್ಪ ತಡೆದು "ಕಷ್ಟ ಇನ್ನು ನನಗೇನಿದೆ!" ಎಂದ.

ಸರಿ ಇದೆ! ಆದರೆ, ಇಂತಹ ಪರಿಸ್ಥಿತಿಯಲ್ಲಿ ವಿಚಾರವನ್ನು ಮಾಡಲಾಗುವುದಿಲ್ಲ. ನಾನು ಅವನಿಗೆ ಹೀಗೆ ತಿರಸ್ಕಾರದ ನುಡಿಗಳನ್ನು ಆಡುವೆ, ಯಾವ ರೀತಿಯಿಂದ ನಡೆದುಕೊಳ್ಳಬೇಕೆಂಬುದನ್ನು ಉಪದೇಶ ಮಾಡುವೆ ಎಂದು ಮುಂತಾಗಿ ಯೋಚಿಸಿ ಮನೆಯಿಂದ ಹೊರಟಿದ್ದೆ. ಆದರೆ ಆ ಎಲ್ಲ ವಿಚಾರಗಳು ಇಲ್ಲಿ ಇಲ್ಲದಾದುವು, ಯಾವುದೊ ಒಂದು ಅಜ್ಞಾತ ಹೊಳೆಯಲ್ಲಿ ಹರಿದುಹೋದುವು. ಇಷ್ಟು ದೊಡ್ಡ ಪ್ರೇಮದ ಅಪಮಾನವನ್ನು ಮಾಡಬೇಕೆಂಬ ಬಗ್ಗೆ ನೀತಿ-ಶಾಸ್ತ್ರವನ್ನು ನಾನು ಓದಿರಲಿಲ್ಲ. ಎಲ್ಲಿಗೆ ಹೋಯಿತು ಆ ನನ್ನ ಸಿಟ್ಟು, ಎಲ್ಲಿಗೆ

ಹೋಯಿತು ಆ ನನ್ನ ವಿದ್ವೇಷ! ಸಮಸ್ತ ಸಾಧು-ಸಂಕಲ್ಪವು ತನ್ನ ತಲೆಯನ್ನು ಬಾಗಿಸಿಕೊಂಡು ಎಲ್ಲಿ ಅಡಗಿ ಹೋಯಿತೊ! ಅದರ ಗುರುತೇ ಸಿಕ್ಕಲಿಲ್ಲ.

"ನಾನು ಪ್ರಾಯವ್ಹೇಟ್ ಟ್ಯೂಶನ್ ಬಿಟ್ಟಿರುವೆ, ಏಕೆಂದರೆ ಆರೋಗ್ಯವು ಕೆಡುವುದು, ನನ್ನ ನೌಕರಿಯೂ ಒಳ್ಳೆಯದಿಲ್ಲ, ಬಹಳ ಪರಿಶ್ರಮ ಮಾಡಬೇಕಾಗುವುದು, ಅದಿಲ್ಲದಿದ್ದರೆ ಕಷ್ಟವೇನು ಇದೆ ನನಗೆ!" ಎಂದು ರೋಹಿಣಿಯು ಹೇಳಿದ.

ನಾನು ಸುಮ್ಮಗಿದ್ದೆ. ಏಕೆಂದರೆ, ಇದೇ ರೋಹಿಣಿಯ ಬಾಯಿಂದ ಒಂದು ವಾರದ ಮೊದಲು ಇವಕ್ಕೆ ವಿರುದ್ಧವಾದ ನುಡಿಗಳನ್ನು ಆಲಿಸಿದ್ದೆ. ಅವನು ಸ್ವಲ್ಪ ಹೊತ್ತು ಸುಮ್ಮಗಿದ್ದು ಎನ್ನತೊಡಗಿದ "ಕಚೇರಿಯಿಂದ ಬಂದ ಬಳಿಕ ಈ ಅಡುಗೆ ಮಾಡಿಕೊಳ್ಳುವುದೆಂದರೆ ಬೇಜಾರದ ಕೆಲಸ. ಹೌದೊ ಅಲ್ಲವೊ ಶ್ರೀಕಾಂತ ಬಾಬೂ?"

ನಾನು ಮತ್ತೇನನ್ನು ಹೇಳಬಲ್ಲವನಾಗಿದ್ದೆ! ಬೆಂಕಿ ಆರಿದ ಬಳಿಕ ಕೇವಲ ನೀರಿನಿಂದ ಇಂಜನು ನಡೆಯುವುದಿಲ್ಲ. ಇದು ಎಲ್ಲರಿಗೂ ಗೊತ್ತಿದ್ದ ಮಾತು.

ಆದಾಗ್ಯೂ ಈ ಸ್ಥಳವನ್ನು ಬಿಟ್ಟು ಬೇರೆ ಸ್ಥಳಕ್ಕೆ ಹೋಗಲು ಅವನು ಒಪ್ಪಲಿಲ್ಲ. ಯಾವನೂ ಕಲ್ಪನೆಯ ಸೀಮೆಯನ್ನು ಇಷ್ಟೇ ಎಂದು ನಿರ್ಧರಿಸಲಾರ, ಆದುದರಿಂದ ನಾನು ಕಲ್ಪನೆಯ ಎಲ್ಲೆಯನ್ನು ಕುರಿತು ಇಲ್ಲಿ ಏನನ್ನೂ ಹೇಳುವುದಿಲ್ಲ, ಆದರೆ ಯಾವ ಅಸಂಭವ ಆಸೆಯೂ ಅವನ ಮನದಲ್ಲಿ ಆಶ್ರಯವನ್ನು ಪಡೆದಿರಲಿಲ್ಲ ಎಂಬುದನ್ನು ನಾನು ಅವನ ಒಂದೆರಡು ಮಾತುಗಳಿಂದ ಅರಿತುಕೊಂಡಿದ್ದೆ. ಆದಾಗ್ಯೂ ಅವನು ಈ ದುಃಖದ ಆಲಯವನ್ನು ಏಕೆ ಬಿಡಲು ಇಷ್ಟ ಪಡುವುದಿಲ್ಲ ಎಂಬುದನ್ನು ಅರಿಯದಾದೆ. ಆದರೆ, ಯಾವ ನಿರ್ಭಾಗ್ಯಳಿಗೆ ಮನೆಯ ದಾರಿಯು ಕಟ್ಟಾಗಿ ಹೋಗಿದೆಯೊ ಆಕೆಯನ್ನು ಈ ಶೂನ್ಯಮನೆಯ ಬಂಡವಾಳವಾದ ವೇದನೆಯು ಎದ್ದು ನಿಲ್ಲಿಸಲು ಅಸಮರ್ಥವಾದರೆ, ಆಕೆಯನ್ನು ಸರ್ವನಾಶದಿಂದ ಬದುಕಿಸಲು ಯತ್ನಿಸುವುದು ಈ ಜಗತ್ತಿನಲ್ಲಿ ಇನ್ನಾರಿಗೂ ಸಾಧ್ಯವಿಲ್ಲ ಎಂಬ ಮಾತು ಅವನ ಅಂತರ್ಯಾಮಿಗೆ ಅಗೋಚರವಾಗಿರಲಿಲ್ಲ.

ನನ್ನ ಮನೆಗೆ ತಿರುಗಿ ಬರಲಿಕ್ಕೆ ಬಹಳ ಹೊತ್ತಾಯಿತು, ಸ್ವಲ್ಪ ರಾತ್ರಿಯೆ ಆಯಿತು. ಮನೆಯನ್ನು ಪ್ರವೇಶಿಸಿದ ಕೂಡಲೆ ಯಾರೊ ಒಬ್ಬರು ಒಂದು ಮೂಲೆಯಲ್ಲಿ ಅಡಿಯಿಂದ ಮುಡಿಯ ವರೆಗೆ ಹೊದ್ದು ಕೊಂಡು ಮಲಗಿರುವುದನ್ನು ನೋಡಿದೆನು. ಆಳುಮಗಳನ್ನು ವಿಚಾರಿಸಿದೆ " ಇವರು ಯಾರು ?" ಎಂದು. 'ಅವರು ಒಬ್ಬ ಸಭ್ಯಗೃಹಸ್ಥರು !" ಎಂದು ಆಕೆಯು ಉತ್ತರವಿತ್ತಳು.

ಆದುದರಿಂದಲೇ ನನ್ನ ಕೋಣೆಯಲ್ಲಿ !

ಊಟವಾದ ಬಳಿಕ ಆ ಮಹನೀಯರೊಡನೆ ಮಾತುಕತೆಯಾಯಿತು. ಅವರ ಊರು ಚಟಗಾಂವ ಜಿಲ್ಲೆಯಲ್ಲಿರುವುದು. ಸುಮಾರು ನಾಲ್ಕು ವರ್ಷಗಳಾದ ಬಳಿಕ ನಾಪತ್ತೆಯಾದ ಅವರ ತಮ್ಮನ ಪತ್ತೆಯು ಹತ್ತಿದೆ. ಅವನನ್ನು ತಿರುಗಿ ಕರೆದುಕೊಂಡು ಹೋಗಲು ಅವರು ಬಂದಿರುವರು. ಅವರೆಂದರು "ಮಹಾಶಯರೆ, ಪ್ರಾಚೀನಕಾಲದಲ್ಲಿ ಕಾಮರೂಪದ ಹೆಂಗಳೆಯರು ವಿದೇಶೀ ಪುರುಷರನ್ನು ಕುರಿಗಳನ್ನಾಗಿ ಮಾಡಿ, ಕಟ್ಟಿ ಹಾಕಿ ತಮ್ಮಲ್ಲಿ ಇಟ್ಟುಕೊಳ್ಳುತ್ತಿದ್ದರೆಂದು ಕತೆಗಳಲ್ಲಿ ಓದಿದ್ದೆ. ಆಗ ಅವರು ಅವರನ್ನು ಕಟ್ಟಿಕೊಂಡು ಏನು ಮಾಡುತ್ತಿದ್ದರೊ ಗೊತ್ತಿಲ್ಲ; ಆದರೆ ಈ ಕಾಲದಲ್ಲಿ ಬರ್ಮೀ ಹೆಂಗಳೆಯರು ಅವರಿಗಿಂತ ಯಾವ ರೀತಿಯಲ್ಲೂ ಕಡಿಮೆಯಿಲ್ಲ ಎಂಬ ಮಾತಿನ ಅನುಭವವು ನನಗೆ ಈಗ ಚೆನ್ನಾಗಿ ಆಗುತ್ತಿರುವುದು. "

ಇನ್ನೂ ಎಷ್ಟೋ ಮಾತುಗಳನ್ನು ಹೇಳಿದ ಬಳಿಕ ತಮ್ಮ ತಮ್ಮನನ್ನು ಉದ್ಧಾರಮಾಡುವ ಕಾರ್ಯದಲ್ಲಿ ನನ್ನ ಸಹಾಯವನ್ನು ಕೋರಿದರು, ಬೇಡಿದರು. ಅವರ ಕೋರಿಕೆಯನ್ನು ಈಡೇರಿಸಲು ಸಂಪೂರ್ಣವಾಗಿ ಪ್ರಯತ್ನ ಮಾಡುವೆನೆಂದು ನಾನು ವಚನವನ್ನು ಕೊಟ್ಟೆ. ಏಕೆ ? ಹೇಳುವುದು ಅಗತ್ಯವಿಲ್ಲ. ಮರುದಿನ ಬೆಳಿಗ್ಗೆ ನಾನು ಬಹಳ ಕಷ್ಟಪಟ್ಟು ಅವರ ತಮ್ಮನ ಬರ್ಮೀ ಮಾವನ ಮನೆಯನ್ನು ಹುಡುಕಿದೆ. ಅಣ್ಣಂದಿರು ಹೊರಗೆ ಬೀದಿಯಲ್ಲಿ ಮರೆಗೆ ನಿಂತುಕೊಂಡಿದ್ದರು ಮತ್ತು ಅಲ್ಲಿಯೆ ಎಡೆಯಾಡುತ್ತಿದ್ದರು.

ಮನೆಯಲ್ಲಿ ತಮ್ಮಂದಿರು ಇರಲಿಲ್ಲ ; ಸೈಕಲ್ ತೆಗೆದುಕೊಂಡು ಬೆಳಿಗ್ಗೆ ಅಡ್ಡಾಡಲು ಹೋಗಿದ್ದರು. ಮನೆಯಲ್ಲಿ ಅತ್ತೆಮಾವ ಇರಲಿಲ್ಲ.

ಕೇವಲ ಒಬ್ಬ ಸ್ತ್ರೀಯು ತನ್ನ ಒಬ್ಬ ತಂಗಿಯೊಡನೆ ಮತ್ತು ಮೂರು-ನಾಲ್ಕು ಜನ ದಾಸಿಯರೊಡನೆ ಇದ್ದಳು ಅಲ್ಲಿ. ಅವರು ತಮ್ಮ ಉಪಜೀವನವನ್ನು ಬರ್ಮಾ ಚುರೂಟು ಮಾಡಿ ಸಾಗಿಸುತ್ತಿದ್ದರು. ಆಗ ಎಲ್ಲರೂ ಈ ಕೆಲಸದಲ್ಲಿ ತೊಡಗಿದ್ದರು. ನಾನು ಬಂಗಾಲಿಯೆಂದೂ, ತನ್ನ ಪತಿಯ ಮಿತ್ರರೆಂದೂ ತಿಳಿದು ಅವಳು ಆದರದಿಂದ ನನ್ನನ್ನು ಸ್ವಾಗತಿಸಿದಳು. ಬರ್ಮೀ ಹೆಂಗಳೆಯರು ಕಷ್ಟಜೀವಿಗಳು. ಆದರೆ ಗಂಡುಸರು ಅತ್ಯಂತ ಆಲಸಿಗಳು. ಅಲ್ಲಿ ಮನೆಯ ಚಿಕ್ಕ-ದೊಡ್ಡ ಕೆಲಸ-ಬೊಗಸೆಯಿಂದ ಮೊದಲುಗೊಂಡು ವಾಣಿಜ್ಯ-ವ್ಯವಸಾಯದ ವರೆಗಿನ ಎಲ್ಲ ಕೆಲಸಗಳು ವಿಶೇಷವಾಗಿ ಹೆಂಗಳೆಯರ ಕೈಯಲ್ಲೇ ಇರುವುವು. ಆದುದರಿಂದ ಓದಲು-ಬರೆಯಲು ಕಲಿಯದಿದ್ದರೆ ಅವರ ಕೆಲಸ ಸಾಗುವುದಿಲ್ಲ. ಆದರೆ ಗಂಡುಸರ ಮಾತೇ ಬೇರೆಯಾಗಿರುವುದು. ಗಂಡುಸು ಓದುಬರೆಹ ಕಲಿತರೆ ಒಳ್ಳೆಯದು, ಇಲ್ಲದೆ ಹೋದರೆ ಅವನು ನಾಚಿಕೆಯಿಂದ ಸಾಯಲೇಬೇಕಾಗುವುದು. ನಿರುದ್ಯೋಗಿಯಾದ ಗಂಡುಸು ಉದ್ಯೋಗಿಯಾದ ತನ್ನ ಹೆಂಡತಿಯ ಗಳಿಕೆಯ ಮೇಲೆ ಉಪಜೀವನ ಮಾಡಿಕೊಂಡು ಸಮಾಜದಲ್ಲಿ ಹಿರಿತನವನ್ನು ಮಾಡುತ್ತ ಅಲೆದಾಡಿದರೆ ಜನರಿಗೆ ಯಾವ ಆಶ್ಚರ್ಯವೂ ಆಗುವುದಿಲ್ಲ. ಹೆಂಗುಸರೂ ಅವನಿಗೆ 'ಛಿಃ ಛಿಃ' ಎಂದು ಅವನನ್ನು ಪೀಡಿಸುವುದು ಆವಶ್ಯಕವೆಂದು ತಿಳಿಯುವುದಿಲ್ಲ. ಆದರೆ ಈ ಸ್ಥಿತಿಯು ಯಾವುದೊ ಒಂದು ಪ್ರಮಾಣದಲ್ಲಿ ಅವರ ಸಾಮಾಜಿಕ ಸ್ವಾಭಾವಿಕ ಆಚಾರದಲ್ಲಿ ಸೇರಿಹೋಗಿರುವುದು.

ಹತ್ತು ಹದಿನೈದು ನಿಮಿಷಗಳಲ್ಲಿ ಬಾಬೂಸಾಹೇಬರು 'ದ್ವಿಚಕ್ರಯಾನ' (ಸೈಕಲ್)ದಿಂದ ಹಿಂತಿರುಗಿ ಮನೆಗೆ ಬಂದರು. ಇಡೀ ದೇಹದ ಮೇಲೆ ಸಂಪೂರ್ಣ ಇಂಗ್ಲೀಷು ಪದ್ಧತಿಯ ಪೋಷಾಕು, ಕೈಯಲ್ಲಿ ಎರಡುಮೂರು ಉಂಗುರಗಳು, ಗಡಿಯಾರ–ಚೈನು ಇದ್ದುವು. ಕೆಲಸಬೊಗಸೆ ಏನನ್ನೂ ಮಾಡಬೇಕಾಗುವುದಿಲ್ಲ, ಆದಾಗ್ಯೂ ಸ್ಥಿತಿಗತಿ ಚೆನ್ನಾಗಿರುವುದೆಂಬುದನ್ನು ಕಂಡೆ. ಅವರು ಬಂದೊಡನೆ ಬರ್ಮೀ ಪತ್ನಿಯು ಕೈಯೊಳಗಿನ ಕೆಲಸವನ್ನು ಬಿಟ್ಟು ಎದ್ದುನಿಂತಳು ಮತ್ತು ಅವರ ಕೈಯೊಳಗಿನ ಟೊಪ್ಪಿಗೆ ಮತ್ತು ಛಡಿಯನ್ನು ಇಸಕೊಂಡು ಒಳಗೆ ಒಯ್ದಿಟ್ಟಳು. ಚಿಕ್ಕತಂಗಿಯು ಚುರೂಟು ಮತ್ತು ಕಡ್ಡಿಪೆಟ್ಟಿಗೆ

ಮೊದಲಾದುವನ್ನು ತಂದುಕೊಟ್ಟಳು. ಒಬ್ಬ ದಾಸಿಯು ಚಹಾ ಮೊದಲಾದುದನ್ನೂ ಇನ್ನೊಬ್ಬಳು ವೀಳ್ಯದ ಡಬ್ಬಿಯನ್ನೂ ತಂದು ಕೊಟ್ಟರು. ಆಹಾ, ಈ ಮನುಷ್ಯನನ್ನು-ಇವರೆಲ್ಲರೂ ಸೇರಿ ಪೂರ್ತಿಯಾಗಿ ರಾಜನಂತೆ ಇಟ್ಟಿರುವರು! ಹೆಸರನ್ನು ನಾನು ಮರೆತಿರುವೆ. ಬಹುಶಃ ಚಾರು-ವಾರು ಎಂದು ಇರಬಹುದು. ಇರಲಿ ಬಿಡಿರಿ, ನಾವು ಮಾತ್ರ ಕೇವಲ 'ಬಾಬೂ' ಎಂದೇ ಕರೆಯೋಣ.

ಬಾಬೂ ಅವರು ಕೇಳಿದರು "ತಾವು ಯಾರು?"

"ನಾನು ನಿಮ್ಮ ಸಹೋದರರ ಮಿತ್ರ" ಎಂದು ಹೇಳಿದೆ.

ಅವರಿಗೆ ನಂಬಿಕೆಯಾಗಲಿಲ್ಲ. ಅವರೆಂದರು "ನೀವು ಕಲಕತ್ತಾದವರು. ನನ್ನ ಸಹೋದರರು ಅಲ್ಲಿಗೆ ಎಂದೂ ಹೋಗಿಯೆ ಇಲ್ಲ. ಗೆಳೆತನವು ಹೇಗಾಯಿತು?"

ಗೆಳೆತನವು ಹೇಗಾಯಿತು, ಎಲ್ಲಾಯಿತು, ಈಗ ಅವರು ಎಲ್ಲಿದ್ದಾರೆ ಮೊದಲಾದ ಸಂಗತಿಯನ್ನೆಲ್ಲ ಸಂಕ್ಷೇಪದಲ್ಲಿ ವರ್ಣಿಸಿ, ಅವರು ಬಂದ ಉದ್ದೇಶವನ್ನೂ ಹೇಳಿದೆ ಮತ್ತು ಅವರು ತಮ್ಮ ಭ್ರಾತೃ-ರತ್ನದ ಸಂದರ್ಶನಕ್ಕಾಗಿ ಉತ್ಕಂಠಿತರಾಗಿರುವರೆಂದೂ ನಿವೇದಿಸಿದೆ.

ಮರುದಿನ ಬೆಳಿಗ್ಗೆ ನಮ್ಮ ಹೋಟಲಿನಲ್ಲಿ ಬಾಬೂಗಳ ಪಾದಧೂಳಿಯು ಬಿದ್ದಿತು. ಇಬ್ಬರೂ ಸಹೋದರು ಬಹಳ ಹೊತ್ತಿನ ವರೆಗೆ ಮಾತನಾಡಿದ ಬಳಿಕ,ಅವರು—ಬಾಬೂಸಾಹೇಬರು ಮನೆಗೆ ಹೋದರು. ಆಗಿನಿಂದ ಇಬ್ಬರೂ ಸಹೋದರರಲ್ಲಿ ಸ್ನೇಹವು ಬಹಳ ಬೆಳೆದು ಹೋಯಿತು. ಸಂಜೆಯಿಲ್ಲ, ಮುಂಜಾನೆಯಿಲ್ಲ, ಬಾಬೂ ಸಾಹೇಬರು 'ಅಣ್ಣ' ಎಂದು ಕೂಗುತ್ತ ಆಗಾಗ್ಗೆ ಬರತೊಡಗಿದರು. ಪುಸು ಪುಸು, ಪಿಸು ಪಿಸು ಮಾತು ಕತೆ, ಸಲಹೆ, ಸಲ್ಲಾಪಗಳು ನಡೆಯತೊಡಗಿದುವು. ಊಟಪಾನಕ್ಕಂತೂ ಎಲ್ಲೆಯೆ ಇಲ್ಲ. ಒಂದು ದಿನ ಸಾಯಂಕಾಲಕ್ಕೆ ತಮ್ಮ ಮನೆಗೆ ನನಗೂ ಅಣ್ಣನಿಗೂ ಚಹಾಪಾರ್ಟಿಗೆ ಬರಬೇಕೆಂದು ಆಮಂತ್ರಣವನ್ನೂ ಕೊಟ್ಟುಹೋದರು.

ಅದೇ ದಿನ ಅವರ ಬರ್ಮೀ ಹೆಂಡತಿಯೊಡನೆ ಚೆನ್ನಾಗಿ ಮಾತುಕತೆಯಾಯಿತು. ಆಕೆಯು ಅತ್ಯಂತ ಸರಳ ಸ್ವಭಾವದವಳೂ ನಮ್ರಳೂ ಒಳ್ಳೆಯವಳೂ ಇದ್ದಳು. ಬಾಬೂ ಸಾಹೇಬರ ಮೇಲೆ ಪ್ರೀತಿ ಮಾಡಿ

ತನ್ನ ಇಚ್ಛೆಯಂತೆ ಆಕೆಯು ಮದುವೆಯಾಗಿದ್ದಳು. ಮದುವೆಯಾದಂದಿನಿಂದ ಒಂದು ದಿನ ಕೂಡ ಅವರಿಗೆ ಯಾವ ದುಃಖವನ್ನೂ ಕೊಟ್ಟಿರಲಿಲ್ಲ. ಸುಮಾರು ನಾಲ್ಕೈದು ದಿನಗಳ ನಂತರ ಬಾಬೂ ಸಾಹೇಬರ ಅಣ್ಣಂದಿರು ನಸುನಗುತ ಬಂದು ನನ್ನ ಕಿವಿಯಲ್ಲಿಯೆ ಹೇಳಿದರು "ನಾಡದು ಮುಂಜಾನೆ ಹೊರಡುವ ಹಡಗದಿಂದ ನಾವು ಊರಿಗೆ ಹೊರಡುವೆವು."

ಈ ಮಾತನ್ನು ಕೇಳಿ ನನಗೆ ಸ್ವಲ್ಪ ಭಯ ಬಂದಂತಾಯಿತು. ನಾನು ಕೇಳಿದೆ "ನಿಮ್ಮ ತಮ್ಮಂದಿರು ಪುನಃ ಇಲ್ಲಿಗೆ ಹಿಂದಿರುಗಿ ಬರುವರಲ್ಲವೆ ?"

"ಇನ್ನು! ರಾಮ ರಾಮ ಎಂದು ಹೇಗಾದರೂ ಮಾಡಿ ಹಡಗನ್ನು ಹತ್ತೋಣ !"

"ಈ ಹೆಣ್ಣು ಮಗಳಿಗೆ ತಿಳಿಸಿರುವಿರಲ್ಲವೆ ?"

"ಅಬ್ಬಬ್ಬ! ತಿಳಿಸದೆ ಹೋದರೆ ನಾವು ಉಳಿದೇವೇನು? ಪಿಶಾಚಿ, ನಾವೆಲ್ಲಿದ್ದರೂ ಬಂದು ರಕ್ತಬೀಜದಂತೆ ನಮ್ಮ ಮೇಲೆ ದಾಳಿ ಮಾಡುವಳು" ಎಂದು ಅಣ್ಣಂದಿರು ತಮ್ಮ ಎರಡೂ ಕಣ್ಣುಗಳನ್ನು ಮಿಂಚಿಸಿ ನಗುತ್ತ ನುಡಿದರು "ಫ್ರೆಂಚ್‌ಲೀವ್, ಮಹಾಶಯರೇ ಫ್ರೆಂಚಲೀವ್- ನಿಮಗೆ ತಿಳಿಯಿತೊ ಇಲ್ಲವೊ ?"

ನನಗೆ ಅತ್ಯಂತ ಕ್ಲೇಶವೆನಿಸಿತು. ನಾನೆಂದೆ "ಹೀಗಾಯಿತೆ? ಹಾಗಾದರೆ ಇನ್ನು ಹೆಂಡತಿಗೆ ಬಹಳ ಕಷ್ಟವಾಗುವುದು !"

ನನ್ನ ಮಾತುಗಳನ್ನು ಕೇಳಿ ಅಣ್ಣಂದಿರು ಬಿದ್ದುಬಿದ್ದು ನಗತೊಡಗಿದರು. ಹಾಗೂ ಹೀಗೂ ಮಾಡಿ ನಗುವನ್ನು ಬಿಗಿಹಿಡಿದು "ಅಹಾ, ನೀವು ಬಹಳ ಚೆನ್ನಾಗಿ ಹೇಳಿದಿರಿ! ಈ ಬರ್ಮೀ ಮಹಿಳೆಯರಿಗೆ ಕಷ್ಟವೇ! ಈ ಪಿಶಾಚಿನಿಯರಿಗೆ ಏನರೀ ಕಷ್ಟ? ಇವರು ಊಟಮಾಡಿ ಬಾಯಿಮುಕ್ಕಳಿಸುವುದಿಲ್ಲ, ಎಂಜಲಗಿಂಜಲದ ವಿಚಾರವೇ ಇಲ್ಲ, ಜಾತಿಗೀತಿಯೂ ಇಲ್ಲ. ಎಲ್ಲರೂ ನೆಪ್ಪಿ (ಒಂದು ಬಗೆಯ ಕಳಿತ ಮೀನ) ತಿನ್ನುವರು ಮಹಾಶಯರೇ, ನೆಪ್ಪಿ! ಇವುಗಳ ನಾತಕ್ಕೆ ನಿಜವಾದ ಭೂತಪಿಶಾಚಿಗಳೂ ಓಡಿಹೋಗುವುವು ಓಡಿ. ಈ ಪಿಶಾಚಿನಿಗಳಿಗೆ ಕಷ್ಟ

ವೇನು! ಒಬ್ಬನು ಹೋದರೆ, ಇನ್ನೊಬ್ಬನನ್ನು ಹಿಡಿಯುವರು—ಕೀಳ ಜಾತಿಯವರು ಈ ಹೆಂಗುಸರು—" ಎಂದು ನುಡಿದರು.

"ತಡೆಯಿರಿ ಮಹಾಶಯರೇ, ತಡೆಯಿರಿ. ತಮ್ಮ ತಮ್ಮನಿಗೆ ಆಕೆಯು ನಾಲ್ಕು ವರ್ಷ ಹೊಟ್ಟೆಗೆ ಹಾಕಿರುವಳು, ಯಾವ ಬಗೆಯ ಕಷ್ಟವನ್ನೂ ಕೊಟ್ಟಿಲ್ಲ, ಹೂವಿನ ಹಾಗೆ ಇಟ್ಟಿರುವಳು. ನಿಮ್ಮಿಂದ ಏನಾದರೂ ಒಳ್ಳೆಯದನ್ನು ಮಾಡುವುದಾಗದಿದ್ದರೂ ಚಿಂತೆಯಿಲ್ಲ, ಸ್ವಲ್ಪ ಆಕೆಗೆ ಕೃತಜ್ಞತೆಯನ್ನಾದರೂ ತೋರಿಸಬಾರದೇ!"

ಅಣ್ಣಾಂದಿರ ಮುಖವು ಗಂಭೀರವಾಯಿತು. ಅವರು ಸ್ವಲ್ಪ ಸಮಯ ಸುಮ್ಮಗಿದ್ದು "ನೀವು ನನ್ನ ಬಾಯಿಯನ್ನು ಕಟ್ಟಿಬಿಟ್ಟಿರಿ ಮಹಾಶಯರೇ. ಗಂಡುಸಮಕ್ಕಳು, ಪರದೇಶದ ಭೂಮಿಯ ಮೇಲೆ ಬಂದು ವಯಸ್ಸಿನ ದೋಷದಿಂದ ಸ್ವಲ್ಪ 'ಮಜಾ' ಮಾಡಿದರೆ ಏನಾಯಿತು? ಹೀಗೆ ಯಾರು ಮಾಡುವುದಿಲ್ಲ ಹೇಳಿರಿ ನೋಡೋಣ? ನನಗೆ ತಿಳಿಯದೆ ರಹಸ್ಯವಾಗಿ ಯಾವುದೂ ಇಲ್ಲ—ಗುಟ್ಟು ಸ್ವಲ್ಪ ರಟ್ಟಾಗಿ ಹೋಗಿದೆ—ಎಲ್ಲರಿಗೂ ಗೊತ್ತು ಆಗಿ ಹೋಗಿರುವುದು—ಸರಿ, ಇದಕ್ಕಾಗಿಯೆ ಇವನು ಚಿರಕಾಲದ ವರೆಗೆ ಅಲೆಯುತ್ತ ಇರಬೇಕೇನು? ಒಳ್ಳೆಯವನಾಗಿ, ಗಾರ್ಹಸ್ಥ್ಯ ಜೀವನವನ್ನು ನಡೆಯಿಸಿ, ಪುನಃ ಐವರು ಪಂಚರಲ್ಲಿ ತನ್ನ ಸ್ಥಾನವನ್ನು ಪಡೆದುಕೊಳ್ಳಬಾರದೇನು? ಮಹಾಶಯರೇ, ಇದಂತೂ ದೊಡ್ಡ ಮಾತೇ ಅಲ್ಲ, ಚಿಕ್ಕ ವಯಸ್ಸಿನಲ್ಲಿ ಎಷ್ಟೋ ಜನರು ಹೋಟಲಿಗೆ ಹೋಗಿ ಕೋಳಿಯನ್ನು ಕೂಡ ತಿಂದು ಬರುವರು. ಆದರೆ ವಯಸ್ಸು ಆದ ಬಳಿಕ ಹೀಗೆ ಮಾಡುವರೇನು? ಮಾಡಿದರೆ ನಡೆದೀತಾದರೂ ಹೇಗೆ? ತಾವೇ ವಿಚಾರ ಮಾಡಿ ನೋಡಿರಲ್ಲ—ನಾನು ಹೇಳುವುದು ನಿಜವೊ ಸುಳ್ಳೋ ಎಂಬುದನ್ನು?" ಎಂದು ನುಡಿದರು.

ನಿಜವಾಗಿ ದೇವರು ನನಗೆ ಇಂತಹ ವಿಚಾರ ಮಾಡುವ ಬುದ್ಧಿಯನ್ನು ಕೊಟ್ಟಿಲ್ಲ. ಆದುದರಿಂದ ನಾನು ಸುಮ್ಮಗಾದೆ. ಕಚೇರಿಗೆ ಹೋಗುವ ಹೊತ್ತೂ ಆಗಿದ್ದರಿಂದ ಸ್ನಾನ ಮಾಡಿ, ಊಟ ತೀರಿಸಿಕೊಂಡು ಹೋಗಿಬಿಟ್ಟೆ.

ನಾನು ಕಚೇರಿಯಿಂದ ಬಂದ ಕೂಡಲೇ ಅವರು ಒಮ್ಮೆಗೇ ನಾನು ಯೋಚಿಸಿ ನೋಡಿದೆ, ತಮ್ಮ ಸಲಹೆಯೆ ಸರಿಯಾಗಿದೆ ಮಹಾಶಯರೇ. ಈ ಜಾತಿಯವರ ಮೇಲೆ ನಂಬಿಗೆಯಿಡುವಂತಿಲ್ಲ. ಹೋಗುವ ಕಾಲಕ್ಕೆ ಏನಾದರೊಂದು ಉಪದ್ರವ ಮಾಡಿ ಬಿಟ್ಟರೆ ಏನು ಮಾಡುವುದು ? ಆದ್ದರಿಂದ ಹೇಳಿ ಹೋಗುವುದೇ ಒಳ್ಳೆಯದು. ಈ ಹೆಂಗುಸರು ಮಾಡದೇ ಇರುವಂತಹ ಕೆಲಸವು ಏನಾದರೂ ಜಗತ್ತಿನಲ್ಲಿ ಇದೆಯೆ ! ನಾಚಿಕೆಯಿಲ್ಲ, ಮರ್ಯಾದೆಯಿಲ್ಲ, ಧರ್ಮದ ಜ್ಞಾನವೂ ಇಲ್ಲ. ಇವರಿಗೆ 'ದನ' ಎಂದು ಹೇಳಿದರೂ ತಪ್ಪಾಗಲಿಕ್ಕಿಲ್ಲ, ಅತಿಶಯೋಕ್ತಿಯೂ ಆಗಲಿಕ್ಕಿಲ್ಲ" ಎಂದರು.

"ಹೌದು, ಇದೇ ಸರಿಯಾದ ದಾರಿ."

ಆದರೆ ನನಗೆ ಅವರ ಮಾತಿನ ಮೇಲೆ ವಿಶ್ವಾಸವುಂಟಾಗದಾಯಿತು. ಇದರಲ್ಲಿ ಯಾವುದೊ ಒಂದು ಒಳಸಂಚು ಇರಬೇಕೆಂದು ನನಗೆ ಮನದೊಳಗೇ ಎನಿಸತೊಡಗಿತು. ನಿಜವಾಗಿಯೂ ಒಳಸಂಚು ಇದ್ದೇ ಇದ್ದಿತು. ಆದರೆ ಅವನು ಇಷ್ಟು ನೀಚ, ಇಷ್ಟು ನಿಷ್ಠುರ ಇರಬಹುದೆಂಬುದನ್ನು ಕಣ್ಣಾರೆ ಕಾಣದ ವಿನಾ ಯಾವನೂ ಕಲ್ಪನೆಯನ್ನು ಕೂಡ ಮಾಡಲಾರ—ಎಂಬುದನ್ನು ನಾನು ಯೋಚಿಸದಾದೆ.

ಚಟಗಾಂವದ ಹಡಗವು ರವಿವಾರ ಹೊರಡುವುದು. ನಮ್ಮ ಕಚೇರಿಗೆ ಬಿಡುವು ಇದ್ದಿತು. ಮುಂಜಾನೆ ನಾನು ಮಾಡುವುದಾದರೂ ಏನಿದ್ದಿತು ? ಅವರನ್ನು (ಸೀ ಆಫ್) ಬೀಳ್ಕೊಳ್ಳುವುದಕ್ಕಾಗಿ ಬಂದರಕ್ಕೆ ಹೋದೆ. ಹಡಗು ಆವಾಗ ಹೊರಡುವುದಕ್ಕೆ ಸಿದ್ಧವಾಗಿ ನಿಂತಿದ್ದಿತು. ಹೋಗುವ ಮತ್ತು ಹೋಗದೆ ಇರುವ ಜನರು ನೆರೆದಿದ್ದರು. ಪ್ರತಿಯೊಬ್ಬರೂ ಕೂಗಿ ಕೂಗಿ ಮಾತನಾಡುತ್ತಿದ್ದರು. ಒಬ್ಬರ ಮಾತು ಇನ್ನೊಬ್ಬರಿಗೆ ಮೆಲ್ಲಗೆ ಮಾತನಾಡಿದರೆ ಕೇಳುವಂತಿರಲಿಲ್ಲ. ಅತ್ತಿತ್ತ ನಾನು ನೋಡುತ್ತಿದ್ದೆ, ಇಷ್ಟರಲ್ಲಿ ನನ್ನ ದೃಷ್ಟಿ ಆ ಬರ್ಮೀ ಮಹಿಳೆಯ ಮೇಲೆ ಬಿದ್ದಿತು. ಒಂದು ಮೂಲೆಯಲ್ಲಿ ಆಕೆಯು ತನ್ನ ತಂಗಿಯ ಕೈಹಿಡಿದುಕೊಂಡು ನಿಂತಿದ್ದಳು. ಇಡಿ ರಾತ್ರಿ ಅತ್ತುದರಿಂದ ಆಕೆಯ ಕಣ್ಣುಗಳು ತದ್ರೂಪ ಕೆಂಪು ದಾಸಾಳದ ಹೂವಿನಂತಾಗಿದ್ದವು. ಚಿಕ್ಕಬಾಬೂಗಳು ಅತ್ಯಂತ ವ್ಯಸ್ತರಾಗಿದ್ದರು. ತಮ್ಮ ಸೈಕಲ್ಲು, ಟ್ರಂಕು,

ಹಾಸುಗೆ ಮತ್ತು ಯಾವುಯಾವುವೊ ಸಾಮಾನುಗಳನ್ನು ತೆಗೆದುಕೊಂಡು ಕೂಲಿಕಾರರ ಕೂಡ ಅತ್ತಿಂದ ಇತ್ತ ಇತ್ತಿಂದ ಅತ್ತ ಹೋಗಿ ಬರುತ್ತಿದ್ದರು. ಅವರಿಗೆ ನಿಮಿಷ ಮಾತ್ರವೂ ಅವಕಾಶ ಇರಲಿಲ್ಲ.

ಒಂದೊಂದಾಗಿ ಮೆಲ್ಲನೆ ಎಲ್ಲ ವಸ್ತುಗಳೂ ಹಡಗವನ್ನು ಹತ್ತಿದುವು. ಪ್ರವಾಸಿಕರೂ ನುಗ್ಗುತ್ತ ಮುಗ್ಗುತ್ತ ಹಡಗನ್ನು ಹತ್ತಿದರು. ಯಾತ್ರಿಕರಲ್ಲದವರು ಕೆಳಗೆ ಇಳಿದು ಬಂದರು. ಹಡಗವು ಬಂದರ ಬಿಡುವ ಸಂಜ್ಞೆಯಾಯಿತು. ಬಾಬೂ ಸಾಹೇಬರು ತಮ್ಮ ಸಾಮಾನುಗಳನ್ನು ಸುರಕ್ಷಿತವಾಗಿ ಇಟ್ಟು ಮತ್ತು ತಮ್ಮ ಸ್ಥಳವನ್ನು ಸರಿಪಡಿಸಿಕೊಂಡು ಹಡಗದಿಂದ ಕೆಳಗೆ ಇಳಿದು ಬಂದರು. ಏಕೆ? ಪ್ರಪಂಚದ ನಿಷ್ಠುರತಮವಾದ ಅಂಕಿನ ಅಭಿನಯವನ್ನು ಮಾಡುವುದಕ್ಕಾಗಿ, ತಮ್ಮ ಬರ್ಮೀ ಹೆಂಡತಿಯಿಂದ ನಿರೋಪವನ್ನು ತೆಗೆದುಕೊಳ್ಳುವುದಕ್ಕಾಗಿ ಇಳಿದು ಬಂದರು. ಅವರು ಎರಡನೆಯ ದರ್ಜೆಯ ಪ್ರಯಾಣಿಕರು. ಆದುದರಿಂದ ಅವರಿಗೆ ಈ ಅಧಿಕಾರ—ಕೆಳಗಿಳಿದು ಬರುವ ಅಧಿಕಾರ—ಇದ್ದಿತು.

ಇದರ ಆವಶ್ಯಕತೆಯಾದರೂ ಏನಿದ್ದಿತು ಎಂಬುದನ್ನು ನಾನು ಎಷ್ಟೋ ಬಾರಿ ಯೋಚಿಸಿರುವೆ! ಮನುಷ್ಯನು ಬಲಾತ್ಕಾರದಿಂದ ತನ್ನ ಮಾನವ-ಆತ್ಮನಿಗೆ ಈ ರೀತಿಯಾಗಿ ಏಕೆ ಅಪಮಾನ ಮಾಡುವ! ಮಂತ್ರ-ದೀಕ್ಷಿತ ಹೆಂಡತಿ ಆಗದಿದ್ದರೆ ಏನಾಯಿತು? ಆಕೆಯು ಹೆಂಡತಿಯೆ ಅಲ್ಲವೆ! ಆಕೆಯು ಕನ್ಯಾ, ಭಗಿನಿ, ಜನನಿಯ ಜಾತಿಯವಳೇ ಇರುವಳಲ್ಲ! ಆಕೆಯ ಆಶ್ರಯದಲ್ಲಿಯೆ ಇಷ್ಟು ಸುದೀರ್ಘ ಕಾಲದವರೆಗೆ ಗಂಡನ ಸಮಸ್ತ ಅಧಿಕಾರಗಳನ್ನು ಉಪಭೋಗಿಸುತ್ತ ಅವನು ಅಲ್ಲಿ ಇದ್ದನು! ಆಕೆಯು ತನ್ನ ವಿಶ್ವಸ್ತ ಹೃದಯದ ಸಂಪೂರ್ಣ ಮಾಧುರ್ಯ, ಸಂಪೂರ್ಣ ಅಮೃತ, ಸಂಪೂರ್ಣ ಶರೀರ ಮತ್ತು ಮನಸ್ಸನ್ನು ಅವನಿಗೆ ಸಮರ್ಪಿಸಿ ಬಿಟ್ಟಿರುವಳು! ಆದರೆ ಅವನು ಯಾವ ಲೋಭದಿಂದ ಈ ಅಗಣಿತ ಜನರ ಕಣ್ಣೆದುರಿಗೆ ಆಕೆಯನ್ನು ನಿರ್ದಯ ಪರಿಹಾಸದ ಮತ್ತು ಆಟದ ವಸ್ತುವನ್ನಾಗಿ ಮಾಡಿ ಹೊರಟು ಹೋದ! ಅವನು ಒಂದು ಕೈಯಿಂದ ಕರವಸ್ತ್ರ ಹಿಡಿದುಕೊಂಡು ಕಣ್ಣು ಮುಚ್ಚಿಕೊಂಡಿದ್ದ, ಇನ್ನೊಂದು ಕೈಯನ್ನು ಆಕೆಯ ಕೊರಳಿಗೆ ಸುತ್ತು ಹಾಕಿ

ಅಳುವಿನ ದನಿಯಲ್ಲಿ ಏನೇನೊ ಹೇಳುತ್ತಿದ್ದ. ಆ ಹೆಂಣುಮಗಳು ತನ್ನ ಸೆರಗಿನಲ್ಲಿ ಮುಖ ಮುಚ್ಚಿಕೊಂಡು ಅಳುತ್ತಿದ್ದಳು.

ಸುತ್ತುಮುತ್ತು ಬಂಗಾಲಿ ಜನರು ನಿಂತಿದ್ದರು. ಅವರಲ್ಲಿ ಕೆಲವರು ಮುಖ ತಿರುಗಿಸಿ ನಗುತ್ತಿದ್ದರು, ಕೆಲವರು ಕರವಸ್ತ್ರದಿಂದ ಬಾಯಿ ಮುಚ್ಚಿಕೊಂಡು ನಗುವನ್ನು ತಡೆ ಹಿಡಿಯಲು ಯತ್ನಿಸುತ್ತಿದ್ದರು. ನಾನು ಸ್ವಲ್ಪ ದೂರದಲ್ಲಿದ್ದೆ, ಆದ್ದರಿಂದ ಮೊದಲು ನನಗೆ ತಿಳಿಯಲಿಲ್ಲ, ಸ್ವಲ್ಪ ಹತ್ತಿರ ಹೋದ ಬಳಿಕ ಎಲ್ಲ ಮಾತುಗಳು ಸ್ಪಷ್ಟವಾಗಿ ಕೇಳಿ ಬರತೊಡಗಿದುವು. ಅಳುವ ದನಿಯಲ್ಲಿ ಅವರು—ಬರ್ಮೀ ಮತ್ತು ಹಳ್ಳಿಯ ಬಂಗಾಲಿಗಳು ಕೂಡಿ ವಿಲಾಪ ಮಾಡುತ್ತಿದ್ದರು. ಒಂದು ವೇಳೆ ಬಂಗಲಾ ಭಾಷೆಯಲ್ಲಿ ಪರಿಮಾರ್ಜಿತ ಮಾಡಿ ಬರದರೆ ವಿಲಾಪದ ರೂಪವು ಹೀಗೆ ಆಗಬಹುದು—"ಒಂದು ತಿಂಗಳಾದ ಬಳಿಕ ರಂಗ ಪುರದಿಂದ ತಂಬಾಕನ್ನು ಕೊಂಡುಕೊಂಡು ಹೇಗೆ ಬರುವೆನೆಂಬುದನ್ನು ನಾನೇ ಬಲ್ಲೆ ! ಓ ನನ್ನ ರತ್ನಮಣಿ ! ನಿನಗೆ ಬಾಳೆ ಹಣ್ಣು ತೋರಿಸಿ,* ಬಾಳೆಹಣ್ಣು ತೋರಿಸಿ ಹೋದನೊ ಅವನು."

ಅವರು ಇದೆಲ್ಲವನ್ನು ನಮ್ಮಂತಹ ಕೆಲವರು ಬಂಗಾಲಿಗಳನ್ನು ನಗಿಸುವುದಕ್ಕೋಸ್ಕರವಾಗಿಯೆ ಮಾಡುತ್ತಿದ್ದರು. ಆದರೆ ಅವರ ಹೆಂಡತಿಗೆ ಬಂಗಲಾ ಭಾಷೆಯು ತಿಳಿಯುತ್ತಿದ್ದಿಲ್ಲ. ಕೇವಲ ಅಳುವ ದನಿಯಿಂದಲೇ ಆಕೆಯ ಎದೆಯು ಬಿರಿಯುತ್ತಿದ್ದಿತು.. ಆಕೆಯು ತನ್ನ ಅಗಲುವ ಪತಿಯ ಕಂಬನಿಯನ್ನು ಒರೆಯಿಸಿ ಸಂತೈಸುವ ಯತ್ನ ಮಾಡುತ್ತಿದ್ದಳು.

ಬಾಬೂಸಾಹೇಬರು ಬಿಕ್ಕಿಬಿಕ್ಕಿ ಅಳುತ್ತ "ತಂಬಾಕನ್ನು ಕೊಂಡುಕೊಳ್ಳಲು ಐದು ಸಾವಿರ ರೂಪಾಯಿಗಳನ್ನು ಮಾತ್ರ ಕೊಟ್ಟಿರುವರು.—ನಿನ್ನ ಹತ್ತರ ಈಗ ಏನು ಇದೆ—ಹೊಟ್ಟೆಯಂತೂ ತುಂಬಿಯೆ ಇಲ್ಲ—ಇದೇ ಬಗೆಯಾಗಿ ನಿನ್ನ ಸಂಗತಿಯೆಲ್ಲವನ್ನೂ ಸಭ್ಯಗೃಹಸ್ಥರ ಹುಡುಗನ ಹಾಗೆ ಮಾರಿ ಮನೆಗೆ ಯಾರು ಬಲ್ಲವನಾಗಿದ್ದರೆ, ಒಂದು

---

* ಕನ್ನಡವಲ್ಲಿ ಹೇಳುವ್ವುದಾದರೆ ಬಲಗೈಯ ಮುಷ್ಟಿಯನ್ನು ಮಾಡಿ ಎಡಗೈ ಯಿಂದ ಮಣಿಕಟ್ಟನ್ನು ಹಿಡಿದು-ತೋರಿಸಿ ಇದು ಎಂದು ಹೇಳಬಹುದು.

ದೊಡ್ಡ ಕೆಲಸ ನಾಡಿದಂತೆ ಆಗುತ್ತಿತ್ತೆಂದು ತಿಳಿದುಕೊಳ್ಳುತ್ತಿದ್ದೆ! ಅಯ್ಯೋ, ಇವೆಲ್ಲ ಹ್ಯಾ ಆಗಲಿಲ್ಲೇ! ಆಗಲಿಲ್ಲ." ಎಂದರು.

ಅಕ್ಕಪಕ್ಕದಲ್ಲಿದ್ದವರು ತಮ್ಮ ನಗುವನ್ನು ಬಿಗಿ ಹಿಡಿದುಕೊಂಡು ಹೊಟ್ಟೆಯುಬ್ಬಿಸಿಕೊಂಡಿದ್ದರು; ಆದರೆ ಯಾವಾತೆಯ ಬಗ್ಗೆ ಇಷ್ಟು ನಗೆಯಾಗುತ್ತಿದ್ದಿತೊ ಆಕೆಯ ಕಣ್ಣುಗಳು ಮತ್ತು ಕಿವಿಗಳು ದುಃಖ ದಿಂದ ಬಂದ ಕಂಬನಿಗಳಿಂದ ತೊಯ್ದು ಹೋಗಿದ್ದುವು! ವೇದನೆಯಿಂದ ಆಕೆಯು ಎಲ್ಲಿ ಜೀವ ಬಿಡುವಳೊ ಎಂದು ಎನಿಸುತ್ತಿದ್ದಿತು!

ಅಂಬಿಗರು ಮೇಲಿಂದ ಕೂಗಿ ಹೇಳಿದರು "ಬಾಬೂ, ನಿಚ್ಚಣಿಕೆ ಯನ್ನು ತೆಗೆಯುವೆವು."

ಅವರು ಆಕೆಯ ಕೊರಳೊಳಗಿನ ಕರದ ಮಾಲೆಯನ್ನು ತೆಗೆದು ನಿಚ್ಚಣಿಕೆಯ ವರೆಗೆ ಹೋಗರು. ಮತ್ತೆ ಆಕೆಯ ಬಳಿಗೆ ಹಿಂತಿರುಗಿ ಹೋದರು. ಹೆಂಡತಿಯ ಕೈಯಲ್ಲಿ ಹಳೆಯ ಕಾಲದ ಒಳ್ಳೆಯ ಹರಳಿನ ಒಂದು ಉಂಗುರವಿದ್ದಿತು. ಅವರ ಮೇಲೆ ಕೈಯಿಟ್ಟು ಅಳುತ್ತ "ಇದನ್ನೇ ಕೊಡೇ, ಉಂಗುರವನ್ನೇ ಒಯ್ಯುವೆ. ಮಾರಿದರೆ ಕನಿಷ್ಠ ಪಕ್ಷಕ್ಕೆ ಎರಡು ಎರಡೂವರೆ ನೂರು ರೂಪಾಯಿಗಳಾದರೂ ಸಿಕ್ಕುವುವು—ಇವನ್ನಾದರೂ ಏಕೆ ಬಿಡಲಿ?" ಎಂದರು.

ಹೆಂಡತಿಯು ಅದನ್ನು ಕೂಡಲೇ ತೆಗೆದು ತನ್ನ ಪ್ರಿಯತಮನ ಬೆರಳಲ್ಲಿಟ್ಟಳು. "ಸಿಕ್ಕಷ್ಟೇ ಲಾಭ!" ಎಂದು ಅವರು ಅಳುತ್ತ ಅಳುತ್ತ ನಿಚ್ಚಣಿಕೆಯನ್ನೇರಿದರು. ಹಡಗವು ಬಂದರವನ್ನು ಬಿಟ್ಟು ಮೆಲ್ಲಮೆಲ್ಲನೆ ಮುಂದಕ್ಕೆ ಸರಿಯತೊಡಗಿತು. ಆ ಹೆಣ್ಣು ಮಗಳು ಮುಖದ ಮೇಲೆ ಸೆರಗನ್ನು ಹೊದ್ದುಕೊಂಡು ಅಲ್ಲಿಯೆ ಮೊಳಕಾಲೂರಿ ಕುಳಿತುಬಿಟ್ಟಳು. ಎಷ್ಟೋ ಜನರು ಹಲ್ಲು ಕಿರಿಯುತ್ತ ನಗುತ್ತ ಹೊರಟು ಹೋದರು. ಒಬ್ಬನೆಂದ "ಬಪ್ಪರೆ ಹುಡುಗ" ಇನ್ನೊಬ್ಬ ನೆಂದ "ಬಪ್ಪರೆ ಶೂರ ವೀರ!" ಬಹಳ ಜನರು ಹೀಗೆನ್ನುತ್ತ ಹೋದರು. "ಎಂತಹ ಆಟ ತೋರಿಸಿದ! ನಕ್ಕು ನಕ್ಕು ಹೊಟ್ಟೆಯು ಕುಟ್ಟಿ ಹಿಡಿದಿತು!" ಹೀಗೆ ಜನರು ಅದೆಷ್ಟೋ ರೀತಿಯಲ್ಲಿ ತಮ್ಮ ಮನದ ಮಾತುಗಳನ್ನು ಹೇಳಿ ಹೋದರು. ಆದರೆ, ನಾನೊಬ್ಬನೇ

ಎಲ್ಲರ ಹಾಸ್ಯಕ್ಕೆ ಗುರಿಯಾಗಿದ್ದ ಆ ಹಸುಳೆಯಂತಹ ಹೆಂಗುಸಿನ ಸೀಮಾತೀತ ದುಃಖಕ್ಕೆ ಸಾಕ್ಷಿಯಾಗಿ ಸುಮ್ಮನೆ ನಿಂತುಬಿಟ್ಟೆದ್ದೆ.

ತಂಗಿಯು ತನ್ನ ಅಕ್ಕನ ಕಂಬನಿಗಳನ್ನು ಒರೆಸಿ ಆಕೆಯ ಕೈ ಹಿಡಿದು ಎಳೆಯುತ್ತಿದ್ದಳು. ನಾನು ಹತ್ತಿರಕ್ಕೆ ಹೋಗಿ ನಿಲ್ಲುತ್ತಲೇ ಆಕೆಯು ಮೆಲ್ಲಗೆ "ಬಾಬುಗಳು ಬಂದಿರುವರು ಅಕ್ಕ, ಏಳು." ಎಂದಳು.

ಮುಖವೆತ್ತಿ ಆಕೆಯು ನನ್ನ ಕಡೆಗೆ ನೋಡಿದಳು. ಕೂಡಲೆ ಆಕೆಯ ಅಳುವಿನ ಒಡ್ಡು ಒಡೆದು ಹೋಯಿತು. ಆಕೆಯನ್ನು ಸಂತೈಸುವುದಕ್ಕಾಗಿ ನನ್ನ ಬಳಿಯಲ್ಲಾದರೂ ಏನಿದ್ದಿತು! ಆದಾಗ್ಯೂ ನಾನು ಆ ದಿನ ಆಕೆಯ ಜೊತೆಯನ್ನು ಬಿಡಲಿಲ್ಲ. ಆಕೆಯ ಹಿಂದೆ ಹಿಂದೆಯೆ ಆಕೆಯ ಗಾಡಿಯಲ್ಲಿ ಕುಳಿತೆ. ದಾರಿಯುದ್ದಕ್ಕೂ ಆಕೆಯು ಅತ್ತು ಅತ್ತು ಎನ್ನುತ್ತಿದ್ದಳು"ಬಾಬೂಜೀ, ಈ ದಿನ ನನ್ನ ಮನೆಯು ಶೂನ್ಯವಾಯಿತು. ಹೇಗೆ ನಾನು ಆ ಮನೆಯಲ್ಲಿ ಕಾಲಿಡಲಿ? ತಂಬಾಕನ್ನು ಕೊಂಡುಕೊಳ್ಳಲು ಒಂದು ತಿಂಗಳಮಟ್ಟಿಗೆ ಮಾತ್ರ ಹೋಗಿರುವರು — ಈ ಒಂದು ತಿಂಗಳವನ್ನು ನಾನು ಹೇಗೆ ಕಳೆಯಲಿ! ಪರದೇಶದಲ್ಲಿ ಅವರು ಎಷ್ಟು ತೊಂದರೆಪಡಬೇಕಾಗುವುದೊ, ಅವರನ್ನು ನಾನೇಕೆ ಹೋಗಗೊಟ್ಟೆ! ರಂಗೂನ ಪೇಟೆಯಲ್ಲಿ ಸಿಕ್ಕುವ ತಂಬಾಕಿನಿಂದ ನಮ್ಮ ಕಾರ್ಯ ಚೆನ್ನಾಗಿ ಸಾಗಿದ್ದಿತು; ಹೆಚ್ಚು ಲಾಭ ಪಡೆಯುವ ಆಸೆಯಿಂದ ನಾನೇಕೆ ಅವರನ್ನು ಇಷ್ಟುದೂರ ಕಳಿಸಿಬಿಟ್ಟೆ! ದುಃಖದಿಂದ ನನ್ನ ಎದೆಯು ಸಿಡಿಯುತ್ತಿರುವುದು! ಬಾಬೂಜೀ, ಮುಂದಿನ ಮೇಲ್ ಗಾಡಿಯಿಂದಲೇ ನಾನು ಅವರ ಬಳಿಗೆ ಹೋಗುವೆ." ಆಕೆಯು ಈ ಮಾತುಗಳನ್ನೂ ಮತ್ತೂ ಏನೇನನ್ನೊ ಹೇಳುತ್ತಿದ್ದಳು.

ನಾನು ಒಂದೂ ಮಾತಿಗೆ ಉತ್ತರವೀಯಲಿಲ್ಲ. ಕೇವಲ ನನ್ನ ಮುಖವನ್ನು ಕಿಡಿಕಿಯ ಕಡೆಗೆ ತಿರುಗಿಸಿಕೊಂಡು ಕುಳಿತು, ನನ್ನ ಕಂಬನಿಗಳನ್ನು ಆಕೆಗೆ ತೋರಿಸದೆ ಇರಲು ಯತ್ನಮಾಡುತ್ತಿದ್ದೆ.

ಆಕೆಯು ಎನ್ನತೊಡಗಿದಳು "ಬಾಬೂಜೀ, ನಿಮ್ಮ ಜಾತಿಯವರು ಪ್ರೇಮ ಮಾಡುವಷ್ಟು ನಮ್ಮ ಜನರು ಮಾಡಲಾರರು. ನಿಮ್ಮ ಜನರಲ್ಲಿ

ಇರುವಷ್ಟು ದಯೆ-ಮಾಯೆ ಇನ್ನಾವ ದೇಶದ ಜನರಲ್ಲಿಯೂ ಇರುವುದಿಲ್ಲ. ”

ಸ್ವಲ್ಪ ಹೊತ್ತು ತಡೆದು ಪುನಃ ಒಂದೆರಡು ಬಾರಿ ಅತ್ತಳು. ಪುನಃ ಕಣ್ಣೊರಿಸಿಕೊಂಡು ಎನ್ನತೊಡಗಿದಳು, “ ಬಾಬುಗಳ ಪ್ರೀತಿಯನ್ನು ಅಪ್ಪಿಕೊಂಡು ನಾನು ಅವರ ಕೂಡ ಇರತೊಡಗಿದೆ; ಆಗ ನನಗೆ ಎಷ್ಟೋ ಜನರು ಹೆದರಿಕೆ ಹಾಕಿ ಅವರಿಂದ ಬೇರೆ ಇರಲು ಯತ್ನಿಸಿದರು. ನಾನು ಅವರ ಮಾತಿನಕಡೆಗೆ ವ್ಯವಹಾರದಕಡೆಗೆ ಲಕ್ಷ್ಯವನ್ನೇ ಕೊಡಲಿಲ್ಲ. ಈಗ ಎಷ್ಟೋ ಜನ ಹೆಂಗುಸರು ನನ್ನ ಭಾಗ್ಯವನ್ನು ನೋಡಿ ಮನದಲ್ಲಿಯೇ ಅಸೂಯೆಪಡುತ್ತಿರುವರು. ” ಎಂದು.

ಕೂಟನಲ್ಲಿ ಇಳಿದು ನಾನು ನನ್ನ ಮನೆಗೆ ಹೋಗಬಯಸಿದೆ. ಆಕೆಯು ವ್ಯಾಕುಲತೆಯಿಂದ ಗಾಡಿಯ ಬಾಗಿಲನ್ನು ತನ್ನ ಎರಡೂ ಕೈಗಳಿಂದ ಅಡ್ಡಗಟ್ಟಿ “ ಬೇಡ, ಹೀಗೆ ಮಾಡಬೇಡಿರಿ. ನೀವು ನಮ್ಮ ಸಂಗಡ ಮನೆತನಕ ಬಂದು ಒಂದು ಕಪ್ಪು ಚಹಾ ಕುಡಿದು ಹೋಗಬೇಕು. ನಡೆಯಿರಿ. ” ಎಂದಳು.

ನಾನು ಒಲ್ಲೆನ್ನದಾದೆ. ಗಾಡಿಯು ಮುಂದೆ ಸಾಗತೊಡಗಿತು. ಆಕೆಯು ಒಮ್ಮೆಗೇ ಕೇಳಿದಳು. “ ಬಾಬೂಜೀ, ರಂಗಪುರ ಎಷ್ಟು ದೂರ ಇರುವುದು ? ನೀವು ಅಲ್ಲಿಗೆ ಎಂದಾದರೂ ಹೋಗಿದ್ದೀರಾ ? ಊರು ಹೇಗಿದೆ ? ಕಾಯಿಲೆಯಾದರೆ ಅಲ್ಲಿ ಡಾಕ್ಟರರು ಸಿಕ್ಕುವರಲ್ಲವೆ?”

ಹೊರಗೆ ನೋಡುತ್ತ ನಾನು “ ಸಿಕ್ಕುವುದಿಲ್ಲವೇಕೆ ? ಸಿಕ್ಕುವರು ” ಎಂದು ಉತ್ತರ ಕೊಟ್ಟೆ.

ಒಂದು ನಿಟ್ಟುಸಿರು ಬಿಟ್ಟು ಆಕೆಯೆಂದಳು “ ಘಯಾ ( ದೇವರು) ಅವರನ್ನು ನೆಮ್ಮದಿಯಾಗಿರಿಸಲಿ ! ಅವರ ಅಣ್ಣಂದಿರೂ ಜೊತೆಯಲ್ಲಿರುವರು. ಅವರು ಬಹಳ ಒಳ್ಳೆಯವರು. ಅವರು ತಮ್ಮ ತಮ್ಮಂದಿರನ್ನು ಪ್ರಾಣಕ್ಕಿಂತ ಹೆಚ್ಚು ಸುರಕ್ಷಿತವಾಗಿಡುವರು. ನಿಮ್ಮ ಜನರ ಶರೀರವೇ ಪ್ರೀತಿಯಿಂದ ಮಾಡಲ್ಪಟ್ಟುದು ! ನನ್ನಿಯಿಂದ ತುಂಬಿದುದು ! ನಾನು ಚಿಂತೆ ಮಾಡಬೇಕಾದುದಿಲ್ಲ ತಾನೇ ಬಾಬೂಜೀ ? ”

ನಾನು ಸುಮ್ಮನೆ ಹೊರಗೆ ನೋಡುತ್ತಿದ್ದೆ; ಮತ್ತು ಯೋಚಿಸುತ್ತಿದ್ದೆ—ಈ ಮಹಾಪಾಪದಲ್ಲಿ ನನ್ನದೆಷ್ಟು ಭಾಗವಿರುವುದು? ನಾನು ಆಲಸ್ಯದಿಂದಾಗಲಿ, ನಾಚಿಕೆಯಿಂದಾಗಲಿ, ಬುದ್ಧಿಮಂಕಾಗಿಯಾಗಲಿ, ಬಾಯಿ ಮುಚ್ಚಿಕೊಂಡು ಇಷ್ಟು ದೊಡ್ಡ ಅನ್ಯಾಯವನ್ನು ನಡೆಯಗೊಟ್ಟೆ. ಒಂದು ಮಾತನ್ನೂ ವಿರುದ್ಧವಾಗಿ ನುಡಿಯಲಿಲ್ಲ. ಈ ಅಪರಾಧದಿಂದ ನನಗೆ ಮುಕ್ತಿಯು ದೊರೆಯುವುದೇ? ಮುಕ್ತಿಯು ದೊರೆಯುತ್ತಿದ್ದರೆ, ಈ ಮಹಾಪಾಪದಲ್ಲಿ ನನ್ನದೇನೂ ಭಾಗವಿರದಿದ್ದರೆ ನಾನೇಕೆ ತಲೆಯೆತ್ತಿಕೊಂಡು ಕುಳಿತುಕೊಳ್ಳಲಾರೆ? ಆಕೆಯ ಕಣ್ಣುಗಳನ್ನು ನೋಡಲು ನಾನೇಕೆ ಸಾಹಸ ಮಾಡಲಾರದವನಾಗಿರುವೆ?

ಚಹಾ-ಬಿಸ್ಕುಟ್ ತೆಗೆದುಕೊಂಡು, ಅವರ ವೈವಾಹಿಕ ಜೀವನದ ಲಕ್ಷಾಂತರ ಸಂಗತಿಗಳ ವಿಸ್ತೃತ ಇತಿಹಾಸವನ್ನು ಕೇಳಿ, ನಾನು ಅವರ ಮನೆಯಿಂದ ಹೊರಬಿದ್ದಾಗ ಹಗಲು ಬಹಳ ಉಳಿದಿರಲಿಲ್ಲ. ಮನೆಗೆ ಹೋಗಲು ಇಚ್ಛೆಯಾಗಲಿಲ್ಲ. ಎಲ್ಲ ಜನರೂ ಹಗಲೆಲ್ಲ ಕೆಲಸ ಮಾಡಿ ಸಾಯಂಕಾಲಕ್ಕೆ ತಮ್ಮ ತಮ್ಮ ಮನೆಗೆ ಹಿಂತಿರುಗಿ ಬಂದಿರುವರು. ಠಾಕೂರದಾದಾನ ಹೋಟಲ್ಲು ಆಗ ತರತರದ ಹಾಸ್ಯ-ಪರಿಹಾಸ್ಯದಿಂದ ಪ್ರಸ್ಫುಟಿತವಾಗುತ್ತಿರುವುದು. ಆದರೆ ಈ ನಗುವಿನ ಲಹರಿ ನನಗೆ ನಂಜಿನಂತೆನಿಸತೊಡಗಿತು.

ನಾನು ದಾರಿಯುದ್ದಕ್ಕೂ ಈ ಸಮಸ್ಯೆಯ ಮೀಮಾಂಸೆಯು ಹೇಗಾಗುವುದು ಎಂದು ಯೋಚಿಸುತ್ತ ಹೊರಟೆ. ಬರ್ಮೀ ಜನರಲ್ಲಿ ವಿವಾಹದ ವಿಷಯವಾಗಿ ಯಾವ ಕಟ್ಟು-ನಿಯಮ ಇಲ್ಲ. ವಿವಾಹದ ಒಂದು ಕುಲೀನ ವಿಧಿಯೂ ಉಂಟು. ಗಂಡ-ಹೆಂಡತಿಯಂತೆ ಯಾವ ಗಂಡುಸು-ಹೆಂಗುಸು ಮೂರು ದಿನಗಳ ವರೆಗೆ ಒಟ್ಟುಗೂಡಿ ಇದ್ದು ಒಂದೇ ಪಾತ್ರೆಯಲ್ಲಿ ಊಟ ಮಾಡಿದರೆ ಆಯಿತು, ಅವರ ವಿವಾಹವಾಯಿತೆಂದು ತಿಳಿಯಲಾಗುತ್ತಿರುವುದು. ಸಮಾಜವೂ ಈ ವಿವಾಹವನ್ನು ತಿರಸ್ಕಾರದ ದೃಷ್ಟಿಯಿಂದ ನೋಡುವುದಿಲ್ಲ; ವಿವಾಹವನ್ನು ಒಪ್ಪಿಕೊಳ್ಳದೆ ಇರುವುದೂ ಇಲ್ಲ. ಈ ರೀತಿಯಾಗಿ ಮದುವೆಯಾದ ಹೆಂಗುಸನ್ನು ಯಾರೂ ಕೀಳು ದೃಷ್ಟಿಯಿಂದ ಕಾಣುವುದಿಲ್ಲ. ಆದರೆ,

'ಬಾಬೂ' ಸಾಹೇಬರ ಹಿಂದೂ ನಿಯಮಕ್ಕನುಸಾರವಾಗಿ ಇದು ಏನೂ ಇಲ್ಲ; ಇದು ವಿವಾಹವಲ್ಲ. ಈ ಹೆಂಗುಸನ್ನು ತಮ್ಮ ದೇಶಕ್ಕೆ ಕರೆದು ಕೊಂಡು ಹೋಗಿ ಪತಿಪತ್ನಿಯಂತೆ ಇರಲಾರರು. ಹಿಂದೂ ಸಮಾಜವು ಅವರನ್ನು ತನ್ನವರನ್ನಾಗಿ ಮಾಡಿಕೊಳ್ಳಲಿಕ್ಕಿಲ್ಲ; ಕೀಳರಲ್ಲಿ ಕೀಳರು ಸಹ ಅವರನ್ನು ಕೀಳು ದೃಷ್ಟಿಯಿಂದ ನೋಡತೊಡಗಬಹುದು, ಇದನ್ನು ಜೀವಿಸಿರುವ ವರೆಗೆ ಸಹಿಸುವುದು ಅತ್ಯಂತ ಕಠಿನವಾದುದು. ಅವರು ಚಿರಕಾಲದ ವರೆಗೆ ಪ್ರವಾಸದಲ್ಲಿಯೆ ಇದ್ದರೂ ಹಿಂದೂ ಸಮಾಜಕ್ಕೆ ಪರವಾ ಇಲ್ಲ. ಅಣ್ಣಂದಿರು ತಮ್ಮನ ಸಲುವಾಗಿ ಮಾಡಿದ ವ್ಯವಸ್ಥೆಯೆ ಒಳಿತಾದುದು. ಇಷ್ಟಾದಾಗ್ಯೂ 'ಧರ್ಮ' ಎನ್ನುವಂತಹದೊಂದು ಯಾವುದಾದರೂ ವಸ್ತುವು ಇದ್ದರೆ—ಅದು ಹಿಂದೂಗಳದೇ ಇರಲಿ, ಇನ್ನಿತರರದೇ ಇರಲಿ—ಅದರ ದೃಷ್ಟಿಯಲ್ಲಿ ಈ ಅಮಾನುಷ್ಯ ವ್ಯವ ಹಾರವು ಯಾವ ರೀತಿಯಲ್ಲಿ ಸರಿಯಾಗಿರುವುದು ಎಂಬುದೇ ನನ್ನ ಬುದ್ಧಿಗೆ ನಿಲುಕದ ಮಾತಾಗಿರುವುದು. ಇವೆಲ್ಲ ವಿಷಯಗಳನ್ನು ಸಮಯವು ದೊರೆತಾಗ ಕೂಲಂಕಷವಾಗಿ ಯೋಚಿಸಿ ನೋಡುವೆ. ಈ ಹೇಡಿ ಗಂಡಸು ನಿರಪರಾಧಿಯಾದ, ನಿರಾಧಾರಿಯಾದ ನಾರಿಯ ಪರಮ ಸ್ನೇಹದ ಮೇಲೆ ವೇದನೆಯ ಹೊರೆಯನ್ನು ಹೊರಿಸಿ, ಮೋಸಮಾಡಿ ಓಡಿಹೋದನಲ್ಲ, ಎಂಬ ಮಾತು ಮನದಲ್ಲಿ ಬಂದೊಡನೆಯೆ ಸಿಟ್ಟಿನಿಂದ ನಾನು ಸುಟ್ಟು ಸುಟ್ಟು ಬೂದಿಯಾಗುತ್ತಿರುವೆ.

ಬೀದಿಯ ಬದಿಯಲ್ಲಿ ನಾನು ಯೋಚಿಸುತ್ತ ನಡೆದೇ ನಡೆದೆ; ನಡೆದೇ ನಡೆದೆ. ಬಹಳ ದಿನಗಳ ಹಿಂದೆ ಒಂದು ದಿನ ಅಭಯಾಳ ಪತ್ರವನ್ನು ಓದಲು ಉತ್ಸುಕನಾಗಿ ಯಾವ ಚಹಾದ ಅಂಗಡಿಗೆ ಹೋಗಿ ದ್ದೆನೋ ಅದರ ಒಡೆಯನು ನನ್ನನ್ನು ಕೂಗಿ ಕರೆದ "ಬಾಬೂಸಾಹೇ ಬರೇ, ಬನ್ನಿರಿ ಎಂದು."

ಕನಸು ಕಾಣುತ್ತಿರುವಾಗ ಒಮ್ಮೆಗೆ ಎಚ್ಚರಾದಂತೆ ನಾನು ಎಚ್ಚತ್ತು ನೋಡಿದೆ. ಅದೇ ಅಂಗಡಿ, ರೋಹಿಣಿ ಭೈಯಾನ ಮನೆ. ನಾನು ಏನನ್ನೂ ಮಾತನಾಡದೆ ನೇರವಾಗಿ ಆ ಮನೆಯನ್ನು ಹೊಕ್ಕೆ ಮತ್ತು ಒಂದು ಕಪ್ಪು ಚಹಾ ಕುಡಿದು ಹೊರಗೆ ಹೊರಟೆ. ರೋಹಿಣಿ ಬಾಬು

ಗಳ ಮನೆಯ ಬಾಗಿಲನ್ನು ನೂಕಿದೆ. ಒಳಗಿನಿಂದ ಬಂದು ಮಾಡಲ್ಪಟ್ಟಿದ್ದಿತು. ಹೊರಗಿನ ಚಿಲಕವನ್ನು ಮೂರು ನಾಲ್ಕು ಸಲ ಬಾರಿಸಿದೆ; ಬಾಗಿಲು ತೆರೆಯಿತು. ಕಣ್ಣೆತ್ತಿ ನೋಡಿದೆ —ಎದುರಿಗೆ ಅಭಯಾ ನಿಂತಿದ್ದಳು.

"ನೀನೆ ?"

ಅಭಯಾಳ ಮುಖ ಮತ್ತು ಕಂಣುಗಳು ಕೆಂಪಾದುವು; ಆಕೆಯು ಯಾವ ಉತ್ತರವನ್ನೂ ಕೊಡದೆ ರೆಪ್ಪೆ ಬಡಿಯುವದರೊಳಗೆ ತನ್ನ ಕೋಣೆಗೆ ಹೋಗಿಬಿಟ್ಟಳು; ಮತ್ತು ಅದನ್ನು ಮುಚ್ಚಿಕೊಂಡು ಒಳಗಿನ ಚಿಲಕವನ್ನು ಹಾಕಿಬಿಟ್ಟಳು. ಆದರೆ ಸಾಯಂಕಾಲದ ಮಸುಮಸು-ಕಾದ ಪ್ರಕಾಶದಲ್ಲಿ ಆಕೆಯ ಮುಖದ ಮೇಲೆ ನಾಚಿಕೆಯು ಹೊರ ಹೊಮ್ಮುವದನ್ನು ಕಂಡು ಬೇರೆ ವಿಚಾರ ಮಾಡಲು ಅನುವೇ ಉಳಿಯ ಲಿಲ್ಲ. ತಾನು ದಂಗುಬಡಿದು ಸ್ವಲ್ಪ ಹೊತ್ತು ಸುಮ್ಮನೆ ನಿಂತು, ಮೆಲ್ಲಗೆ ಹಿಂತಿರುಗಿ ಹೊರಟಿದ್ದೆ. ಅಕಸ್ಮಾತ್ ಎರಡು ಬೇರೆ ಬೇರೆ ತರದ ಅಳುವಿನ ದನಿಯು ನನ್ನ ಕಿವಿಗೆ ಬಿದ್ದಿತು; ಒಂದು ಆ ಮಹಾ ಪಾಪಿಯದು, ಇನ್ನೊಂದು ಆ ಬರ್ಮೀ ಯುವತಿಯದು. ನಾನು ಹಾಗೆಯೆ ಮುಂದೆ ಹೋಗಬೇಕೆನ್ನುತ್ತಿದ್ದೆ. ಆದರೆ ಹಿಂತಿರುಗಿ ಬಂದು ಅಂಗಳದಲ್ಲಿ ನಿಂತೆ. ಮನದಲ್ಲಿಯೇ ಎಂದುಕೊಂಡೆ —ನಾನು ಈ ರೀತಿಯಾಗಿ ಹೋಗ ಕೂಡದು. ಇಲ್ಲ, ಇಲ್ಲ,—ಹೀಗೆನ್ನ ಕೂಡದು, ಹೀಗೆ ಮಾಡಬಾರದು—ಇದು ಉಚಿತವಲ್ಲ —ಇದು ಒಳ್ಳೆಯದಲ್ಲ —ಇದೆಲ್ಲವನ್ನು ಅನೇಕಬಾರಿ ಆಲಿಸುವ ಅಭ್ಯಾಸವಾಗಿರುವುದು— ಅನೇಕ ಬಾರಿ ಅನ್ಯರಿಗೆ ಕೇಳಿಸಿಯೂ ಆಗಿದೆ —ಆದರೆ, ಸರಿ, ಇನ್ನುಮೇಲೆ ಹೀಗೆ ಮಾಡುವಂತಿಲ್ಲ. ಏಕೆ ಒಳ್ಳೆಯದು, ಏನು ಕೆಟ್ಟುದು ? ಏನು ಒಳ್ಳೆಯದು, ಯಾವುದು ಯಾರಿಗಾಗಿ ಎಲ್ಲಿ ಕೆಟ್ಟುದು— ಈ ಎಲ್ಲ ಪ್ರಶ್ನೆಗಳನ್ನು ಸಾಧ್ಯವಾದರೆ ಆಕೆಯ ಬಾಯಿಂದಲೇ ಕೇಳುವೆ. ಒಂದುವೇಳೆ ಹೀಗೆ ಮಾಡಲು ನಾನು ಅಸಮರ್ಥನಾದರೆ —ಕೇವಲ ಗ್ರಂಥದ ಅಕ್ಷರಗಳ ಮೇಲೆ ದೃಷ್ಟಿಯಿಟ್ಟು ಮೀಮಾಂಸೆಯನ್ನು ಮಾಡುವ ಅಧಿಕಾರವು ನನಗೂ ಇಲ್ಲ, ನಿಮಗೂ ಇಲ್ಲ. ಬಹುಶಃ ಆ ವಿಧಾತನಿಗೂ ಇಲ್ಲ !

—೨—

ಒಮ್ಮೆಲೆ ಬಾಗಿಲು ತೆರೆದು ಅಭಯಾ ಎದುರಿಗೆ ಬಂದು ನಿಂತಳು. ಆಕೆಯೆಂದಳು "ಜನ್ಮಜನ್ಮಾಂತರಗಳಿಂದ ಬಂದ ಅಂಥ ಸಂಸ್ಕಾರಗಳ ಏಟು ಬಿದ್ದುದರಿಂದ ಒಮ್ಮೆಲೆ ನಾನು ನನ್ನನ್ನು ಸಂಬಾಳಿಸಿಕೊಳ್ಳದಾದೆ. ಆದ್ದರಿಂದಲೇ ನಾನು ಮೊದಲು ಓಡಿಹೋದೆ ಒಳಗೆ ಶ್ರೀಕಾಂತಬಾಬೂ! ಅದು ನನ್ನ ನಿಜವಾದ ನಾಚಿಕೆಯೆಂದು ತಿಳಿಯಬೇಡಿರಿ ಶ್ರೀಕಾಂತ ಬಾಬೂ!"

ಆಕೆಯ ಸಾಹಸವನ್ನು ನೋಡಿ ನಾನು ದಿಙ್ಮೂಢನಾದೆ! ಆಕೆ ಎಂದಳು "ಈ ದಿನ ನೀವು ಮನೆಗೆ ಹಿಂತಿರುಗಿ ಹೋಗಲು ತಡವಾಗ ಬಹುದು. ರೋಹಿಣಿ ಬಾಬುಗಳು ಈಗ ಬರುವರು. ಈ ದಿನ ನಾವಿಬ್ಬರೂ ನಿಮ್ಮ ಮುಂದೆ ಅಪರಾಧಿಗಳು. ನಿಮ್ಮೆದುರಿಗೆ ನಮ್ಮಿಬ್ಬರ ಅಪರಾಧವು ಸಪ್ರಮಾಣ ಸಿದ್ಧವಾದರೆ ನೀವು ನಮಗೆ ಯಾವ ಶಿಕ್ಷೆಯನ್ನು ವಿಧಿಸುವಿರೊ ಅದನ್ನು ನಾವು ಸಹರ್ಷ ಅನುಭವಿಸಲು ಸಿದ್ಧರಿರುವೆವು."

ಅಭಯಾ ರೋಹಿಣಿಗೆ 'ಬಾಬೂ' ಎಂದು ಕರೆದುದು ಇದೇ ಮೊದಲಸಲ. ನಾನು ಈ ಮೊದಲು ಹೀಗೆ ಆಕೆಯು ಸಂಬೋಧಿಸಿದುದನ್ನು ಎಂದೂ ಕೇಳಿರಲಿಲ್ಲ. ನಾನು ಕೇಳಿದೆ "ನೀವು ಯಾವಾಗ ಹಿಂತಿರುಗಿ ಬಂದಿರಿ?"

"ಮೊನ್ನೆ. ಅಲ್ಲಿ ಏನಾಯಿತೆಂಬುದನ್ನು ಅರಿಯಲು ನಿಮಗೆ ಬಹಳ ಕುತೂಹಲವುಂಟಾಗಿರಬಹುದು." ಎಂದು ಅಭಯಾ ತನ್ನ ಬಲಗೈಯನ್ನು ತೆರೆದು ತೋರಿಸಿದಳು. ಬೆತ್ತದ ಬಾಸಾಳಗಳು ಅಲ್ಲಲ್ಲಿಗೆ ಕೆಂಪಗೆ ಮೂಡಿದ್ದವು. ಬಳಿಕ ಪುನಃ ಆಕೆಯೆಂದಳು. "ಇನ್ನೂ ಇಂತಹ ಎಷ್ಟೋ ಗುರುತುಗಳು ಇರುವುವು. ಅದನ್ನು ನಾನು ನಿಮಗೆ ತೋರಿಸಲಾರೆ!"

ಯಾವ ದೃಶ್ಯಗಳನ್ನು ಕಂಡು ಮನುಷ್ಯನ ಪುರುಷತ್ವವು ಹಿತಾಹಿತದ ಜ್ಞಾನವನ್ನು ಕಳೆದುಕೊಳ್ಳುವುದೊ ಅಂತಹ ದೃಶ್ಯಗಳಲ್ಲಿ ಇದೂ ಒಂದು. ಅಭಯಾ ನನ್ನ ಸ್ತಬ್ಧ-ಕಠೋರ ಮುಖವನ್ನು ನೋಡಿ ಕ್ಷಣ ಮಾತ್ರದಲ್ಲಿ ಎಲ್ಲವನ್ನು ಅರಿತುಕೊಂಡಳು; ಮತ್ತು ಸ್ವಲ್ಪ ನಕ್ಕು "ಆದರೆ,

ನಾನು ಹಿಂತಿರುಗಿ ಬಂದುದಕ್ಕೆ ಇದೊಂದೇ ಕಾರಣವಿಲ್ಲ ಶ್ರೀಕಾಂತ ಬಾಬೂ. ಇದೊಂದು ನನಗೆ ನನ್ನ ಸತಿ-ಧರ್ಮಕ್ಕಾಗಿ ದೊರೆತ ಒಂದು ಚಿಕ್ಕ ಪಾರಿತೋಷಕ. ಅವರು ನನ್ನ ಪತಿದೇವರು, ನಾನು ಅವರ ಮದುವೆಯಾದ ಹೆಂಡತಿ—ಇದಕ್ಕಾಗಿಯೆ ದೊರೆತ ಚಿಕ್ಕ ಪುರಸ್ಕಾರ!''

ಸ್ವಲ್ಪ ಹೊತ್ತು ಸುಮ್ಮನಿದ್ದು ಆಕೆಯು ಪುನಃ ಹೇಳತೊಡಗಿದಳು. "ನಾನು ಹೆಂಡತಿಯಾಗಿ ಗಂಡನ ಅಪ್ಪಣೆಯಿಲ್ಲದೆ ಇಷ್ಟು ದೂರ ಬಂದು ಅವರ ಶಾಂತಿಯನ್ನು ಕೆಡಿಸಿದೆ. ಹೆಂಗಸಿನ ಇಷ್ಟು ದೊಡ್ಡ ಸಾಹಸವನ್ನು ಪುರುಷ ಜಾತಿಯು ಎಂದೂ ಸಹಿಸುವುದಿಲ್ಲ. ಇದು ಅದಕ್ಕಾಗಿ ದೊರೆತ ದಂಡ. ನಾನಾ ಬಗೆಯ ಆಸೆಗಳನ್ನು ತೋರಿಸಿ, ಮೋಸ ಮಾಡಿ ತಮ್ಮ ಮನೆಗೆ ಅವರು ನನ್ನನ್ನು ಕರೆದುಕೊಂಡು ಹೋದರು. ಅಲ್ಲಿಗೆ ಹೋದ ಬಳಿಕ 'ನೀನು ರೋಹಿಣಿಯ ಸಂಗಡ ಇಲ್ಲಿಯ ವರೆಗೆ ಏಕೆ ಬಂದೆ?' ಎಂದು ಕೇಳಿದರು. ನಾನು ಹೇಳಿದೆ 'ಗಂಡನ ಮನೆಯು ಹೇಗಿರುವುದು ಎಂಬುದನ್ನು ನಾನು ಇದು ವರೆಗೆ ಕಂಡಿಲ್ಲ. ನನಗೆ ತಂದೆಯಿಲ್ಲ, ತಾಯಿಯಿಲ್ಲ; ಊಟ-ಉಡಿಗೆಯನ್ನು ಕೊಡುವಂತಹ ಯಾವ ಆಪ್ತೇಷ್ಟರೂ ಎನಗಿಲ್ಲ. ನಿಮಗೆ ಎಷ್ಟು ಪತ್ರಗಳನ್ನು ಬರೆದರೂ ಒಂದಕ್ಕೂ ಉತ್ತರ ಬರಲಿಲ್ಲ.' ಅವರು ಬೆತ್ತವನ್ನು ಎತ್ತಿ "ಇವೊತ್ತು ಅದಕ್ಕೆ ಉತ್ತರವೀಯುವೆ.' ಎಂದರು." ಇಷ್ಟೆಂದು ಪುನಃ ಅಭಯಾ ಆ ತನ್ನ ಬಲಗೈಯ ಮೇಲಿನ ಏಟುಗಳನ್ನು ತೋರಿಸಿದಳು-

ಆ ಅತ್ಯಂತ ಕೀಳು, ಅಮಾನುಷ, ಕಾಡು ಮನುಷ್ಯನ ವಿರುದ್ಧವಾಗಿ ನನ್ನ ಅಂತಃಕರಣದಲ್ಲಿ ಪುನಃ ಗಲಾಟೆಯೆದ್ದಿತು. ಯಾವ ಅಂಧಸಂಸ್ಕಾರಕ್ಕೆ ವಶೀಭೂತಳಾಗಿ ಅಭಯಾ ನನ್ನನ್ನು ನೋಡುತ್ತಲೇ ಒಳಗೆ ಓಡಿಹೋಗಿದ್ದಳೊ ಅದೇ ಸಂಸ್ಕಾರಕ್ಕೆ ನಾನೂ ಸಿಲುಕಿಕೊಂಡವನು ಇದ್ದೆ! ನಾನೂ ಅದರ ಎಲ್ಲೆಗೆ ಮೀರಿ ಇರಲಿಲ್ಲ! ಆದುದರಿಂದ 'ನೀನು ಮಾಡಿದುದು ಚೆನ್ನಾಯಿತು' ಎಂದು ನಾನು ಹೇಳದಾದೆ. ಇದರ ಕೂಡ 'ನೀನು ಅಪರಾಧ ಮಾಡಿರುವೆ' ಎಂದೂ ನನ್ನ ಬಾಯಿಂದ ಹೊರಬೀಳಲಿಲ್ಲ. ಅತ್ಯಂತ ಸಂಕಟದ ಸಮಯದಲ್ಲಿ ತನ್ನ ವಿವೇಕ ಮತ್ತು ಸಂಸ್ಕಾರ, ಸ್ವಾಧೀನ ವಿಚಾರ ಮತ್ತು ಪರಾಧೀನ

ಜ್ಞಾನ ಇವುಗಳ ನಡುವೆ ಸಂಗ್ರಾಮವು ನಡೆದಾಗ ಪರರಿಗೆ ಉಪದೇಶ ವನ್ನು ಕೊಡಲು ಹೋಗುವುದು ಒಂದು ವಿಡಂಬನೆಯೆ ಸರಿ. ಇಂತಹ ವಿಡಂಬನೆಯು ಜಗತ್ತಿನಲ್ಲಿ ಬೇರೊಂದಿಲ್ಲ. ಸ್ವಲ್ಪ ಹೊತ್ತು ಸುಮ್ಮ ನಿದ್ದು "ನೀನು ಅಲ್ಲಿಂದ ಹೊರಟು ಬಂದುದು ಅನ್ಯಾಯವಾಯಿತು ಎಂದು ನಾನಂತೂ ಹೇಳಲಾರೆ, ಆದರೆ—" ಎಂದು ನಾನು ನುಡಿದೆ.

"ಈ 'ಆದರೆ'ಯ ವಿಚಾರವನ್ನೇ ನೀವು ಮಾಡಬೇಕೆಂದು ನನ್ನ ಇಚ್ಛೆ ಶ್ರೀಕಾಂತ ಬಾಬೂ. ಅವರು ತಮ್ಮ ಬರ್ಮೀ ಹೆಂಡತಿಯೊಡನೆ ಸುಖದಿಂದ ಇದ್ದರೆ ನನಗೆ ದುಃಖವಿಲ್ಲ. ಅದರ ವಿರುದ್ಧವಾಗಿ ನನ್ನ ದೇನೂ ದೂರು ಇಲ್ಲ; ಆದರೆ ನಾನು ನಿಮ್ಮನ್ನು ಇಷ್ಟೇ ಕೇಳುವೆ— ಗಂಡನು ತನ್ನ ಏಕಮೇವ ಬೆತ್ತದ ಬಲದಿಂದ ಹೆಂಡತಿಯ ಸಮಸ್ತ ಅಧಿಕಾರಗಳನ್ನು ಕಸಿದುಕೊಂಡು, ಕತ್ತಲು ರಾತ್ರಿಯಲ್ಲಿ ಒಬ್ಬಳನ್ನೇ ಮನೆಯಿಂದ ಹೊರಗೆ ಹಾಕಿ ಬಿಟ್ಟ ಬಳಿಕ ಸಹ ವಿವಾಹದ ವೈದಿಕ ಮಂತ್ರಗಳ ಬಲದಿಂದ ಅವರ ಮೇಲೆ ಹೆಂಡತಿಯ ಕರ್ತವ್ಯದ ಬಗ್ಗೆ ಹೊಣೆಯು ಇರುವುದೊ ಅಥವಾ ಇಲ್ಲವೊ?"

ಆದರೆ, ನಾನು ಮೌನವ್ರತವನ್ನು ಹಿಡಿದು ಇದ್ದೆ. ಆಕೆಯು ನನ್ನ ಮುಖದ ಮೇಲೆ ತನ್ನ ನೋಟವನ್ನಿರಿಸಿ ಎಂದಳು "ಕರ್ತವ್ಯ ಇಲ್ಲದಿದ್ದಲ್ಲಿ ಕರ್ತವ್ಯವೂ ಇಲ್ಲ ಎಂಬುದು ಸ್ಥೂಲವಾದ ಮಾತು. ಅವರೂ ನನ್ನ ಕೂಡ ಅವೇ ಮಂತ್ರಗಳನ್ನು ಉಚ್ಚರಿಸಿದರು! ಆದರೆ ಅದೊಂದು ನಿರರ್ಥಕ ನುಡಿ. ಅವರ ಪ್ರವೃತ್ತಿ—ಅವರ ಇಚ್ಛೆಯನ್ನು ಅದು ತಡೆಯಲಾರದೆ ಹೋಯಿತು! ಮಂತ್ರಗಳ ಆ ಅರ್ಥವಿಲ್ಲದ ಆ ವೃತ್ತಿಯು ಬಾಯಿಂದ ಹೊರಬೀಳುತ್ತಲೇ ಸುಳ್ಳಿನ ಕಂತೆಯಲ್ಲಿ ಸೇರಿ ಹೋಯಿತು. ಆದರೆ ಆ ಎಲ್ಲ ಬಂಧನ, ಎಲ್ಲ ಹೊಣೆಗಾರಿಕೆ ನಾನು ಹೆಂಗುಸು ಮಾತ್ರ ಇರುವುದರಿಂದ ನನ್ನ ಮೇಲೆ ಹೊರೆಯಿಸಲ್ಪಟ್ಟಿ ತ್ತೇನು? ಶ್ರೀಕಾಂತಬಾಬೂ, ನೀವಂತೂ 'ಆದರೆ'ಯ ವರೆಗೆ ನುಡಿದು ನಿಂತು ಬಿಟ್ಟಿರಿ. ಅರ್ಥಾತ್, ನಾನು ಅಲ್ಲಿಂದ ಹೊರಟು ಬರುವುದು ಅನ್ಯಾಯವಾಗಲಿಲ್ಲ, ಆದರೆ —ಈ 'ಆದರೆ'ಯ ಅರ್ಥವು ಗಂಡನಿಂದ ಪರಿತ್ಯಕ್ತ ಹೆಂಡತಿಯು ಅವನ ಅಪರಾಧಕ್ಕಾಗಿ ತನ್ನ ಇಡಿ ಜೀವನ

ಸತ್ತಂತೆ ಇರಬೇಕು; ಮತ್ತು ಇದರಲ್ಲಿಯೇ ನಾರಿಯ ಜನ್ಮದ ಸಾರ್ಥಕ್ಯವು ಇರುವುದು ಎಂದೇನು? ಒಂದು ದಿನ ನನ್ನಿಂದ ಮಾಡಿಸಿದ ವಿವಾಹ ಮಂತ್ರಗಳ ಉಚ್ಚಾರಣೆಯು ನನ್ನ ಜೀವನದ ಏಕಮಾತ್ರ ಸತ್ಯ, ಉಳಿದು ದೆಲ್ಲವೂ ಮಿಥ್ಯವೇನು? ಇಷ್ಟು ದೊಡ್ಡ ಅನ್ಯಾಯ, ಇಷ್ಟು ದೊಡ್ಡ ನಿಷ್ಠುರ ಅತ್ಯಾಚಾರ, ನನ್ನ ಪಕ್ಷದಲ್ಲಿ ಏನೂ—ಏನೂ ಇಲ್ಲವೆ? ನನ್ನ ಪತ್ನಿತ್ವದ ಅಧಿಕಾರವು ಏನೂ ಇಲ್ಲವೆ? ತಾಯಿಯಾಗುವ ಅಧಿಕಾರವು ಏನೂ ಇಲ್ಲವೇ? ಸಮಾಜ, ಸಂಸಾರ, ಆನಂದ ಇವುಗಳಮೇಲೆ ನನ್ನ ದೇನೂ ಅಧಿಕಾರವಿಲ್ಲವೇ? ಯಾವನಾದರೂ ನಿರ್ದಯ, ಮಿಥ್ಯಾವಾದಿ, ದುರ್ಜನತೆಯ ಗಂಡನು ಯಾವ ಅಪರಾಧವನ್ನೂ ಮಾಡದ ತನ್ನ ಹೆಂಡತಿಯನ್ನು ಹೊರಗೆ ಹಾಕಿದರೆ, ಈ ಹೊರಗೆ ಹಾಕಿದುದಕ್ಕಾಗಿ ಮಾತ್ರ ಆಕೆಯ ಸಮಸ್ತ ನಾರೀತ್ವವು ವ್ಯರ್ಥವಾಗಬೇಕೆ? ಕುಂಟಾಗ ಬೇಕೆ? ಅಂಗಹೀನವಾಗಬೇಕೆ? ಇದಕ್ಕೋಸ್ಕರವಾಗಿಯೆ ದೇವರ ಹೆಂಗುಸರನ್ನು ನಿರ್ಮಿಸಿ ಭೂಮಿಯ ಮೇಲೆ ಕಳಿಸಿದ್ದನೆ? ಎಲ್ಲ ಜಾತಿ ಗಳಲ್ಲಿಯೂ ಧರ್ಮಗಳಲ್ಲಿಯೂ ಇಂತಹ ಅನ್ಯಾಯಗಳಿಗೆ ದಂಡವಿದೆ, ಪ್ರತೀಕಾರವಿದೆ; —ನಾನು ಹಿಂದೂ ಧರ್ಮಿಯನ ಮನೆಯಲ್ಲಿ ಹುಟ್ಟಿ ರುವೆ? ಆದುದರಿಂದಲೇ ನನಗಾಗಿ ಎಲ್ಲ ಮಾರ್ಗಗಳೂ ಮುಚ್ಚಿ ಹೋಗಿರುವವೇನು ಶ್ರೀಕಾಂತಬಾಬೂ?"

ನಾನು ಸುಮ್ಮನಿದ್ದುದನ್ನು ನೋಡಿ ಅಭಯಾ "ಉತ್ತರವೀಯ ಲಿಲ್ಲ, ಶ್ರೀಕಾಂತಬಾಬೂ?" ಎಂದಳು.

"ನನ್ನ ಉತ್ತರದಿಂದ ಏನಾಗುವುದು? ನನ್ನ ಅಭಿಪ್ರಾಯಕ್ಕಾಗಿ ನೀನು ದಾರಿಯನ್ನು ನೋಡುತ್ತಿರಲಿಲ್ಲ ತಾನೇ?"

"ಆದರೆ ಅದಕ್ಕಾಗಿ ವೇಳೆಯಾದರೂ ಎಲ್ಲಿದ್ದಿತು!"

"ಇರಬಹುದು. ನೀನು ನನ್ನನ್ನು ನೋಡಿ ಒಳಗೆ ಓಡಿ ಹೋಗು ತ್ತಿದ್ದಾಗ ನಾನೂ ಹೊರಟು ಹೋಗತೊಡಗಿದ್ದೆ. ಆದರೆ, ನಾನು ಹಿಂತಿ ರುಗಿ ಬಂದೆ, ಏಕೆ? ನಿನಗೆ ಗೊತ್ತಿದೆಯೇನು?"

"ಇಲ್ಲ"

ಬಾಬೂ? ಆ ನಿಷ್ಫಲತೆಯ ದುಃಖವನ್ನು ಹೊತ್ತುಕೊಂಡು ಜೀವಿಸಿರುವ ವರೆಗೂ ತಿರುಗಾಡುವುದರಲ್ಲಿಯೆ ನನ್ನ ನಾರೀ ಜೀವನದ ಶ್ರೇಷ್ಠ ಸಾಧನೆಯು ಇರುವುದೇನು? ರೋಹಿಣಿ ಬಾಬುಗಳನ್ನು ನೀವು ನೋಡಿಯೇ ಇದ್ದೀರಿ. ಅವರ ಪ್ರೀತಿಯು ಎಷ್ಟು ಇದೆ ಎಂಬುದು ನಿಮಗೆ ಮರೆಯಾಗಿ ಇರುವುದಿಲ್ಲ. ಇಂಥ ಮನುಷ್ಯನ ಇಡೀ ಜೀವನ ವನ್ನು ಕುಂಟ ಮಾಡಿ, ಅಂಗಹೀನ ಮಾಡಿ ನಾನು 'ಸತಿ'ಯ ಪದಕ ವನ್ನು ಕೊಳ್ಳಲಿಚ್ಛಿಸುವದಿಲ್ಲ ಶ್ರೀಕಾಂತ ಬಾಬೂ."

ಅಭಯಾ ತನ್ನ ಕೈಗಳಿಂದ ಕಂಬನಿಗಳನ್ನು ಒರಸಿಕೊಂಡು ಪುನಃ ಗದ್ಗದ ಕಂಠದಿಂದ ಎಂದಳು "ಪತಿ-ಪತ್ನಿಯರ ನಡುವೇ ಅತ್ಯಂತ ನಿಕಟ ಸ್ವಪ್ನದಂತೆ ಮಿಥ್ಯೆಯೆಂದು ಪ್ರಮಾಣಿತವಾದ ಒಂದು ರಾತ್ರಿ ಯಲ್ಲಿ ಜರುಗಿದ ವಿವಾಹದ ಅನುಷ್ಠಾನವನ್ನು 'ಸತ್ಯ'ವೆಂದು ಬಲ ವಂತದಿಂದ ಜೀವನದಲ್ಲಿ ಮಾನ್ಯಮಾಡುವದಕ್ಕೋಸ್ಕರ ಇಷ್ಟು ದೊಡ್ಡ ಪ್ರೀತಿಯನ್ನು ನಾನು ಕೇವಲ ವ್ಯರ್ಥ ಮಾಡಿ ಬಿಡಬೇಕೇನು ಶ್ರೀಕಾಂತ ಬಾಬೂ? ಪ್ರೇಮವನ್ನು ದಯಪಾಲಿಸಿದ ದೇವರು ಇದರಿಂದ ಸಂತುಷ್ಟ ನಾಗುವನೇನು? ನನ್ನನ್ನು ಕುರಿತು ನೀವು ಏನೆಂದಾದರೂ ತಿಳಿದು ಕೊಳ್ಳಿರಿ, ನನ್ನ ಮುಂದಿನ ಸಂತಾನವನ್ನು ನೀವು ಏನೆಂದಾದರೂ ಕರೆ ಯಿರಿ, ಆದರೆ, ನಾನೂ ಜೀವಿಸಿರುವೆ, ಶ್ರೀಕಾಂತಬಾಬೂ, ನಮ್ಮ ನಿಷ್ಪಾಪ ಪ್ರೇಮದ ಫಲ ಸ್ವರೂಪವಾಗಿ ಹುಟ್ಟಿದ ಸಂತಾನವು ಪ್ರಪಂಚ ದಲ್ಲಿ ಮನುಷ್ಯತ್ವದದೃಷ್ಟಿಯಿಂದ ಎಂದಿಗೂ ಹೀನವಾಗಿರಲಿಕ್ಕಿಲ್ಲ; ಮತ್ತು ನನ್ನ ಹೊಟ್ಟೆಯಿಂದ ಹುಟ್ಟಿ ಬಂದುದಕ್ಕಾಗಿ ತನ್ನನ್ನು ಎಂದೂ ಕೀಳೆಂದು ಭಾವಿಸಲಿಕ್ಕಿಲ್ಲವೆಂದು ನಾನು ಎದೆತಟ್ಟಿ ಹೇಳುವೆ. ಸಂತಾನಕ್ಕೆ ಕೊಡಲು ತಂದೆ-ತಾಯಂದಿರ ಬಳಿಯಲ್ಲಿ ಏನೂ ಇರದಿದ್ದರೂ ಪರವಾ ಇಲ್ಲ; ಆದರೆ ತಾಯಿಯು ಮಾತ್ರ ತನ್ನ ಸಂತಾನಕ್ಕೆ 'ನೀನು ಸತ್ಯದಿಂದ ಜನಿಸಿರುವೆ, ಸತ್ಯದ ವಿನಾ ಸಂಸಾರದಲ್ಲಿ ಶ್ರೇಷ್ಠವಾದ ಆಶ್ರಯವು ನಿನಗ ಬೇರೋದು ವಸ್ತುವಿಲ್ಲ, ಈ ಸತ್ಯದಿಂದ ನೀನು ವಿಚಲಿತನಾಗ ಬೇಡ, ಒಂದು ವೇಳೆ ನಿನಗೆ ಈ ಸತ್ಯವು ಕಠಿನವೆನಿಸಬಹುದು, ಆದಾಗ್ಯೂ ಸತ್ಯವನ್ನು ಬಿಡಬೇಡ, ಬಿಟ್ಟರೆ ನೀನು ತುಚ್ಛನೆನಿಸುವಿ.' ಎಂದು ಆತ್ಮವಿಶ್ವಾಸವನ್ನು ಕೊಟ್ಟು ಹೋಗುವಳು."

ಅಭಯಾ ಇಷ್ಟೆಂದು ಸುಮ್ಮಗಾದಳು. ನನ್ನ ಎದುರಿಗಿದ್ದ ಆಕಾಶವು ನಡುಗತೊಡಗಿತು. ಈ ಸ್ತ್ರೀಯ ಬಾಯಿಂದ ಹೊರಬಿದ್ದ ಮಾತುಗಳು ದೇಹಧಾರಣ ಮಾಡಿಕೊಂಡು ಬಂದು ನಮ್ಮಿಬ್ಬರನ್ನೂ ಮುತ್ತಿವೆಯೋ.ಏನೋ ಎಂಬಂತೆ ನನಗೆನಿಸಿತು. ಹೌದು, ಹೀಗೆಯೇ ಎನಿಸಿತು. ಸತ್ಯವು ಮನುಷ್ಯನ ಹೃದಯದಿಂದ ಹೊರಬಿದ್ದು ನಿಜವಾಗಿಯೂ ಎದುರಿಗೆ ನಿಂತಾಗ ಅದು ಸಜೀವವಾಗಿದೆಯೆಂದು ಎನಿಸುವುದು. ಅದಕ್ಕೂ ರಕ್ತ, ಮಜ್ಜಾ, ಮಾಂಸಯುಕ್ತ ಶರೀರವಿದೆಯೆಂದು ತೋರುವುದು, ಅದರಲ್ಲಿಯೂ ಪ್ರಾಣವಿದೆ ಎಂದು ಎನಿಸುವುದು. 'ಇಲ್ಲ' ಎಂದು ಹೇಳಿ ಅದರ ಅಸ್ತಿತ್ವವನ್ನು ಅಸ್ವೀಕಾರ ಮಾಡಿದರೆ ಅದು ತನ್ನ ಕಿಡಿಗಣ್ಣುಗಳನ್ನು ತೆರೆದು ಹೇಳುವುದು 'ಸುಮ್ಮಗಿರು! ಸುಳ್ಳುಸುಳ್ಳೇ ತರ್ಕ ಮಾಡಿ ಅನ್ಯಾಯದ ಸೃಷ್ಟಿಯನ್ನುಂಟುಮಾಡಬೇಡ.' ಎಂದು.

ಅಭಯಾ ಒಮ್ಮೆಗೇ ಒಂದು ಸಹಜವಾದ ಸರಳವಾದ ಪ್ರಶ್ನೆಯನ್ನು ಮಾಡಿದಳು "ನೀವೂ ನಮ್ಮನ್ನು ಅಶ್ರದ್ಧೆಯ ದೃಷ್ಟಿಯಿಂದ ನೋಡುವಿರೇನು ಶ್ರೀಕಾಂತ ಬಾಬೂ? ಇನ್ನು ನೀವು ನಮ್ಮ ಮನೆಗೆ ಬರುವುದಿಲ್ಲವೇನು?"

ಉತ್ತರವೀಯಲು ಸ್ವಲ್ಪ ಹೊತ್ತು ನಾನು ಹಿಂದುಮುಂದು ನೋಡಬೇಕಾಯಿತು. ಬಳಿಕ ನಾನೆಂದೆ "ಅಂತರ್ಯಾಮಿಯ ಎದುರಿನಲ್ಲಿ ನೀನು ನಿಷ್ಕಪಟೆ. ಅವನು ನಿನಗೆ ಕಲ್ಯಾಣವನ್ನೇ ಮಾಡುವನು; ಆದರೆ ಮನುಷ್ಯರು ಮನುಷ್ಯರ ಅಂತಃಕರಣವನ್ನು ನೋಡರು. ಪ್ರತಿಯೊಬ್ಬರ ಹೃದಯದ ಮಾತನ್ನು ಅರಿತು ವಿಚಾರವನ್ನು ಅವರು ಮಾಡಲಾರರು. ಅವರು ಪ್ರತಿಯೊಬ್ಬರನ್ನು ಕುರಿತು ಬೇರೆ ಬೇರೆ ನಿಯಮಗಳನ್ನು ಮಾಡತೊಡಗಿದರೆ ಅವರ ಸಮಾಜದ ಸರಪಳಿಯೇ ಕರಿದುಹೋದೀತು."

ಅಭಯಾ ಕಾತರಳಾಗಿ "ಯಾವ ಧರ್ಮದಲ್ಲಿ, ಯಾವ ಸಮಾಜದಲ್ಲಿ, ನಮ್ಮನ್ನು ಎತ್ತಿ ಹಿಡಿಯಲು ಯೋಗ್ಯವಾದ ಉದಾರತೆಯು ಇರುವುದೊ ಮತ್ತು ಸ್ಥಾನವೂ ಇರುವುದೋ — ಅದೇ ಸಮಾಜದಲ್ಲಿ ಆಶ್ರಯವನ್ನು ಪಡೆಯಲು ನೀವು ನಮಗೆ ಹೇಳುತ್ತೀರಾ?" ಎಂದಳು.

ನಾನು ಇದಕ್ಕೇನೆಂದು ಉತ್ತರ ಕೊಡಲಿ? ಉತ್ತರವೇ ಹೊಳೆಯಲಿಲ್ಲ.

ಅಭಯಾ ಪುನಃ "ನಮ್ಮವರೇ ಆಗಿ, ನೀವು ನಿಮ್ಮ ಜನರಿಗೇ ಸಂಕಟ ಕಾಲದಲ್ಲಿ ಆಶ್ರಯವನ್ನು ಕೊಡಲಾರಿರಾ? ನಾವು ಆ ಆಶ್ರಯಕ್ಕಾಗಿ ಬಿಕ್ಕೆ ಬೇಡಬೇಕೇ ಬೇರೊಬ್ಬರ ಎದುರಿನಲ್ಲಿ? ಅದರಿಂದ ಗೌರವವು ಹೆಚ್ಚುವುದೇನು ಶ್ರೀಕಾಂತ ಬಾಬೂ?" ಎಂದಳು.

ಉತ್ತರರೂಪವಾಗಿ ನನ್ನ ಬಾಯಿಂದ ಯಾವ ಮಾತೂ ಹೊರಬೀಳಲಿಲ್ಲ, ಕೇವಲ ಒಂದು ನೀಳವಾದ ಉಸಿರೊಂದು ಹೊರಬಿದ್ದಿತು.

ಅಭಯಾ ಸ್ವಲ್ಪ ಹೊತ್ತು ಸುಮ್ಮಗಿದ್ದು "ಹೋಗಲಿ ಬಿಡಿರಿ, ನೀವು ಸ್ಥಳಕೊಡದಿದ್ದರೆ ಏನಾಯಿತು? ಈ ದಿನ ಜಗತ್ತಿನಲ್ಲಿ ಸ್ವಚ್ಛಂದವಾಗಿ ತನ್ನಲ್ಲಿ ನಮಗೆ ಸ್ಥಳಕೊಡುವಂತಹದೊಂದು ಜಾತಿಯಿದೆ ಎಂಬುದೇ ನನಗೆ ಒಂದು ಸಮಾಧಾನದ ವಿಷಯ" ಎಂದಳು.

ಆಕೆಯ ಮಾತಿನಿಂದ ನಾನು ಆಹತನಾಗಿ "ಪ್ರತಿಯೊಂದು ಪರಿಸ್ಥಿತಿಯಲ್ಲಿ ಸ್ಥಳಕೊಡುವುದೊಂದೇ ಒಳ್ಳೆಯ ಕೆಲಸವೆಂದು ಒಪ್ಪಿಕೊಳ್ಳಲೇ ಬೇಕೇನು?" ಎಂದು ನುಡಿದೆ.

"ಇದಕ್ಕೆ ಪ್ರಮಾಣವು ಇಲ್ಲಿಯೇ ಇದೆ, ಅದಕ್ಕೆ ದೂರ ಹೋಗಬೇಕಾಗಿಲ್ಲ ಶ್ರೀಕಾಂತಬಾಬೂ. 'ಜಗತ್ತಿನಲ್ಲಿ ಅನ್ಯಾಯದ ಕಾರ್ಯವು ಬಹಳ ದಿನಗಳವರೆಗೆ ಬದುಕದು' ಎಂಬ ಈ ಮಾತು ಸತ್ಯವಾಗಿದ್ದರೆ ಅವರು ಅನ್ಯಾಯಕ್ಕೆ ಆಶ್ರಯಕೊಡುತ್ತ ದಿನದಿನಕ್ಕೆ ಬೆಳೆಯುತ್ತಿರುವರು; ಮತ್ತು ನಾವು ನ್ಯಾಯ-ಧರ್ಮಕ್ಕೆ ಆಶ್ರಯವಿತ್ತು ದಿನದಿನಕ್ಕೆ ನೀಚರೂ ಕೀಳರೂ ಆಗುತ್ತ ಸಾಗಿರುವೆವು ಎಂದು ಇದಕ್ಕೋಸ್ಕರವಾಗಿಯೆ ನಾವು ಹೇಳಬೇಕೆನು?—ನಾವು ಇಲ್ಲಿಗೆ ಬಂದು ಕೆಲವು ದಿನಗಳು ಮಾತ್ರ ಆಗಿವೆ: ಆದರೆ ನಾನು ಇಷ್ಟೇ ದಿನಗಳಲ್ಲಿ ಈ ದೇಶವು ಮುಸಲ್ಮಾನರಿಂದ ತುಂಬಿ ಹೋಗುತ್ತಲಿದೆಯೆಂಬುದನ್ನು ನೋಡಿರುವೆ. ಒಬ್ಬ ಮುಸಲ್ಮಾನನ ಮನೆಯೂ ಇಲ್ಲದ ಒಂದು ಹಳ್ಳಿಯೂ ಇಲ್ಲ, ಮಸೀದೆಯಿಲ್ಲದ ಒಂದು ಊರು ಇಲ್ಲ. ನಮ್ಮ ಕಣ್ಣಿಗೆ ಬಹುಶಃ ಇದು ಕಾಣಿಸಲಿಕ್ಕಿಲ್ಲ; ನಮ್ಮ ದೇಶದಂತೆಯೆ ಈ ಬರ್ಮಾ ದೇಶವೂ ಮುಸಲ್ಮಾನ ಪ್ರಧಾನ ದೇಶವಾಗದೆ ಉಳಿಯಲಿಕ್ಕಿಲ್ಲ. ಈ ಮಾತು ಸ್ವಲ್ಪೇ

ದಿನಗಳಲ್ಲೇ ನಿದರ್ಶನಕ್ಕೆ ಬಂದೀತು. ಈ ದಿನವೇ ಬೆಳಿಗ್ಗೆ ಬಂದರದಲ್ಲಿ ನಡೆದ ಅನ್ಯಾಯವನ್ನು ನೋಡಿ ನಿಮ್ಮ ಮನಸ್ಸು ಸ್ವಲ್ಪ ಕೆಟ್ಟಿದೆ. ಯಾವ ಮುಸಲ್ಮಾನ ಅಣ್ಣನು ಧರ್ಮ ಮತ್ತು ಸಮಾಜದ ಭಯದಿಂದ ಇಂಥ ಒಳಸಂಚನ್ನು ನಡೆಯಿಸಿ, ಇಷ್ಟು ನೀಚತನದ ಆಶ್ರಯವನ್ನು ಪಡೆದು, ಸುಖಸಂತೋಷದ ಸಂಸಾರವನ್ನು ಮಣ್ಣುಗೂಡಿಸಿ ಹೋಗುತ್ತಿದ್ದನೆಂಬದನ್ನು ನೀವೇ ಹೇಳಿರಿ? ಅವನು ಎಲ್ಲರನ್ನೂ ತನ್ನ ಪಂಗಡಕ್ಕೆ ಸೇರಿಸಿಕೊಂಡು ಆಶೀರ್ವಾದ ಮಾಡುತ್ತಿದ್ದ; ಮತ್ತು ಅಣ್ಣನಿಗೆ ಸಲ್ಲಬೇಕಾದ ಮಾನಮರ್ಯಾದೆಯನ್ನು ಪಡೆದುಕೊಂಡು ತಿರುಗಿ ಮನೆಗೆ ಹೋಗುತ್ತಿದ್ದ. ಇವರಿಬ್ಬರಲ್ಲಿ ಯಾರಿಂದ ನಿಜವಾದ ಧರ್ಮವು ಉಳಿಯುವುದು ಶ್ರೀಕಾಂತಬಾಬೂ?" ಎಂದು ಪ್ರಶ್ನೆ ಮಾಡಿದಳು.

ನಾನು ಅತ್ಯಂತ ಶ್ರದ್ಧೆಯಿಂದ "ಒಳ್ಳೇದು, ನೀನು ಹಳ್ಳಿಯ ಹುಡುಗೆ, ನಿನಗೆ ಈ ಎಲ್ಲ ಮಾತುಗಳು ಹೇಗೆ ಗೊತ್ತಾದುವು? ಇಷ್ಟು ವಿಶಾಲದೃಷ್ಟಿಯ ಮತ್ತು ಹೃದಯದ ಮನುಷ್ಯರು ಈ ಪ್ರಪಂಚದಲ್ಲಿ ಸಿಕ್ಕುವುದು ವಿರಳ; ಇಷ್ಟು ಉದಾರ ಹೃದಯದ ಗಂಡುಸರು ಸಿಕ್ಕುವುದೂ ಅಪರೂಪ. ನೀನು ಯಾರ ತಾಯಿಯಾಗುವಿಯೊ ಅವರು ದುರ್ಭಾಗ್ಯವಂತರಾಗುವರೆಂದು ನಾನೆಂದಿಗೂ ಕಲ್ಪಿಸಲಾರೆ.'' ಎಂದೆ.

ಅಭಯಾ ತನ್ನ ಮ್ಲಾನವದನದ ಮೇಲೆ ಇನಿತು ನಗೆಯನ್ನು ಮೂಡಿಿ ''ಹಾಗಾದರೆ ಶ್ರೀಕಾಂತ ಬಾಬೂ, ನನ್ನನ್ನು ಸಮಾಜದಿಂದ ಹೊರಗಿಟ್ಟರೆ ಹಿಂದೂ ಸಮಾಜವು ಹೆಚ್ಚು ಪವಿತ್ರವಾಗುವುದೇನು? ಇದರಿಂದಾಗಿ ಸಮಾಜಕ್ಕೆ ಸ್ವಲ್ಪಾದರೂ ಹಾನಿಯು ಆಗಲಾರದೇ?" ಎಂದಳು.

ಸ್ವಲ್ಪ ಹೊತ್ತು ಸುಮ್ಮಗಿದ್ದು ಸ್ವಲ್ಪ ನಕ್ಕು ಪುನಃ ''ಆದರೆ, ನಾನು ಎಂದಿಗೂ ಸಮಾಜದಿಂದ ಹೊರಗೆ ಹೋಗುವುದಿಲ್ಲ. ಎಲ್ಲ ಅಪಯಶ, ಎಲ್ಲ ಕಲಂಕ, ಎಲ್ಲ ದುರ್ಭಾಗ್ಯವನ್ನು ನನ್ನ ತಲೆಯ ಮೇಲೆ ಹೊತ್ತುಕೊಂಡು ಯಾವಾಗಲೂ ನಿಮ್ಮವಳಾಗಿಯೇ ಇರುವೆನು. ನನ್ನ ಒಂದು ಸಂತಾನವನ್ನಾದರೂ ಮನುಷ್ಯನಂತೆ ಮನುಷ್ಯನನ್ನಾಗಿ ಮಾಡಿ ನಿಲ್ಲಿಸಲು ನಾನು ಸಮರ್ಥಳಾದರೆ ನನ್ನ ಈ ಎಲ್ಲ ದುಃಖವು ಸಾರ್ಥಕವಾಯಿತೆಂದು ಭಾವಿಸುವೆ. ಇದೊಂದು ಆಸೆಯಿಂದಲೇ ನಾನು ಬದುಕಿ

" ಇವೊತ್ತು ನನ್ನ ಮನಸ್ಸು ಬಹಳ ಉದ್ವಿಗ್ನವಾಗಿರುವುದೇ ನಾನು ಹಿಂತಿರುಗಿ ಬಂದುದಕ್ಕೆ ಕಾರಣ. ನಿನಗಿಂತಲೂ ಹೆಚ್ಚಾಗಿ ಇನ್ನೊ ಬರ್ಮ ಹೆಂಗುಸಿನ ಮೇಲೆ ಅತ್ಯಾಚಾರವಾಗುತ್ತಿದ್ದುದನ್ನು ಈ ದಿನ ನಾನು ನೋಡಿರುವೆ. " ಎಂದು ಬಂದರದಲ್ಲಿ ನಡೆದ ಆ ಬರ್ಮೀ ಹೆಂಗುಸಿನ ಕತೆಯನ್ನು ವಿಸ್ತಾರವಾಗಿ ಹೇಳಿ ಕೇಳಿದೆ " ಆ ಹೆಂಗುಸು ಈಗೇನು ಮಾಡಬೇಕು ನೀನು ಹೇಳಬಲ್ಲೆಯಾ ? " ಎಂದು.

ಅಭಯಾ ನಡುಗಿದಳು. ಬಳಿಕ ಕತ್ತನ್ನು ಅಲ್ಲಾಡಿಸಿ " ಇಲ್ಲ, ನಾನು ಹೇಳಲಾರೆ " ಎಂದಳು.

" ಈ ದಿನ ಇನ್ನೂ ಇಬ್ಬರು ಸ್ತ್ರೀಯರ ಕತೆಯನ್ನು ನಿನಗೆ ಹೇಳುವೆ — ನನ್ನ ಅನ್ನದಾ ಜೀಜೀಯದೊಂದು, ಪ್ಯಾರಿಬಾಯಿಯದು ಮತ್ತೊಂದು. ದುಃಖದ ಇತಿಹಾಸದಲ್ಲಿ ಇವರಿಬ್ಬರ ಸ್ಥಾನವು ನಿನಗಿಂತ ಕೆಳಗಿಲ್ಲ. "

ಅಭಯಾ ಸುಮ್ಮಗಿದ್ದಳು. ನಾನು ಮೊದಲಿನಿಂದ ಕೊನೆಯವರೆಗೆ ಅನ್ನದಾ ಜೀಜೀಯ ಕತೆಯನ್ನು ಹೇಳಿದೆ. ಬಳಿಕ ನೋಟವನ್ನು ಮೇಲ್ಮಾಡಿ ಆಕೆಯನ್ನು ನೋಡಿದೆ. ಅಭಯಾ ಕಟ್ಟಿಗೆಯ ಗೊಂಬೆಯಂತೆ ಸ್ಥಿರವಾಗಿ ಕುಳಿತಿದ್ದಳು. ಆಕೆಯ ನಯನಗಳಿಂದ ನೀರು ಕೋಡಿಯಾಗಿ ಹರಿಯುತ್ತಿದ್ದಿತು. ಸ್ವಲ್ಪ ಹೊತ್ತು ಹಾಗೆಯೆ ಸುಮ್ಮಗೆ ಕುಳಿತು, ಬಳಿಕ ಭೂಮಿಯ ಮೇಲೆ ಹಣೆಯಿಟ್ಟು ನಮಸ್ಕರಿಸಿದಳು. ಪುನಃ ಮೊದಲಿನಂತೆ ಕುಳಿತುಕೊಂಡಳು. ಸೆರಗಿನಿಂದ ಕಣ್ಣುಗಳನ್ನು ಒರೆಸಿಕೊಳ್ಳುತ್ತ " ಆ ಮೇಲೆ ? " ಎಂದಳು.

" ಆ ಮೇಲೆ, ಏನಾಯಿತೋ ನನಗೂ ಗೊತ್ತಿಲ್ಲ. ಇನ್ನು ಪ್ಯಾರಿಬಾಯಿಯ ಕತೆಯನ್ನು ಕೇಳು. ಆಕೆಯ ಹೆಸರು ರಾಜಲಕ್ಷ್ಮಿಯೆಂದು ಇದ್ದಾಗ ಆಕೆಯು ಒಬ್ಬನನ್ನು ಪ್ರೀತಿಸುತ್ತಿದ್ದಳು. ಆ ಪ್ರೀತಿಯು ಯಾವರೀತಿಯದು ಇದ್ದಿತೆಂಬುದನ್ನು ತಿಳಿಯಬಯಸುವೆಯೇನು ? ರೋಹಿಣಿಬಾಬು ನಿನ್ನನ್ನು ಹೇಗೆ ಪ್ರೀತಿಸುತ್ತಿರುವನೊ ಹಾಗೆಯೇ ಒಬ್ಬನನ್ನು ಪ್ರೀತಿಸುತ್ತಿದ್ದಳು. ಇದನ್ನು ನಾನು ನನ್ನ ಕಣ್ಣಾರೆ ಕಂಡಿರುವೆ. ಆದುದರಿಂದಲೇ ನಾನು ಸಾಕ್ಷ್ಯವನ್ನು ಕೊಡಲು ಸಮರ್ಥನಾದೆ. ಬಳಿಕ ಎಷ್ಟೋ ಸಮಯವು ಕಳೆದುಹೋದನಂತರ ಇಬ್ಬರೂ ಒಬ್ಬರನ್ನೊಬ್ಬರು

ಬೆಟ್ಟಿಯಾದರು. ಆಗ ಆಕೆಯು ' ರಾಜಲಕ್ಷ್ಮಿ ' ಆಗಿರಲಿಲ್ಲ, ' ಪ್ಯಾರಿ ಬಾಯಿ ' ಆಗಿಬಿಟ್ಟಿದ್ದಳು. ಆದರೆ ರಾಜಲಕ್ಷ್ಮಿಯು ಸತ್ತಿಲ್ಲ, ಪ್ಯಾರಿ ಬಾಯಿಯೊಳಗೆ ಚಿರಕಾಲ ಅಮರವಾಗಿಹೋಗಿರುವಳೆಂಬ ಸಂಗತಿಯು ಆ ದಿನ ಸಪ್ರಮಾಣವಾಗಿ ಸಿದ್ಧವಾಗಿ ಹೋಯಿತು. ''

ಅಭಯಾ ಉತ್ಸುಕಳಾಗಿ " ಆ ಮೇಲೆ ? " ಎಂದಳು.

ಆ ಮೇಲಿನ ಸಂಗತಿಗಳನ್ನು ನಾನು ಒಂದೊಂದಾಗಿ ಎತ್ತಿಕೊಂಡು ಸವಿಸ್ತಾರವಾಗಿ ಹೇಳಿ, "ಬಳಿಕ ಒಂದು ದಿನ ಪ್ಯಾರಿಯು ತನ್ನ ಪ್ರಾಣಕ್ಕಿಂತಲೂ ಪ್ರಿಯನಾದ ಇನಿಯನನ್ನು ಸುಮ್ಮಗೆ ದೂರ ಸರಿಸಿ ಬಿಟ್ಟಳು " ಎಂದೆ.

"ಆ ಮೇಲೆ ಏನಾಯಿತೆಂಬುದನ್ನು ಬಲ್ಲಿರಾ?'' ಎಂದು ಅಭಯಾ ಕೇಳಿದಳು.

" ಬಲ್ಲೆ. ಆದರೆ ಈಗ ಹೇಳುವುದಿಲ್ಲ. "

ಅಭಯಾ ಒಂದು ನಿಟ್ಟುಸಿರು ಬಿಟ್ಟು " ನಾನೊಬ್ಬಳೇ ಇಲ್ಲ, ಅನಂತ ಕಾಲದಿಂದ ಸ್ತ್ರೀಯರು ಇಂತಹ ದುರದೃಷ್ಟವನ್ನು ಅನುಭವಿಸಬೇಕಾಗಿರುತ್ತದೆ. ಈ ದುಃಖವನ್ನು ಸಹಿಸುವುದರಲ್ಲಿಯೇ ಅವರ ಜೀವನದ ಸಾಫಲ್ಯವಿದೆ ಎಂದು ನೀವು ಹೇಳಬೇಕೆಂದಿರುವಿರೇನು ? " ಎಂದು ನುಡಿದಳು.

'' ನಾನು ಇದರ ಬಗ್ಗೆ ಏನನ್ನೂ ಹೇಳಲಾರೆ. ಆದರೆ ಸ್ತ್ರೀಯರು ಗಂಡುಸರು ಅಲ್ಲವೆಂದಿಷ್ಟೇ ನಾನು ನಿನಗೆ ಹೇಳಬಯಸುವೆ. ಇಬ್ಬರ ಆಚಾರ-ವ್ಯವಹಾರಗಳನ್ನು ಒಂದೇ ತಕ್ಕಡಿಯಲ್ಲಿ ತೂಗಲಿಕ್ಕೆ ಬರುವುದಿಲ್ಲ; ತೂಗಿದರೆ ಅದರಿಂದ ಯಾವ ಪ್ರಯೋಜನವೂ ಆಗದು."

'' ಪ್ರಯೋಜನವೇಕೆ ಆಗಲಾರದು ಎಂಬುದನ್ನು ಕುರಿತು ಹೇಳಬಲ್ಲಿರಾ ? "

'' ಇಲ್ಲ. ಅದನ್ನೂ ಹೇಳಲಾರೆ. ಅಲ್ಲದೆ ಈ ದಿನ ನನ್ನ ಮನಸ್ಸು ಕೂಡ ಸ್ವಲ್ಪ ಭ್ರಾಂತವಾಗಿದೆ, ಆದುದರಿಂದ ಈ ಜಟಿಲ ಸಮಸ್ಯೆಗಳ ಮೀಮಾಂಸೆಯನ್ನು ಮಾಡುವುದು ದುಸ್ತರವಾಗಿದೆ. ನಿನ್ನ ಪ್ರಶ್ನೆಯನ್ನು ಕುರಿತು ಇನ್ನೊಂದು ದಿನ ಹೇಳುವೆ. ಆದಾಗ್ಯೂ ನಾನು ನಿನಗೆ ಒಂದು ವಿಷಯವನ್ನು ಹೇಳಿ ಹೋಗಬೇಕೆನ್ನುವೆ. ಅದೇನೆಂದರೆ

ನನ್ನೀ ಜೀವನದಲ್ಲಿ ನಾನೆಷ್ಟು ಮಹಾನ್ ನಾರಿಯರನ್ನೂ ಅವರ ಚರಿತ್ರೆಯನ್ನೂ ನೋಡಿರುವೆನೊ ಅವರೆಲ್ಲರೂ ದುಃಖದಿಂದಲೇ ತಮ್ಮ ಜೀವನವನ್ನು ಸಾರ್ಥಕ ಮಾಡಿಕೊಂಡಿರುವರು; ಮತ್ತು ನನ್ನ ಮನದಲ್ಲಿ ಉಚ್ಚಸ್ಥಾನವನ್ನು ಪಡೆದಿರುವರು. ನನ್ನ ಅನ್ನದಾ ಜೀಜೀಯು ತನ್ನ ದುಃಖವನ್ನು ಸುಮ್ಮಗೆ ಸಹಿಸಬೇಕಾಗಿದ್ದಿತು; ಇದರ ವಿನಾ ಆಕೆಗೇನೂ ಮಾಡಲಾಗುತ್ತಿರಲಿಲ್ಲ ಎಂದು ನಾನು ಶಪಥಮಾಡಿ ಹೇಳಬಲ್ಲೆ. ಇನ್ನೂ ಒಂದು ಮಾತನ್ನು ನಾನು ಎದೆತಟ್ಟಿ ಹೇಳಬಲ್ಲೆ—ಏನೆಂದರೆ, ಈ ದುಃಖವು ಆಕೆಗೆ ಅಸಹ್ಯವಾಗಿ, ಆಕೆಯು ತನ್ನ ಮಾರ್ಗವನ್ನು ಬಿಟ್ಟು ನಿನ್ನ ಮಾರ್ಗವನ್ನು ಹಿಡಿಯಬಹುದಾಗಿತ್ತು, ಎಂದು ಯೋಚನೆಯನ್ನಾವದೂ ಸರಿಯೆ ನಾನು ಮಾಡಿದರೆ ದುಃಖದಿಂದ ನನ್ನ ಎದೆಯು ಸಿಡಿದುಹೋಗುವುದು."

ಸ್ವಲ್ಪ ಹೊತ್ತು ಸುಮ್ಮಗಿದ್ದು ಪುನಃ "ಮತ್ತೆ ಆ ರಾಜಲಕ್ಷ್ಮಿ? ಆಕೆಯ ತ್ಯಾಗ ಮತ್ತು ಅದರಿಂದ ಆಗುತ್ತಿರುವ ದುಃಖವನ್ನು ನಾನು ಕಣ್ಣಾರೆ ಕಂಡು ಬಂದಿರುವೆ. ಈ ದುಃಖದ ಬಲದಿಂದಲೇ ಈ ದಿನ ಆಕೆಯು ನನ್ನ ಹೃದಯವನ್ನೆಲ್ಲ ವ್ಯಾಪಿಸಿಬಿಟ್ಟಿರುವಳು." ಎಂದೆ.

ಅಭಯಾ ಬೆಚ್ಚಿ ಬಿದ್ದು "ಹಾಗಾದರೆ ನೀವೇ ಅವರ—" ಎಂದಳು.

"ಹಾಗಿರದಿದ್ದರೆ ಆಕೆಯು ಇಷ್ಟು ಸ್ವೇಚ್ಛೆಯಿಂದ, ಸ್ವಚ್ಛಂದವಾಗಿ ನನ್ನನ್ನು ಇಷ್ಟು ದೂರ ಇರಲು ಕಳಿಸುತ್ತಿರಲಿಲ್ಲ; ಕಳೆದುಹೋಗಬಹುದೆಂಬ ಭಯವಿದ್ದರೆ ನನ್ನನ್ನು ಬಿಡದೆ ತನ್ನ ಬಳಿಯಲ್ಲೇ ತನ್ನ ಜೀವಕ್ಕಿಂತಲೂ ಹೆಚ್ಚು ಜೋಪಾನ ಮಾಡಿ ಇಟ್ಟುಕೊಳ್ಳುತ್ತಿದ್ದಳು."

"ರಾಜಲಕ್ಷ್ಮಿಗೆ ನೀವು ಕಳೆದುಹೋದೀರೆಂಬ ಭಯವು ಎನಿತೂ ಇಲ್ಲ ಎಂದು ಇದರ ಅರ್ಥವೇನು?"

"ಕೇವಲ ಅಂಜಿಕೆಯಷ್ಟೇ ಇಲ್ಲ; ನಾನು ಕಳೆದು ಹೋಗುವುದೇ ಇಲ್ಲ ಎಂಬ ದೃಢವಾದ ವಿಶ್ವಾಸವೂ ರಾಜಲಕ್ಷ್ಮಿಗೆ ಇದೆ. ಪಡೆಯುವುದು ಮತ್ತು ಕಳೆದುಕೊಳ್ಳುವುದು ಇವೆರಡರ ಹೊರಗೆ ಯಾವ ಸಂಬಂಧವು ಇರುವುದೊ ಅದನ್ನು ಆಕೆಯು ಪಡೆದುಕೊಂಡಿರುವಳೆಂದು ನನ್ನ ನಂಬಿಕೆ. ಆದುದರಿಂದಲೇ ಈಗಲೂ ನಾನು ಆಕೆಗೆ ಅವಶ್ಯವಾಗಿ

ಬೇಕಾಗಿರುವುದಿಲ್ಲ. ನಾನೂ ಈ ಜೀವನದಲ್ಲಿ ಕಡಿಮೆ ದುಃಖವನ್ನು ಅನುಭವಿಸಿಲ್ಲ. ' ದುಃಖ ' ವೆಂದು ಯಾವುದಕ್ಕೆ ಹೇಳುತ್ತಾರೋ ಅದು ಅಭಾವರೂಪವಾಗಿ ಇಲ್ಲವೆಂದೂ ಶೂನ್ಯವಾಗಿ ಇಲ್ಲವೆಂದೂ ನಾನು ಬಗೆದಿದ್ದೇನೆ. ಭಯರಹಿತವಾದ ದುಃಖವನ್ನು ಸುಖದಂತೆ ಅನುಭವಿಸಬಹುದು ಎಂಬುದನ್ನೂ ನಾನು ಬಲ್ಲೆ. ''

ಅಭಯಾ ಸ್ವಲ್ಪ ಹೊತ್ತು ಸುಮ್ಮಗಿದ್ದು ಮೆಲ್ಲಗೆ ನುಡಿದಳು. "ನನಗೆ ನಿಮ್ಮ ಮಾತು ತಿಳಿಯುತ್ತದೆ ಶ್ರೀಕಾಂತ ಬಾಬೂ ! ಅನ್ನದಾ ಜೀಜೀ ಮತ್ತು ರಾಜಲಕ್ಷ್ಮಿ ಇವರಿಬ್ಬರೂ ತಮ್ಮ ಜೀವನದ ಆಧಾರವಾಗಿ ದುಃಖವನ್ನೇ ಪಡೆದಿದ್ದಾರೆ. ಆದರೆ ಅದನ್ನೂ ನಾನು ಪಡೆದಿಲ್ಲ. ನಾನು ಗಂಡನಿಂದ ಪಡೆದುದೇನು ? ಕೇವಲ ಅಪಮಾನ, ಲಾಂಛನ, ಗ್ಲಾನಿ. ಈ ಮೂಲಧನವನ್ನು ತೆಗೆದುಕೊಂಡೇ ನಾನು ಜೀವಿಸಿರಬೇಕೆಂದು ನೀವು ಹೇಳುತ್ತೀರೇನು ? ''

ಪ್ರಶ್ನೆಯು ಬಹಳ ಕಠಿಣವಾದುದು. ನಾನು ನಿರುತ್ತರನಾದುದನ್ನು ಕಂಡು ಪುನಃ ಅಭಯಾ ಎನ್ನತೊಡಗಿದಳು '' ಇವರ ಜೀವನದೊಡನೆ ಎಲ್ಲಿಯೂ ನನ್ನ ಜೀವನದ ಹೋಲಿಕೆ ಇಲ್ಲ ಶ್ರೀಕಾಂತ ಬಾಬೂ. ಪ್ರಪಂಚದ ಎಲ್ಲ ಸ್ತ್ರೀಪುರುಷರು ಒಂದೇ ಎರಕದಲ್ಲಿ ಹೊಯ್ಯಲ್ಪಟ್ಟವರು ಇರುವುದಿಲ್ಲ; ಅವರಿಗೆ ತಮ್ಮ ಜೀವನವನ್ನು ಸಾರ್ಥಕ ಮಾಡಿಕೊಳ್ಳಲು ಜೀವನದಲ್ಲಿ ಒಂದೇ ಮಾರ್ಗವು ಇರುವುದಿಲ್ಲ. ಅವರ ಶಿಕ್ಷಣ, ಅವರ ಪ್ರವೃತ್ತಿ, ಅವರ ಮನಸ್ಸಿನ ಗತಿ ಒಂದೇ ದಿಕ್ಕಿನಲ್ಲಿ ನಡೆದು ಅವರ ಜೀವನವನ್ನು ಸಾರ್ಥಕ ಮಾಡಲಾರವು. ಆದುದರಿಂದಲೇ ಸಮಾಜದಲ್ಲಿ ಅವರ ಬಗ್ಗೆ ಒಳ್ಳೆಯ ವ್ಯವಸ್ಥೆಯಿರುವುದು ಉಚಿತವೇ ಆಗಿದೆ. ನನ್ನ ಜೀವನದ ಮೇಲೆಯೇ ಮೊದಲಿಂದ ಕೊನೆಯವರೆಗೆ ದೃಷ್ಟಿಯನ್ನು ಹಾಕಿರಿ ! ಯಾರೊಡನೆ ನನ್ನ ವಿವಾಹವಾಗಿದೆಯೊ ಅವರ ಬಳಿಗೆ ಬರದೆ ಇರಲಿಕ್ಕೆ ಬೇರೆ ಮಾರ್ಗವೇ ಇರಲಿಲ್ಲ. ಈಗ ಅವರಿಗೆ ಇರುವ ಹೆಂಡತಿ, ಅವರ ಮಕ್ಕಳು, ಅವರ ಪ್ರೇಮ, ಯಾವುದೂ ನನ್ನ ಸ್ವಂತದ್ದು ಇಲ್ಲ. ಇಷ್ಟಾದಾಗ್ಯೂ ಅವರ ಬಳಿಯಲ್ಲಿ ನಾನು ಒಬ್ಬ ಇಟ್ಟುಕೊಂಡ ವೇಶ್ಯೆಯಂತೆ ಇದ್ದರೆ ನನ್ನ ಜೀವನವು ಪುಷ್ಪಾಲಂಕೃತವಾಗಿ ಸಫಲವಾಗುತ್ತಿದ್ದಿತೇನು? ಸಾರ್ಥಕವಾಗುತ್ತಿದ್ದಿತೇನು ಶ್ರೀಕಾಂತ

ಇರುವೆ. ನಿಜವಾಗಿಯೂ ಮನುಷ್ಯನೇ ಮನುಷ್ಯರಲ್ಲಿ ದೊಡ್ಡವನೋ ಅವನು ಉಚ್ಚ ಕುಲದಲ್ಲಿ ಜನ್ಮಿಸಿದ ಮಾತ್ರಕ್ಕೆ ದೊಡ್ಡವನೊ ಎಂಬುದನ್ನು ನನ್ನನ್ನು ಪರೀಕ್ಷಿಸಿ ನೋಡಿರಿ.'' ಎಂದಳು.

೩

ಮನೋಹರ ಚಕ್ರವರ್ತಿ ಎಂಬ ಪ್ರಪಂಚದ ಸಾಕಷ್ಟು ಅನುಭವ, ಅರಿವು ಇದ್ದ ಮಹನೀಯರ ಪರಿಚಯವು ನನಗೆ ಆಗಿದ್ದಿತು. ಠಾಕೂರದಾದಾನ ಹೊಟಲಿನಲ್ಲಿ ಒಂದು ಭಜನೆಯ ಮೇಳವಿದ್ದಿತು. ಪುಣ್ಯವನ್ನು ಸಂಚಯಿಸಬೇಕೆಂದು ಆಗಾಗ್ಗೆ ಅಲ್ಲಿಗೆ ಹೋಗುತ್ತಿದ್ದೆ. ಆದರೆ ಅವರು ಎಲ್ಲಿ ಇರುವರು, ಯಾವ ಉದ್ಯೋಗ ಮಾಡುವರು ಎಂಬುದು ಎಳ್ಳಷ್ಟೂ ನನಗೆ ಗೊತ್ತಿರಲಿಲ್ಲ. ಆದರೆ ಅವರ ಹತ್ತಿರ ಹಣ ಬಹಳ ಇದೆಯೆಂದೂ 'ಎತ್ತಹೋದರೂ ಸೆಟ್ಟಿ ತನ್ನ ಲೆಕ್ಕ ಬಿಡ' ಎಂಬ ಗಾದೆಯ ಮಾತಿನ ಪ್ರತ್ಯಕ್ಷ ಮೂರ್ತಿಗಳೆಂದೂ ಕೇಳಿದ್ದೆ.

ಅದೇಕೊ ಏನೋ ಒಂದು ದಿನ ಅವರು ನನ್ನ ಮೇಲೆ ಬಹಳ ಸಂತುಷ್ಟರಾಗಿ ಒಬ್ಬನನ್ನೇ ಒಂದು ಕಡೆಗೆ ಕರೆದು "ನೋಡು ಶ್ರೀಕಾಂತ ಇನ್ನೂ ನಿನ್ನ ವಯಸ್ಸು ಚಿಕ್ಕದು, ಜೀವನದಲ್ಲಿ ಉನ್ನತಿಯನ್ನೂ ಯಶಸ್ಸನ್ನೂ ನೀನು ಪಡೆಯಬೇಕೆಂದಿದ್ದರೆ ಒಂದು ಲಕ್ಷರೂಪಾಯಿ ಕೊಟ್ಟರೂ ಸಿಗದಂತಹ ಒಂದು 'ಗುಟ್ಟು' ನಿನಗೆ ಹೇಳುವೆ, ಅದರಂತೆ ನೀನು ನಡೆದುಕೊಳ್ಳಬೇಕು. ನಾನು ಯಾರಿಂದ ಈ ಗುಟ್ಟನ್ನು ಪಡೆದಿದ್ದೆನೊ ಅವರು ಈ ಪ್ರಪಂಚದಲ್ಲಿ ಎಷ್ಟು ಉನ್ನತಿಯನ್ನು ಪಡೆದಿದ್ದರು ಎಂಬುದನ್ನು ನಾನು ನಿನಗೆ ಹೇಳಿದರೆ ನೀನು ಕೇಳಿ ದಿಙ್ಮೂಢನಾಗುವಿ. ಆದರೆ ಸಂಗತಿಯು ಸತ್ಯವಾದುದು; ಗುಟ್ಟು ಅತ್ಯಂತ ಸತ್ಯವಾದುದು. ಅವರಿಗೆ ತಿಂಗಳಿಗೆ ಸಂಬಳ ಕೇವಲ ಐವತ್ತು ರೂಪಾಯಿ ಇದ್ದಿತು. ಆದರೆ ಸಾಯುವ ಕಾಲಕ್ಕೆ ಮನೆ, ಹೊಲ, ತೋಟ, ಕೆರೆಬಾಯಿ ಎಲ್ಲವನ್ನೂ ಕಟ್ಟಿಸಿ ಎರಡು ಸಾವಿರ ರೂಪಾಯಿ ಕ್ಯಾಶ್ (ನಗದು) ಬಿಟ್ಟು ಹೋದರು. ಇದೇನು ಸರಳವಾದ ಕೆಲಸವೇನು ನೀನೇ ಹೇಳು? ನನ್ನ ತಂದೆ ತಾಯಂದಿರ ಆಶೀರ್ವಾದದಿಂದ ನಾನೂ—" ಎಂದು ಹೇಳಿದರು.

ಆದರೆ ಅವರು ತಮ್ಮ ಮಾತನ್ನು ಇಷ್ಟಕ್ಕೇ ಹತ್ತಿಕ್ಕಿ ಎಂದರು "ನಿನಗೆ ಸಂಬಳ ಏನೊ ದೊಡ್ಡದಿದೆಯೆಂದು ಹೇಳುತ್ತಿರುವೆ. ನಿನ್ನ

ಭಾಗ್ಯವೂ ಚೆನ್ನಾಗಿದೆ. ಬರ್ಮಾಕ್ಕೆ ಬಂದಕೂಡಲೆ ಹೀಗೆ ಭಾಗ್ಯ ತೆರೆದ ಮನುಷ್ಯರನ್ನು ಕುರಿತು ನಾನ್ ಕೇಳಿಯೇ ಇಲ್ಲ. ಇರಲಿ, ನೀನು ವ್ಯರ್ಥವಾಗಿ ಬಹಳ ಖರ್ಚು ಮಾಡುತ್ತಿರುವಿ— ಅಲ್ಲವೆ? ಈ ಎಲ್ಲ ಸಮಾಚಾರವು ನನಗೆ ತಿಳಿಯಿತು, ಮನದೊಳಗೆ ಕೊರಗುತ್ತಿರುವೆ. ನಿನ್ನ ಈ ದುಂದುಗಾರಿಕೆಯ ಬಗ್ಗೆ ನನ್ನ ಎದೆ ಬಿರಿಯುತ್ತಿದೆ. ನಾನು ಯಾರ ಗೊಡವೆಗೂ ಹೋಗುವುದಿಲ್ಲವೆಂಬುದನ್ನು ನೀನು ನೋಡಿಯೇ ನೋಡುತ್ತಿರುವಿ. ಆದರೆ ನಿನ್ನ ಬಗ್ಗೆ ಮಾತ್ರ ಏನೋ ಹೇಳಬೇಕೆಂದು ಮನದಲ್ಲಿ ಬಂದಿತು; ಹೇಳುತ್ತಿರುವೆ. ನಾನು ಹೇಳಿದ ಪ್ರಕಾರ ಒಂದೆ-ರಡು ವರ್ಷ ನಡೆದು ನೋಡು. ನೀನು ತಿರುಗಿ ದೇಶಕ್ಕೆ ಹೋದ ಬಳಿಕ ಮದುವೆಯನ್ನು ಕೂಡ ಮಾಡಿಕೊಳ್ಳಬಯಸಿದರೆ ಮಾಡಿಕೊಳ್ಳಬಹುದು. ಸುಖದಿಂದ ಸಂಸಾರವನ್ನು ಸಾಗಿಸಿಕೊಂಡು ಹೋಗಬಹುದು. ಯಾರ ಮುಂದೆಯೂ ಒಂದು ವಸ್ತುವಿಗಾಗಿ ಕೈ ಮುನ್ನೀಡಬೇಕಾಗಲಿಕ್ಕಿಲ್ಲ."

ನಾನು ಈ ಸೌಭಾಗ್ಯಕ್ಕಾಗಿ ಎಷ್ಟು ಉತ್ಕಂಠಿತನಾಗಿರುವೆನೆಂಬುದನ್ನು ಅವರು ಹೇಗೆ ಗೊತ್ತು ಹಚ್ಚಿಕೊಂಡರೊ ದೇವರೇ ಬಲ್ಲ! ಒಳಗಿಂದೊಳಗೇ ಎಲ್ಲ ಸುದ್ದಿಯು ನನಗೆ ಹತ್ತುವುದೆಂದು ಅವರು ಒಮ್ಮೆ ಎಂದಿದ್ದರು! ಅದು ಹೇಗೆ ಅವರಿಗೆ ಸುದ್ದಿಯು ಹತ್ತಿತೊ ದೇವರಿಗೇ ಗೊತ್ತು!

ಅದೇನೇ ಇರಲಿ, ಅವರು ಉಪದೇಶಿಸುವ ಉನ್ನತಿಯ ಬೀಜಮಂತ್ರವನ್ನು ಅರಿಯಲು ನಾನು ಉತ್ಕಂಠಿತನಾದೆ. ಅವರೆಂದರು "ದಾನ-ಧರ್ಮ ಮಾಡುವುದನ್ನು ಬಿಟ್ಟುಬಿಡು— ಮುಡಿಯಿಂದ ಅಡಿಯವರೆಗೆ ಬೆವರನ್ನು ಸುರಿಸಿ ಹಣ ಗಳಿಸಬೇಕಾಗುವುದು,— ನಡಮುಟ ನೆಲವನ್ನು ಅಗಿದರೂ ಹಣ ಸಿಕ್ಕುವುದಿಲ್ಲ. ತನ್ನ ರಕ್ತವನ್ನು ಹರಿಸಿ, ಸುಟ್ಟು ಗಳಿಸಿದ ಕಾಸನ್ನು ಅನ್ಯರಿಗೆ ಕೊಡುವುದೆಂದರೆ ಇಂದಿನ ಯುಗದಲ್ಲಿ ಹುಚ್ಚುತನ! ಮನೆಗೆದ್ದು ಮಾರು ಗೆದೆಯಬೇಕು. ತನ್ನ ಹೆಂಡಿರು ಮಕ್ಕಳಿಗೆ, ಪರಿವಾರದವರಿಗೆ ಹಣ ಸಾಕಷ್ಟು ಕೂಡಿಟ್ಟ ಬಳಿಕ ಹೆಚ್ಚು ಉಳಿದರಲ್ಲವೆ ದಾನ ಕೊಡೋದು? ಈ ಮಾತು ಒಂದೆಡೆಗೆ ಇರಲಿ,— ಯಾರ ಮನೆಯಲ್ಲಿ ಕಾಸು ಕಾಸಿಗೂ ಬಾಯಿ ಬಿಡಬೇಕಾಗುವುದೊ

ಅಂತಹ ಜನರಿಗೆ ಎಂದೂ ಆಶ್ರಯವನ್ನೀಯಬೇಡ. ಅವರು ಮೊದಲು ಹೆಚ್ಚು ಕೇಳದಿದ್ದರೂ ಒಂದೆರಡು ತಮ್ಮ ಕಷ್ಟ-ಕತೆಯನ್ನು ಹೇಳಿ ಒಂದೆರಡು ರೂಪಾಯಿಗಳನ್ನು ಬೇಡುವರು. ಕೊಟ್ಟ ರೂಪಾಯಿಗಳಂತೂ ತಿರುಗಿ ಬರುವ ಆಸೆಯು ಇರುವುದೇ ಇಲ್ಲ, ಹೊರಗಿನ ದೆವ್ವ ಕರೆದು ಮನೆಯೊಳಗೆ ಹೊಗಿಸಿಕೊಂಡಂತೆ! ದಿನಾಲು ಅವರ ಕೂಡ ಜಗಳಾಡಬೇಕಾದೀತು. ಹಣದಾಸೆಯನ್ನು ಬಿಡುವುದು ಬಹಳ ಕಠಿನ. ಹಣ ಪಡೆದುಕೊಂಡವರನ್ನು ಆಗಾಗ್ಗೆ ತಿರುಗಿ ತಾನು ಪಡೆದುಕೊಳ್ಳುವುದಕ್ಕಾಗಿ ಕೇಳಲೇಬೇಕಾಗುವುದು ಆಗ ಸುಮ್ಮಸುಮ್ಮಗೆ ಓಡಾಟ-ಜಗಳ ಸುರುವಾಗುವುದು. ಹೀಗೆ ಹಣ ಕೊಟ್ಟು ಜಗಳ ಮಾಡುವುದ ನಮಗೇತಕ್ಕೆ ಬೇಕು? ಅದರ ಅಗತ್ಯವಾದರೂ ಏನು? ಹಣ ಕೊಡದಿದ್ದರೆ ಆಯಿತು, ನಮ್ಮಷ್ಟಕ್ಕೆ ನಾವು ನಿಶ್ಚಿಂತೆಯಿಂದ ಇರಬಹುದು. ನೀನೇ ವಿಚಾರ ಮಾಡಿ ನೋಡು." ನಾನು ತಲೆಯಲ್ಲಾಡಿಸಿ "ಹೌದು, ನೀವು ಹೇಳುವುದು ಹದಿನಾರಾಣೆ ಸತ್ಯ" ಎಂದೆ.

ಅವರು ನನ್ನ ಮಾತು ಕೇಳಿ ಉತ್ಸಾಹಭರಿತರಾಗಿ ಹೇಳತೊಡಗಿದರು "ನೀನು ದೊಡ್ಡವರ ಮನೆಯ ಮಗ; ಆದ್ದರಿಂದ ನಾನು ಹೇಳುವ ಮಾತಿನ ತಥ್ಯವನ್ನು ಕೂಡಲೆ ತಿಳಿದುಕೊಂಡುಬಿಟ್ಟೆ. ಈ ನೀಚ ಜಾತಿಯ ಕಬ್ಬಿಣ ಕುಟ್ಟುವ— ಮಕ್ಕಳಿಗೆ ತಿಳಿಸಿ ಹೇಳಿದರೆ ತಿಳಿದುಕೊಳ್ಳುವರೇನು? ಏಳೇಳು ಜನ್ಮ ತಾಳಿ ಬಂದರೂ ಅವರಿಗೆ ತಿಳಿಯಲಿಕ್ಕಿಲ್ಲ. ಈ ಮಕ್ಕಳ ಬಳಿಯಲ್ಲಿ ತಮ್ಮದೊಂದು ಕಾಸೂ ಇರುವುದಿಲ್ಲ, ಪರರ ಮನೆಯಿಂದ ಸಾಲ ತಂದು ಪರರಿಗೆ ಕೊಟ್ಟು ಬರುವರು. ಈ ನೀಚ ಜಾತಿಯವರು ಹೀಗೆಯೆ ದುರಭಿಮಾನಿಗಳಿರುತ್ತಾರೆ!"

ಸ್ವಲ್ಪ ಹೊತ್ತು ಸುಮ್ಮಗಿದ್ದು "ನೋಡು, ರೂಪಾಯಿಗಳನ್ನು ಯಾರಿಗೂ ಎಂದಿಗೂ ಕೈಗಡ ಕೊಡಬೇಡ. ಅವರು ಬಹಳ ತೊಂದರೆ, ಕಷ್ಟ ಇದೆ ಎಂದು ಹೇಳುವರು!— ನಿಮಗೆ ಕಷ್ಟವಿದೆ— ಆದರೆ ನಮಗೇನು? ನಿಜವಾಗಿಯೂ ನಿಮಗೆ ಕಷ್ಟವಿದ್ದರೆ ಎರಡು ತೊಲಿ ಬಂಗಾರ ತಂದು ಇಡು, ಹತ್ತು ರೂಪಾಯಿ ತೆಗೆದುಕೊಂಡು ಹೋಗು! ಎಂದು ಹೇಳಬೇಕು. ತಿಳಿಯಿತಲ್ಲವೇ? ನಾನು ಹೇಳುವುದು ಸರಿಯಾಗಿದೆಯೊ ಇಲ್ಲವೊ?"

"ಹೌದು, ಸರಿಯಾಗಿದೆ!"

"ಒಂದು ಸಲವಲ್ಲ, ನೂರು ಸಲ ಸರಿಯಾಗಿದೆ! ನೋಡು, ಜಗಳದ ಸ್ಥಾನಕ್ಕೆ ಎಂದೂ ಹೋಗಬೇಡ. ಮಾರಾಮಾರಿ, ಖೂನಿ ಮಾಡುತ್ತಿದ್ದರೂ ಹೋಗಬೇಡ. ಅವರಿಂದ ನಮಗೇನು ಪ್ರಯೋಜನ? ಅನ್ಯರನ್ನು ಉಳಿಸಹೋದರೆ ನಮ್ಮ ಮೈಮೇಲೆಯೆ ಸಂಕಟ ಬರುವುದು, ನಮಗೂ ಒಂದೆರಡು ಪೆಟ್ಟುಗಳು ಬೀಳದೆ ಇರುವುದಿಲ್ಲ. ಮೇಲಾಗಿ ಯಾವುದಾದರೂ ಒಂದು ಪಕ್ಷವು ನಮ್ಮನ್ನು ಸಾಕ್ಷೀದಾರನನ್ನಾಗಿ ಮಾಡಿಕೊಳ್ಳುವುದು. ಜಗಳ ಮುಗಿದಮೇಲೆ ಮನಸ್ಸು ಬಂದರೆ ಅಲ್ಲಿಗೆ ಒಂದೆರಡು ಸಲ ಹೋಗಿ ಬಾ, ಸಲಹೆ ಕೊಟ್ಟು ಬಾ. ಐದು ಜನರಲ್ಲಿ ನಿನ್ನ ಹೆಸರಾಗುವುದು. ನಾನು ಹೇಳುವುದು ಸರಿ ಹೌದೋ ಅಲ್ಲೋ!"

ಸ್ವಲ್ಪ ಹೊತ್ತು ಸುಮ್ಮಗಿದ್ದು ಅವರು ಪುನಃ ಹೇಳತೊಡಗಿದರು "ರೋಗ-ಗೀಗ ಆದಾಗಂತೂ ನಾನು ಈ ಜನರ ಓಣಿಯೊಳಗೆ ಸಹ ಕಾಲನ್ನು ಇಡುವುದಿಲ್ಲ. ಹೋದರೆ ಈ ಜನರು 'ರಾಯರೇ, ಸಾಯುತ್ತಿದ್ದೇನೆ, ಕಷ್ಟ ಕಾಲದಲ್ಲಿ ಇದ್ದೇನೆ, ಒಂದೆರಡು ರೂಪಾಯಿಗಳನ್ನು ಕೊಟ್ಟು ಸಹಾಯ ಮಾಡಿರಿ, ಪುಣ್ಯ ಬರುವುದು!' ಎಂದು ಹೇಳತೊಡಗುವರು. ಶ್ರೀಕಾಂತಬಾಬೂ, ಮನುಷ್ಯನು ಯಾವಾಗ ಸಾಯುವನೆಂಬುದನ್ನು ಹೇಳಲಿಕ್ಕಾಗುವುದಿಲ್ಲ. ಇಂಥವರಿಗೆ ರೂಪಾಯಿ ಕೊಡುವುದೆಂದರೆ ಅವನ್ನು ಹೊಳೆಯಲ್ಲಿ ಹಾಕಿದಂತೆಯೆ. ನೀರಲ್ಲಿ ಹಾಕುವುದು ಸಾವಿರ ಪಾಲು ಉತ್ತಮವಾದೀತು, ಆದರೆ ಈ ಜನರಿಗೆ ಕೊಡುವುದು ಒಳ್ಳೆಯದಾಗಲಿಕ್ಕಿಲ್ಲ. ಇದನ್ನೂ ಮಾಡಲಿಕ್ಕೆ ನಮ್ಮಿಂದ ಆಗದಿದ್ದರೆ ರಾತ್ರಿ ಮಲಗಿಕೊಳ್ಳಲಿಕ್ಕಾದರೂ ಬನ್ನಿರಿ ಎಂದು ಹೇಳುವರು. ಬಪ್ಪರೆ! ನಾನು ಹೋಗಬೇಕಂತೆ ರಾತ್ರಿ ಅವರ ಸೇವೆ ಮಾಡಲು ಮತ್ತು ರಾತ್ರಿ ಜಾಗರಣೆ ಮಾಡಲು! ಜನರ ಸಹವಾಸ. ನಮ್ಮಮ್ಮ ದುರ್ಗಮ್ಮ, ಮೈಲೀ ಬೇನೆಯಿಂದ ನನ್ನನ್ನು ಪಾರು ಮಾಡಮ್ಮಾ!" ಇಷ್ಟು ನುಡಿದ ಬಳಿಕ ಅವರು ತಮ್ಮ ನಾಲಗೆಯನ್ನು ತಾವೇ ಕಚ್ಚಿಕೊಂಡು, ಕಿವಿಗಳನ್ನು ಹಿಂಡಿಕೊಂಡು ದುರ್ಗಮ್ಮನಿಗೆ ನಮಸ್ಕರಿಸಿ ಪುನಃ ಹೇಳತೊಡಗಿದರು "ನಾವೆಲ್ಲರೂ ಆಕೆಯ ಚರಣಗಳ ಬಳಿಯಲ್ಲಿ ಬಿದ್ದಿದ್ದೇವೆ—

ಹೇಳಬಾರದೆ ಇಂಥ ವಿಪತ್ಕಾಲದಲ್ಲಿ ನನ್ನ ಯೋಗಕ್ಷೇಮವನ್ನು ನೋಡಿ ಕೊಳ್ಳುವವರು ಯಾರು ? ''

ಈ ಸಲ ನಾನು ಅವರ ಮಾತಿಗೆ ಒಪ್ಪಿಗೆಯನ್ನು ಕೊಡಲಿಲ್ಲ. ನಾನು ಸುಮ್ಮಗಿದ್ದುದನ್ನು ನೋಡಿ ಅವರು ಸ್ವಲ್ಪ ಗೊಂದಲದಲ್ಲಿ ಬಿದ್ದರು. ಬಳಿಕ ಹೀಗೆಂದರು " ನೋಡಬಾರದೆ ಜನರನ್ನು ? ಅವರು ಇಂಥ ಸ್ಥಳ ಗಳಿಗೆ ಎಂದಾದರೂ ಹೋಗುತ್ತಾರೇನು ? ಎಂದಿಗೂ ಇಲ್ಲ. ತಮ್ಮ ಕಾರ್ಡನ್ನು ಕಳಿಸಿಬಿಟ್ಟರೆ ಆಯಿತು ಅವರ ಕೆಲಸ ! ಆದ್ದರಿಂದಲೇ ಉನ್ನತಿಯು ಇಷ್ಟು ಆಗಿದೆ ! ನೆಟ್ಟಗಾದ ಬಳಿಕ ಪುನಃ ಮೊದಲಿ ನಂತೆಯೆ ಗೆಳೆತನ, ಮಾತುಕತೆ ಆದ್ದರಿಂದ ಯಾರನ್ನೂ ಹಚ್ಚಿಕೊಳ್ಳುವ ಹವ್ಯಾಸಕ್ಕೆ, ಯಾರ ಜಗಳನ್ನಾದರೂ ತೀರಿಸಲಿಕ್ಕೆ ಹೋಗದಿರುವುದೇ ಒಳಿತು ಶ್ರೀಕಾಂತಬಾಬೂ. ''

ಕಚೇರಿಗೆ ಹೋಗುವ ವೇಳೆಯಾದುದರಿಂದ ನಾನು ಎದ್ದುನಿಂತೆ. ಈ ಜ್ಞಾನಿಗಳಾದ ಮುದುಕರ ಸಲಹೆಯಿಂದ ನಾನು ಉನ್ನತಿಯನ್ನು ಮಾಡಿಕೊಳ್ಳುವಷ್ಟು ಬುದ್ಧಿಯೂ ವಯಸ್ಸೂ ನನ್ನದು ಇರಲಿಲ್ಲ ಎಂದಲ್ಲ. ಆದರೆ ಅವರ ಯಾವ ಮಾತೂ ನನ್ನ ಮನದಲ್ಲಿ ನಾಟಲಿಲ್ಲ; ಆಂದೋಲವನ್ನು ಉಂಟು ಮಾಡಲಿಲ್ಲ. ಏಕೆಂದರೆ ಇಂಥ ಅನುಭವ ಇದ್ದ ವ್ಯಕ್ತಿಗಳ ಅಭಾವವನ್ನು ನಾನು ಹಳ್ಳಿಯಲ್ಲಿ ಕಂಡಿಲ್ಲ. ಅವರ ಹೆಸರು ಬೇಕಾದಷ್ಟು ಕೆಟ್ಟಿರಲಿ, ಅವರು ಇಂಥ ಉಪದೇಶಗಳನ್ನು ಕೊಡಲು ಉಪಾಯವನ್ನು ಹೇಳಲು ಜಿಪುಣತನವನ್ನು ಮಾಡುವರೆಂಬ ಅಪವಾದವು ಅವರ ಮೇಲಿದೆ ಎಂಬುದನ್ನೂ ನಾನೆಂದೂ ಕೇಳಿಲ್ಲ. ಸಾಮಾಜಿಕ ಜೀವನದಲ್ಲಿ ಈ ಉಪಾಯವು ಸಫಲವಾದಷ್ಟು ಪಾರಿ ವಾರಿಕ ಜೀವನದಲ್ಲಿ ಆಗದಿದ್ದರೂ ಪರವಾ ಇಲ್ಲ. ದೇಶದ ಜನರು ಈ ಸಲಹೆಯು ಒಳ್ಳೆಯದೆಂದು ಒಪ್ಪಿಕೊಂಡಿರುವರು, ಜೀವನಯಾತ್ರೆ ಯನ್ನು ಸುಗಮವಾಗಿ ಸಾಗಿಸಲು ಹೇಳಿದ ಈ ಉಪಾಯವು ನಿಸ್ಸಂದಿಗ್ಧ ವಾಗಿಯೂ ಒಳಿತಾದುದೆಂದು ಒಪ್ಪಿರುವರು.

ಬಂಗಾಲಿ ಗೃಹಸ್ಥನ ಯಾವನಾದರೂ ಒಬ್ಬ ಹುಡುಗನು ಇಂಥ ಜನರ ಸಲಹೆಯ ಮೇರೆಗೆ ಅಕ್ಷರಶಃ ನಡೆಯತೊಡಗಿದರೆ ಅವನ ತಂದೆ ತಾಯಂದಿರು ಅಸಂತುಷ್ಟರಾಗುವರು — ಬಂಗಾಲಿ ತಂದೆ ತಾಯಂದಿರ

ವಿರುದ್ಧವಾಗಿ ಈ ಆರೋಪವನ್ನು ಹೊರಿಸಿ ಅವರ ಹೆಸರಿಗೆ ಕಲಂಕವನ್ನು ಹಚ್ಚಿ ಅವರ 'ಬದನಾಮಿ'ಯನ್ನು ಮಾಡುವ ಕೆಲಸಕ್ಕೆ ಪುಲೀಸ್ ಸಿ. ಆಯ್. ಡಿ. ಜನರ ವಿವೇಕವೂ ಅಡ್ಡ ಬಂದೀತು. ಅದೇನೇ ಇರಲಿ, ಈ ಪ್ರತಿಜ್ಞೆಯಲ್ಲಿ ಎಷ್ಟು ದೊಡ್ಡ ಅಪರಾಧವಿದ್ದಿತೆಂಬುದನ್ನು ಒಂದೆರಡು ವಾರಗಳಲ್ಲಿಯೇ ದೇವರು ನನ್ನೆದುರಿನಲ್ಲಿ ಇವರ ಮುಖಾಂತರವಾಗಿ ಸಪ್ರಮಾಣವಾಗಿ ಸಿದ್ಧ ಮಾಡಿಕೊಟ್ಟನು.

ಅಂದಿನಿಂದ ನಾನು ಅಭಯಾನ ಮನೆಗೆ ಹೋಗಿದ್ದಿಲ್ಲ. ನಾನು ಆಕೆಯ ಸ್ಥಿತಿಯೊಡನೆ ಆಕೆಯ ಎಲ್ಲ ಮಾತುಗಳನ್ನು ಮೊದಲಿನಿಂದ ಕೊನೆಯವರೆಗೆ ಹೋಲಿಸಿ, ನನ್ನ ಜ್ಞಾನ ಚಕ್ಷುವಿನಿಂದ ನೋಡಬಲ್ಲವನಾಗಿದ್ದೆನೆಂಬುದು ಸತ್ಯವಾದದು; ಆಕೆಯ ವಿಚಾರ ಸ್ವಾತಂತ್ರ್ಯ, ಆಕೆಯ ನಿರ್ಭಯವಾದ ಆಚರಣೆ, ಅವರ ಪರಸ್ಪರ ಸುಂದರ ಹಾಗೂ ಅಸಾಧಾರಣ ಸ್ನೇಹ ಇವೆಲ್ಲವೂ ನನ್ನ ಬುದ್ಧಿಯನ್ನು ಆಕೆಯ ಕಡೆಗೆ ಯಾವಾಗಲೂ ಎಳೆಯುತ್ತಿದ್ದುವು ಎಂಬುದೂ ಸತ್ಯವಾದುದು; ಆದರೆ ನನ್ನ ಜೀವನದಲ್ಲಿ ಸಂಚಿತವಾದ ಸಂಸ್ಕಾರವು ಅತ್ತ ಕಡೆಗೆ ನನ್ನ ಕಾಲುಗಳನ್ನು ಇಕ್ಕಲಿಕ್ಕೆ ಅವಕಾಶವನ್ನು ಕೊಡುತ್ತಿರಲಿಲ್ಲ. ಆಗಾಗ್ಗೆ ನನ್ನ ಮನದಲ್ಲಿ ಇದೊಂದೇ ಮಾತು ಏಳುತ್ತಿದ್ದಿತು-- ನನ್ನ ಅನ್ನದಾ ಜೀಜೀಯು ಹೀಗೆ ಮಾಡುತ್ತಿರಲಿಲ್ಲ. ಆಕೆಯು ದಾಸಿಯ ಕೆಲಸವನ್ನು ಮಾಡಿ ನಾಚಿಕೆ, ಅಪಮಾನ ಮತ್ತು ದುಃಖದಿಂದ ತನ್ನ ಜೀವನವನ್ನು ಕಳೆಯುತ್ತಿದ್ದಳು, ಆದರೆ, ಬ್ರಹ್ಮಾಂಡದ ಸರ್ವ ಸುಖಗಳಿಗಾಗಿ ತಾನು ಕೈ ಹಿಡಿದ ಗಂಡನನ್ನು ಬಿಟ್ಟು ಉಳಿದ ಗಂಡಸಿನೊಡನೆ ಮನೆ ಕಟ್ಟಲು ಸಿದ್ಧಳಾಗುತ್ತಿರಲಿಲ್ಲ. ಆಕೆಯು ಅಂತಃಕರಣದಿಂದ ತನ್ನನ್ನು ದೇವರಿಗೆ ಅರ್ಪಿಸಿಬಿಟ್ಟಿದ್ದಳೆಂಬುದನ್ನು ನಾನು ಬಲ್ಲೆ. ಆಕೆಯು ತನ್ನ ಸಾಧನೆಯ ಬಲದಿಂದ ದೊರಕಿಸಿದ ಪಾವಿತ್ರ್ಯದ ಜ್ಞಾನ ಮತ್ತು ಕರ್ತವ್ಯದ ಜ್ಞಾನ ಅಭಯಾಳ ತೀಕ್ಷ್ಣ ಬುದ್ಧಿಯ ಮೀಮಾಂಸೆಯ ಎದುರಿಗೆ ಮಕ್ಕಳ ಆಟವಾಗಿದ್ದಿತೇನು ?

ಈಗ ಒಮ್ಮೆಗೆ ಅಭಯಾಳ ಒಂದು ಮಾತು ನೆನಪಿಗೆ ಬಂದಿತು. ಆಗ ಆಕೆಯು ಎಂದಿದ್ದಳು "ಶ್ರೀಕಾಂತಬಾಬೂ, ದುಃಖವನ್ನು ಭೋಗಿಸುವುದರಲ್ಲಿಯೂ ಒಂದು ಬಗೆಯ ವಿನಾಶಕ ಮೋಹವುಂಟು.

ಕಷ್ಟತ ಗುಡ್ಡದಷ್ಟು ದುಃಖವನ್ನು ಸಹಿಸದ ಹೊರತು ಯಾವ ದೊಡ್ಡ ಫಲವೂ ಸಿಕ್ಕದು. ಎಂಬುದನ್ನು ಮನುಷ್ಯನು ತನ್ನ ಯುಗಯುಗಾಂತರಗಳಿಂದ ಬಂದ ಜೀವನಯಾತ್ರೆಯಲ್ಲಿ ಮನಗಂಡಿರುವ. ಜೀವನವೆಂಬ ತಕ್ಕಡಿಯ ಪರಡಿಯಲ್ಲಿ ದುಃಖದ ಕಲ್ಲನ್ನು ಹೇರಿದಷ್ಟು ಮೇಲಕ್ಕೆ ಇನ್ನೊಂದು ಪರಡಿಯಲ್ಲಿ ಸುಖವು ಏರಿ ಬರುವುದು ಎಂಬ ಭ್ರಮೆಯನ್ನು ಸತ್ಯವೆಂದು ತನ್ನ ಅನುಭವದಿಂದ ಅರಿತುಕೊಂಡಿರುವ. ಆದುದರಿಂದ ಮನುಷ್ಯನು ಪ್ರಪಂಚದಲ್ಲಿ ತನ್ನ ಸಹಜವಾದ ಮತ್ತು ಸ್ವಾಭಾವಿಕವಾದ ಪ್ರವೃತ್ತಿಯನ್ನು ತನ್ನ ಇಚ್ಛಾನುಸಾರವಾಗಿ ತೊರೆದು ಮತ್ತು 'ನಾನು ತಪಶ್ಚರ್ಯ ಮಾಡುತ್ತೇನೆ' ಎಂದು ಬಗೆದು ನಿರಾಹಾರದಿಂದ ತಿರುಗುತ್ತಿರುವಾಗ ಅವನಿಗೆ ಉಣ್ಣುವುದಕ್ಕಾಗಿ ಎಲ್ಲಿಯೊ ನಾಲ್ಕು ಪಟ್ಟು ಆಹಾರವು ಸಂಚಿತವಾಗುತ್ತಿರುವುದು ಎಂಬ ಮಾತಿನ ಬಗೆಗೆ ಅವನ ಮಠದಲ್ಲಿಯೂ ಸಂದೇಹವು ಹುಟ್ಟುವುದಿಲ್ಲ, ಮತ್ತಾರ ಮನದಲ್ಲಿಯೂ ಸಂಶಯವು ತಲೆದೋರುವುದಿಲ್ಲ. ಆದ್ದರಿಂದಲೇ ಯಾವನಾದರೊಬ್ಬ ಸಂನ್ಯಾಸಿಯು ಅತ್ಯಂತ ದಾರುಣ ಚಳಿಯಲ್ಲಿ ಕಂಟಮಟ ನೀರಲ್ಲಿ ಮುಳುಗಿ ನಿಂತಿರುವಾಗ, ಬೇಸಗೆಯ ಭೀಷಣ ಬಿಸಿಲಿನಲ್ಲಿ ಅಗ್ನಿಯನ್ನು ಹೊತ್ತಿಸಿಕೊಂಡು ಅದರ ಬಳಿಯಲ್ಲಿ ಶೀರ್ಷಾಸನವನ್ನು ಹಾಕಿರುವಾಗ ಜನರು ಅವನ ದುಃಖಭೋಗದ ಕಠೋರತೆಯನ್ನು ಕಂಡು ದುಃಖವನ್ನು ಅನುಭವಿಸುವರು, ಅಷ್ಟೇ ಅಲ್ಲದೆ ಅವನ ಬಗೆಗೆ ಮುಗ್ಧರಾಗಿ ಬಿಡುವರು. ಮುಂದೆ ಅವನಿಗೆ ಸಿಗಬಹುದಾದ ಸುಖದ ಅಸಂಭವನೀಯ ಲೆಕ್ಕವನ್ನು ಹಾಕಿ ನೋಡಿದಾಗ ಆ ಜನರ ಲುಬ್ಧಚಿತ್ತವು ಹೊಟ್ಟೆಕಿಚ್ಚಿನಿಂದ ತಳಮಳಿಸುವದು ಮತ್ತು ಅವರು ಆ ಶೀರ್ಷಾಸನವನ್ನು ಹಾಕಿ ತಪ ಮಾಡುತ್ತಿರುವವನೇ ಈ ಜಗತ್ತಿನಲ್ಲಿ ಧನ್ಯನೆಂದು ತಿಳಿಯುವರು. ಮನುಷ್ಯ ದೇಹವನ್ನು ಧಾರಣ ಮಾಡಿದ ಬಳಿಕ ಮಾಡಲು ಯೋಗ್ಯವಾದ ಕೆಲಸವನ್ನು ಅವನೇ ಮಾಡುತ್ತಿರುವನೆಂದು ಬಗೆಯುವರು, ನಾವಂತೂ ಏನನ್ನೂ ಮಾಡುತ್ತಿರುವುದಿಲ್ಲ, ವ್ಯರ್ಥವಾಗಿ ಜೀವನವನ್ನೇ ಹಾಳು ಮಾಡುತ್ತಿರುವೆವು ಎಂದು ಯೋಚಿಸುವರು. ಈ ರೀತಿಯಾಗಿ ಅವರು ತಾವೇ ತಮ್ಮನ್ನು ಸಾವಿರಾರು ಸಲ ಧಿಕ್ಕರಿಸಿಕೊಳ್ಳುತ್ತ ಮಲಿನ ಮನದಿಂದ ತಮ್ಮ ತಮ್ಮ ಮನೆಗೆ ಹಿಂತಿರುಗುವರು. ಶ್ರೀಕಾಂತ

ಬಾಬೂ, ಸುಖವನ್ನು ಪಡೆದುಕೊಳ್ಳುವುದಕ್ಕಾಗಿ ದುಃಖ ಪಡೆಯಬೇಕೆಂಬುದು ಸತ್ಯವಾದ ಮಾತೇ .ಸರಿ. ಆದರೆ, ಅದಕ್ಕೋಸ್ಕರವಾಗಿಯೆ ಹೇಗಾದರೂ ಸರಿ, ದುಃಖವನ್ನು ಅನುಭವಿಸಿದ ಮಾತ್ರಕ್ಕೇ ಸುಖವು ತಾನಾಗಿಯೆ ನಮ್ಮ ಬಳಿಗೆ ಓಡಿ ಬರುವುದಿಲ್ಲ. ಸುಖವು ತಾನಾಗಿ ಬರುವುದೆಂಬ ಮಾತು ಈ ಕಾಲದಲ್ಲಿಯೂ ಸತ್ಯವಾದುದಾಗಿರುವುದಿಲ್ಲ, ಭವಿಷ್ಯದಲ್ಲಿಯೂ ಸತ್ಯವಾಗಿರುವುದಿಲ್ಲ. ''

" ಅದರೆ, ವಿಧವೆಯ ಬ್ರಹ್ಮಚರ್ಯ— " ಎಂದು ನಾನು ಮಾತನಾಡತೊಡಗಿದಕೂಡಲೆ ಅಭಯಾ ನಡುವೇ ನನ್ನನ್ನು ತಡೆದು ಎಂದಳು " ವಿಧವೆಯ 'ಆಚರಣೆ' ಎಂದು ಹೇಳಿರಿ-- ಆಕೆಯ ಕೂಡ 'ಬ್ರಹ್ಮ'ನ ಸಂಬಂಧವು ಎಳ್ಳಷ್ಟೂ ಇರುವುದಿಲ್ಲ. ವಿಧವೆಯ ಆಚರಣೆಯೆ ಬ್ರಹ್ಮ ಪ್ರಾಪ್ತಿಯ ಸಾಧನವಾಗಿರುವುದು ಎಂಬುದನ್ನು ನಾನು ಒಪ್ಪುವುದಿಲ್ಲ. ವಾಸ್ತವಿಕವಾಗಿ ನೋಡಿದರೆ ಅದು ಸಾಧನೆಯೆ ಅಲ್ಲ. ಕುಮಾರಿಯರು, ಸಧವೆಯರು, ವಿಧವೆಯರು ಎಲ್ಲರೂ ತಮ್ಮ ತಮ್ಮ ದಾರಿಯನ್ನು ಅನುಸರಿಸಿ ಬ್ರಹ್ಮನನ್ನು ಪಡೆಯಬಹುದು. ವಿಧವೆಯ ಆಚರಣೆಯನ್ನೇ ಇದಕ್ಕೋಸ್ಕರ ಮೀಸಲಾಗಿ ಇಟ್ಟಿಲ್ಲ. "

ನಾನು ನಕ್ಕು " ಸರಿ, ಸರಿ, ಹಾಗೇ ಆಗಲಿ. ಆಕೆಯ ಆಚರಣೆಯು ಬ್ರಹ್ಮಚರ್ಯವಾಗದಿದ್ದರೆ ಅಷ್ಟೇ ಹೋಯಿತು, ಹೆಸರಿನಿಂದ ಆಗಹೋಗಬೇಕೇನಾಗಿದೆ ? " ಎಂದು ನುಡಿದೆ.

ಅಭಯಾ ಸ್ವಲ್ಪ ಸಿಟ್ಟಾಗಿ '' ಹೆಸರೇ ಎಲ್ಲಕ್ಕೂ ದೊಡ್ಡದು ಶ್ರೀಕಾಂತಬಾಬೂ. ಹೆಸರನ್ನು ಬಿಟ್ಟರೆ ಜಗತ್ತಿನಲ್ಲಿ ಇರುವುದಾದರೂ ಏನು ? ತಪ್ಪು ಹೆಸರುಗಳ ಮಧ್ಯದೊಳಗಿಂದ ಮನುಷ್ಯನ ಬುದ್ಧಿಯ, ವಿಚಾರಶೀಲತೆಯ ಮತ್ತು ಜ್ಞಾನದ ಪ್ರವಾಹವನ್ನು ಎಷ್ಟು ದೊಡ್ಡ ತಪ್ಪುಗಳ ನಡುವೆ ಹರಿಯಿಸಬಹುದೆಂಬುದು ನಿಮಗೆ ಗೊತ್ತಿಲ್ಲವೆ ? ಈ ಹೆಸರಿನ ಭ್ರಮೆಯಲ್ಲಿ ಬಿದ್ದೇ ಎಲ್ಲ ದೇಶಗಳೂ ಸದಾ ಸರ್ವ ಕಾಲದಲ್ಲಿಯೂ ವಿಧವೆಯ ಆಚರಣೆಯೆ ಸರ್ವ ಶ್ರೇಷ್ಠವೆಂದು ಒಪ್ಪುತ್ತ ಬಂದಿರುವುವು. ಇದು ನಿರರ್ಥಕ ತ್ಯಾಗದ ಮಹಿಮೆ ಶ್ರೀಕಾಂತಬಾಬೂ, ಅತ್ಯಂತ ವ್ಯರ್ಥ ಮತ್ತು ಅತ್ಯಂತ ತಪ್ಪಾದುದು ಶ್ರೀಕಾಂತಬಾಬೂ. ಇಹಲೋಕದಲ್ಲಿಯೂ ಪರಲೋಕದಲ್ಲಿಯೂ ಮನುಷ್ಯನನ್ನು ಪಶು-

ವನ್ನಾಗಿ ಮಾಡುವ ಮಾಟದ ಕೋಲು ಇದನ್ನು ಬಿಟ್ಟರೆ ಬೇರೊಂದಿರಲಿಕ್ಕಿಲ್ಲ ಶ್ರೀಕಾಂತಬಾಬೂ." ಎಂದಳು.

ಆಗ ನಾನು ಚರ್ಚೆಯನ್ನು ಮಾಡುವ ಗೊಡವೆಗೆ ಹೋಗದೆ ಸುಮ್ಮನಾಗಿಬಿಟ್ಟೆ. ವಾಸ್ತವಿಕವಾಗಿ ನೋಡಿದರೆ ಆಕೆಯನ್ನು ಚರ್ಚೆಯಲ್ಲಿ ಸೋಲಿಸುವುದು ಅಸಂಭವವೇ ಆಗಿದ್ದಿತು. ಮೊಟ್ಟಮೊದಲು ಹಡಗದಲ್ಲಿ ಆಕೆಯೊಡನೆ ಪರಿಚಯವಾದಾಗ ಡಾಕ್ಟರರು ಆಕೆಯನ್ನು ಕೇವಲ ಹೊರಗೆ ನಿಂತುಕೊಂಡೇ ತಮಾಷೆಯಿಂದ "ಈ ಹೆಂಗಸು ಬಹಳ 'ಫಾರ್ವರ್ಡ' ಇದ್ದಾಳೆ" ಎಂದು ಹೇಳಿದ್ದರು. ಆಗ ಈ 'ಫಾರ್ವರ್ಡ' ಶಬ್ದದ ಅರ್ಥವು ಎಲ್ಲೆಲ್ಲಿಯವರೆಗೆ ವಿಸ್ತರಿಸಿ ಹೋಗಬಲ್ಲದೆಂಬುದನ್ನು ನಮ್ಮಿರ್ವರಲ್ಲಿ ಒಬ್ಬನೂ ಯೋಚಿಸಿರಲಿಲ್ಲ! ಈ ರಮಣಿಯು ತನ್ನ ಸಮಸ್ತ ಅಂತಃಕರಣವನ್ನು ಎಷ್ಟು ಅಕುಂಠಿತ ತೇಜದಿಂದ ಬಿಚ್ಚಿ ಸಮಸ್ತ ಪ್ರಪಂಚದ ಇದಿರಿನಲ್ಲಿ ಇಡಬಲ್ಲಳು ಎಂಬುದನ್ನೂ ಜನರ ಅಭಿಪ್ರಾಯದ ಕಡೆಗೆ ಗಮನವನ್ನೆ ಕೊಡುವುದಿಲ್ಲ ಎಂಬ ಮಾತನ್ನೂ ನಾವು ಆಗ ಯೋಚಿಸಿರಲಿಲ್ಲ. ಅಭಯಾ ಕೇವಲ ತನ್ನ ಅಭಿಪ್ರಾಯವೇ ಅಭಿಮತವೇ ಯೋಗ್ಯವಾದುದು ಎಂಬುದನ್ನು ಪ್ರತಿಪಾದಿಸಲು ವಾಗ್ವಾದ ಮಾಡುವುದಿಲ್ಲ— ಆದರೆ ತಾನು ಮಾಡಿದ ಕಾರ್ಯದಲ್ಲಿ ವಿಜಯವನ್ನು ಸಂಪಾದಿಸಲು ನಿಜವಾದ ವಾಗ್ಯುದ್ಧವನ್ನು ಮಾಡುವಳು. ಆಕೆಯ ಮಾತು ಒಂದಾದರೆ ಕೆಲಸ ಒಂದು ನಾವು ಎನ್ನಲಾರೆವು- ಮಾತು-ಕೆಲಸ ಇವೆರಡರಲ್ಲಿಯೂ ಆಕೆಯು ಸಾಮಂಜಸ್ಯವನ್ನು ಉಂಟುಮಾಡುತ್ತಾಳೆ. ಮಾತು ಆಡಿದಂತೆ ಕೆಲಸ ಮಾಡುವಳು. ಆದುದರಿಂದಲೇ ಆಕೆಯ ಮಾತಿಗೆ ಉತ್ತರ ಕೊಡಬೇಕೆಂದು ನಾನು ಹೊರಟಾಗ ನನ್ನ ಬಾಯೇ ಕಟ್ಟಿ ಹೋಗುತ್ತಿದ್ದಿತು. ನಾನು ಅಪ್ರತಿಭನಾಗಿ ಬಿಡುತ್ತಿದ್ದೆ. ಆದರೆ ಹಿಂತಿರುಗಿ ನಾನು ನನ್ನ ಬಿಡಾರಕ್ಕೆ ಬಂದಬಳಿಕ 'ಇದು ಆಕೆಯ ದರ್ಪದ ಉತ್ತರವಿದ್ದಿತಲ್ಲ!' ಎಂದು ಯೋಚಿಸುತ್ತಿದ್ದೆ. ಒಳ್ಳೆದು, ಇರಲಿ ಬಿಡಿರಿ. ಅದೇನೇ ಇರಲಿ, ಇಂದಿನವರೆಗೆ ಆಕೆಯ ಬಗ್ಗೆ ಇರುವ ನನ್ನ ಮನದ ದುಗುಡವು, ಅವಹೇಳನೆಯು ದೂರವಾಗಿರುವುದಿಲ್ಲ. ನಾನು ನನ್ನನ್ನೇ ಎಷ್ಟೋ ಸಲ ಪ್ರಶ್ನೆ ಮಾಡಿಕೊಳ್ಳುತ್ತಿದ್ದೆ. ಇದನ್ನು ಬಿಟ್ಟರೆ ಅಭಯಾಳಿಗೆ ಬೇರೆ ಉಪಾಯವೇನಿದ್ದಿತು ? ಇದಕ್ಕೆ

ವಿರುದ್ಧವಾಗಿ ನನ್ನ ಮನವೂ ಅಷ್ಟೇ ಬಲವಾಗಿ ಎದ್ದು ನಿಲ್ಲುವುದು. ನಾನು ನನ್ನ ಮನಕ್ಕೆ 'ಆಕೆಯ ವಿರುದ್ಧವಾಗಿ ನಿಲ್ಲಲು, ಆಕೆಯಲ್ಲಿ ಅಶ್ರದ್ಧೆಯನ್ನು ಇಡಲು ನಿನಗೆ ಅಧಿಕಾರವಿಲ್ಲ' ಎಂದು ಬಗೆಬಗೆಯಾಗಿ ತಿಳಿಸಿ ಹೇಳಿದರೂ ನನ್ನ ಮನವು ಅವ್ಯಕ್ತ ಅರುಚಿಯಿಂದ ತುಂಬಿ ತುಳುಕತೊಡಗಿದ್ದಿತು.

ಮನದ ಈ ಅಸ್ಥಿರ ಅವಸ್ಥೆಯಲ್ಲಿ, ಕುಂಠಿತ ಅವಸ್ಥೆಯಲ್ಲಿ, ಅಪ್ರಸನ್ನ ಅವಸ್ಥೆಯಲ್ಲಿಯೆ ನನ್ನ ದಿನಗಳು ಕಳೆಯುತ್ತಿದ್ದುವು. ಆದುದರಿಂದ ನನಗೆ ಆಕೆಯ ಬಳಿಗೆ ಹೋಗಲಿಕ್ಕೂ ಆಗುತ್ತಿರಲಿಲ್ಲ, ಆಕೆಯನ್ನು ಪರಿಪೂರ್ಣವಾಗಿ ಮನದಿಂದ ದೂಡಲಿಕ್ಕೂ ಆಗುತ್ತಿರಲಿಲ್ಲ.

ಇಂಥ ಸಮಯದಲ್ಲಿ ಒಮ್ಮೆಗೆ ಒಂದು ದಿನ ಪ್ಲೇಗು ಪಟ್ಟಣದಲ್ಲಿ ತಲೆದೋರಿತು ಮತ್ತು ತನ್ನ ಮುಸುಕನ್ನು ತೆರೆಯಿತು, ತನ್ನ ಕಪ್ಪು ಮುಖವನ್ನು ತೋರಿಸಿತು. ಅಯ್ಯಯ್ಯೊ! ಅದನ್ನು ಸಮುದ್ರದಾಚೆ ತಡೆದು ಓಡಿಯಲು ಮಾಡಿದ ಲಕ್ಷ ಕೋಟಿ ಯಂತ್ರ ಮಂತ್ರ ಮಾಡಲಾಯಿತು, ಕಠೋರ ಶಾಸನ ವಿಧಿಸಿದರು ಅಧಿಕಾರಿಗಳು; ಎಚ್ಚರವನ್ನೂ ತೆಗೆದುಕೊಂಡರು. ಆದರೆ ಎಲ್ಲವೂ ಮುಹೂರ್ತ ಮಾತ್ರದಲ್ಲಿ ಮಣ್ಣುಗೂಡಿ ಹೋಯಿತು! ಜನರಲ್ಲಿ ಮೇರೆಯಿಲ್ಲದಷ್ಟು ಅಂಜಿಕೆಯು ಹುಟ್ಟಿತು. ಪಟ್ಟಣದ ಮುಕ್ಕಾಲುವಾಸಿ ಜನರು ನೌಕರದಾರರು ಇಲ್ಲವೆ ವ್ಯಾಪಾರಸ್ಥರು ಇದ್ದರು. ಆದುದರಿಂದ ಅವರು ಊರು ಬಿಟ್ಟು ದೂರ ಹೋಗುವಂತೆಯೂ ಇರಲಿಲ್ಲ. ಕೋಣೆಯ ಬಾಗಿಲ ಮತ್ತು ಕಿಡಿಕಿಗಳನ್ನೆಲ್ಲ ಮುಚ್ಚಿ ಚುಚುಂದರಿಯನ್ನು ಹಚ್ಚಿದಂತಾಯಿತು. ಆ ಬೀದಿಯ ಜನರು ತಮ್ಮ ಹೆಂಡಿರು ಮಕ್ಕಳನ್ನು ಕಳೆದುಕೊಂಡು, ಗಂಟುಮೂಟೆ ಹೊತ್ತುಕೊಂಡು ಈ ಬೀದಿಗೆ ಓಡುತ್ತಿದ್ದರು, ಈ ಬೀದಿಯವರು ಆ ಬೀದಿಗೆ! ಬಾಯಿಂದ 'ಇಲಿ' ಎಂದು ಶಬ್ದವು ಹೊರಬಿದ್ದಿತೊ ಇಲ್ಲವೊ ಪ್ರಾಣದ ಭಯ ತೋರೆದು ಓಡುತ್ತಿದ್ದರು! ಅವನು ಸತ್ತ, ಇವನು ಸತ್ತ ಎಂಬ ಸುದ್ದಿಯನ್ನೂ ಅವನು ಜೀವಿಸಿರುವ, ಇವನು ಜೀವಿಸಿರುವ ಎಂಬ ಸುದ್ದಿಯನ್ನೂ ಬೀರಲು ಮೊದಲು ಮಾಡುತ್ತಿದ್ದರು! ಮರಗಳಲ್ಲಿ ತೂಗಾಡುವ ಹಣ್ಣುಗಳಿಗೆ ಗಾಳಿ ತಗಲಿದ ಕೂಡಲೆ ಹೇಗೆ ಬೀಳುವವೊ ಹಾಗೆ ಜನರ ಪ್ರಾಣಗಳಿಗೆ ಪ್ಲೇಗಿನ ಗಾಳಿಯು ತಗಲಿ

ದೊಡನೆ ಎಲ್ಲಿ ಪಟಪಟ ಉದುರಿ ಬಿದ್ದು ಸಾಯುವುವೊ ಎಂಬಂತೆ ಆಯಿತು ಪಟ್ಟಣದ ಗತಿ.

ಆ ದಿನ ಶನಿವಾರವಿದ್ದಿತು. ಒಂದು ಸಾಧಾರಣ ಕಾರ್ಯಕ್ಕಾಗಿ ನಾನು ಮುಂಜಾನೆಯೆ ಮನೆಯಿಂದ ಹೊರಬಿದ್ದೆ. ಪಟ್ಟಣದ ನಟ್ಟ ನಡುವಿನ ಒಂದು ಬೀದಿಯಲ್ಲಿ ನಾನು ಹೋಗುತ್ತಿದ್ದೆ. ಆಗ ಒಂದು ಎರಡು ಅಂತಸ್ತಿನ ಹಳೆಯ ಮನೆಯ ಮಾಳಿಗೆಯ ಮೇಲೆ ಹೊರಗೆ ನಿಂತು ಮನೋಹರ ಚಕ್ರವರ್ತಿಯು ನನ್ನನ್ನು ಕೂಗಿದರು.

ನಾನು ಕೈಯಲ್ಲಾಡಿಸಿ "ವೇಳೆಯಿಲ್ಲ" ಎಂದೆ.

ಅವರು ಅತ್ಯಂತ ವಿನಯದಿಂದ "ಸ್ವಲ್ಪ ಮೇಲಕ್ಕೆ ಬನ್ನಿರಿ ಶ್ರೀಕಾಂತಬಾಬೂ, ಅತ್ಯಂತ ಸಂಕಟದಲ್ಲಿರುವೆ" ಎಂದರು.

ಕೊನೆಗೆ ನನಗೆ ಇಚ್ಛೆಯಿಲ್ಲದಿದ್ದರೂ ಮೇಲೆ ಹೋಗಲೇಬೇಕಾಯಿತು. ಮನುಷ್ಯನ ಪ್ರತಿಯೊಂದು ಆಗುಹೋಗು ಮೊದಲೇ ನಿಶ್ಚಿತ ಕೂಡಲ್ಪಟ್ಟಿರುವುದೇ ಎಂದು ನಾನು ಆಗಾಗ್ಗೆ ಯೋಚಿಸುತ್ತಿರುವೆ! ಇಲ್ಲದೆ ಹೋಗಿದ್ದರೆ, ನನಗೆ ಅಂತಹ ಕೆಲಸವೇನೂ ಇರಲಿಲ್ಲ, ನಾನೆಂದೂ ಈ ಓಣಿಗೆ ಬಂದಿರಲಿಲ್ಲ, ಈ ದಿನವೇ ಮುಂಜಾನೆ ನಾನೇಕೆ ಈ ಓಣಿಗೆ ಬರಬೇಕಾಗಿತ್ತು ?

ನಾನು ಹತ್ತಿರ ಹೋಗಿ "ಬಹಳ ದಿನಗಳಿಂದ ನೀವು ಅತ್ತ ಕಡೆಗೆ ಬಂದೇ ಇಲ್ಲ— ನೀವು ಇದೇ ಮನೆಯಲ್ಲಿ ಇರುವಿರೇನು?" ಎಂದೆ.

"ಇಲ್ಲ ಮಹನಿಯರೇ, ಇಲ್ಲಿಗೆ ಬಂದು ಹತ್ತು ಹನ್ನೆರಡು ದಿನಗಳು ಮಾತ್ರ ಆದವು. ಒಂದು ತಿಂಗಳಾಯಿತು 'ಡಿಸೆಂಟ್ರಿ' (ಅತಿಸಾರ)ಯಿಂದ ಬಳಲುತ್ತಿದ್ದೇನೆ, ಮೇಲಾಗಿ ನಮ್ಮ ಓಣಿಯಲ್ಲಿ ಪ್ಲೇಗು ಸುರುವಾಯಿತು! ಏನು ಮಾಡಲಿ ಮಹಾಶಯರೇ, ಏಳಲಿಕ್ಕೂ ಸಾಮರ್ಥ್ಯವಿಲ್ಲ. ಹಾಗೂ ಹೀಗೂ ಮಾಡಿ ಎದ್ದು ಓಡಿ ಬಂದೆ." ಎಂದು ನುಡಿದರು ಅವರು.

"ನೀವು ಬಂದುದು ಒಳ್ಳೆಯದೆ ಆಯಿತು."

"ಒಳ್ಳೆದಾಯಿತೆಂದು ಹೇಗೆ ಹೇಳಲಿ ಮಹಾಶಯರೆ, ನನ್ನ ಕಂಬಾಯಿನ್ಡ್ ಹ್ಯಾಂಡ್' ನೋಡಿರಿ, ಠಕ್ಕ ಜಾತಿಯದು. 'ಇರುವುದಿಲ್ಲ,

ಹೊರಟು ಹೋಗುವೆನು' ಎಂದು ಹೇಳುವನು. ಅವನನ್ನು ಸ್ವಲ್ಪ ಬೆದರಿಸಬಾರದೆ ? "

ನನಗೆ ಆಶ್ಚರ್ಯವಾಯಿತು. ಆದರೆ ಇದಕ್ಕೂ ಮೊದಲು ಈ 'ಕಂಬಾಯಿನ್ಡ್ ಹ್ಯಾಂಡ್' ಎಂಬ ಹೆಸರಿನ ವಸ್ತುವಿನ ವ್ಯಾಖ್ಯೆಯನ್ನು ಮಾಡುವುದು ಆವಶ್ಯಕ. ಏಕೆಂದರೆ ಈ 'ಹಿಂದುಸ್ತಾನೀ ಜನರು' ದುಡ್ಡಿಗಾಗಿ ಮಾಡದಂತಹ ಯಾವ ಕೆಲಸವು ಇಲ್ಲ ಎಂದು ಯಾರಿಗೆ ಗೊತ್ತಿಲ್ಲವೊ ಅವರು ಈ ಅಂಗ್ರೇಜೀ ಶಬ್ದದ ಅರ್ಥವು ದುಬೆ, ಚೌಬೆ, ತಿವಾರಿ ಇತ್ಯಾದಿ ಹಿಂದುಸ್ತಾನೀ ಬ್ರಾಹ್ಮಣರು ಎಂದಾಗುವುದು ಎಂಬುದನ್ನು ಕೇಳಿ ವಿಸ್ಮಿತರಾಗಬಹುದು. ಈ ಬ್ರಾಹ್ಮಣರು ತಮ್ಮ ಪ್ರಾಂತದಲ್ಲಿ ಯಾರಾದರೂ ಅಡಿಗೆಯ ಮನೆಯೊಳಕ್ಕೆ ಕಾಲಿಟ್ಟರೆ ಹಾರಿ ಬೀಳುವರು, ಮೈಲಿಗೆಯೆಂದು ಮಡಿಮಾಡುವರು, ಆದರೆ ಇವರೇ ಬ್ರಹ್ಮದೇಶಕ್ಕೆ ಹೋದಾಗ ಅಡುಗೆ ಮಾಡುವರು, ಎಂಜಲು ಬಳಿಯುವರು, ಮುಸುರೆ ತಿಕ್ಕುವರು, ತಂಬಾಕನ್ನು ಗುಡಗುಡಿಗೆ ಹಾಕಿ ನೀಡುವರು, ಅವರ ಅಧಿಕಾರಿಗಳು ಆಫೀಸಿಗೆ ಹೋಗುವಾಗ ಬೂಟನ್ನು ಒರೆಸಿ ಸ್ವಚ್ಛ ಮಾಡಿ ಕೊಡುವರು, ಆ ಅಧಿಕಾರಿಗಳು ಯಾವ ಜಾತಿಯವರಾಗಿದ್ದರೂ ಸರಿಯೆ, ತಮ್ಮ ಮಾನಮರ್ಯಾದೆಯನ್ನು ತೊರೆದು ಕೆಲಸ ಮಾಡುವರು. ತಿಂಗಳಿಗೆ ಮೂರು ನಾಲ್ಕು ರೂಪಾಯಿ ಹೆಚ್ಚಿಗೆ ಕೊಟ್ಟರಾಯಿತು ಈ ದ್ವಿವೇದೀ, ತ್ರಿವೇದೀ, ಚತುರ್ವೇದಿ ಇತ್ಯಾದಿ ಪೂಜ್ಯ ಜನರು ಬ್ರಾಹ್ಮಣರ ಮತ್ತು ಶೂದ್ರರ ಕೆಲಸವನ್ನು ಮಾಡುವರು. ಎಂದರೆ ಬ್ರಾಹ್ಮಣ ಮತ್ತು ಶೂದ್ರರ ಕೆಲಸವನ್ನು 'ಕಂಬಾಯಿನ್ಡ್' ಆಗಿ ಮಾಡುವರು. ಆದುದರಿಂದ ಇವರಿಗೆ 'ಕಂಬಾಯಿನ್ಡ್ ಹ್ಯಾಂಡ್' ಎಂದು ನಮ್ಮ ಮನೋಹರ ಬಾಬುಗಳು ಎನ್ನುತ್ತಿದ್ದರು. ಆದರೆ ಮೂರ್ಖ ಉತ್ಕಾಲದ ಮತ್ತು ಬಂಗಾಲದ ಬ್ರಾಹ್ಮಣರು ಇಂಥ ಕಾರ್ಯವನ್ನು ಮಾಡಲಿಕ್ಕೆ ಒಪ್ಪಿರುವುದೇ ಇಲ್ಲ ಇಂದಿನ ವರೆಗೂ. ಈ 'ಹಿಂದುಸ್ತಾನೀ ಜನರೇ' ಒಪ್ಪಿರುವರು. ಇದರ ಕಾರಣವನ್ನು ನಾನು ಮೊದಲೇ ಹೇಳಿರುವೆ—ದುಡ್ಡನ್ನು ಕಂಡನಂತರ ಎಲ್ಲ ಕುಸಂಸ್ಕಾರಗಳನ್ನು ಬಿಡಲಿಕ್ಕೂ ಈ ಹಿಂದುಸ್ತಾನೀ ಜನರಿಗೆ ಸ್ವಲ್ಪಾದರೂ ಸಮಯ ಬೇಕಾಗುವುದಿಲ್ಲ. (ಕೋಳಿಯನ್ನು ಬೇಯಿಸಲಿಕ್ಕೆ ಏಳೆಂಟು ಆಣೆ ಹೆಚ್ಚು ಕೊಟ್ಟರಾಯಿತು,

ಮಾಡಿಬಿಡುವರು. ಶಾಸ್ತ್ರವು ಆಗ ಅಡ್ಡ ಬರುವುಗಿಲ್ಲ. ಏಕೆಂದರೆ 'ಬೆಲೆ ಕೊಟ್ಟರೆ ಎಲ್ಲವೂ ಶುದ್ಧವಾಗಿ ಹೋಗುತ್ತದೆ' ಎಂಬ ಶಾಸ್ತ್ರದ ವಚನಾರ್ಥದ ಯಥಾರ್ಥ ತಾತ್ಪರ್ಯವನ್ನು ಹೃದಯಂಗಮ ಮಾಡಿಕೊಳ್ಳಲು, ಶಾಸ್ತ್ರ ವಾಕ್ಯದಲ್ಲಿ ನಂಬಿಕೆಯನ್ನು ಇಡಲು ಯಾರಾದರೂ ಸಮರ್ಥರಾಗಿದ್ದರೆ ಈ 'ಹಿಂದುಸ್ತಾನೀ ಜನರೇ' ಸಮರ್ಥರಾಗಿರುವರೆಂದು ಹೇಳಬಹುದು.)

ಆದರೆ ಮನೋಹರ ಬಾಬೂಗಳ ಈ 'ಕಂಬಾಯಿನ್ಡ್ ಹಾಂಡಿ'ಗೆ ಏಕೆ ಬೆದರಿಕೆ ಹಾಕಬೇಕು, ನನ್ನ ಬೆದರಿಕೆಯ ಪರಿಣಾಮವಾದೀತೇ ಎಂಬುದನ್ನು ನಾನು ಅರಿಯದಾದೆ. ಆದರೆ ಈ 'ಹ್ಯಾಂಡ'ನ್ನೂ ಮನೋಹರ ಬಾಬುಗಳು ಇಟ್ಟುಕೊಂಡು ಬಹಳ ದಿನಗಳಾಗಿರಲಿಲ್ಲ, ಒಂದೆರಡು ದಿನಗಳ ಹಿಂದಿಯೆ ತಮಗೆ ಅತಿಸಾರವು ಸುರುವಾದುದರಿಂದ ಇಟ್ಟುಕೊಂಡಿದ್ದರು. ಇಲ್ಲಿಯ ವರೆಗೆ ಅವರು ತಾವೇ 'ಕಂಬಾಯಿನ್ಡ್ ಹ್ಯಾಂಡ್' ಆಗಿದ್ದರು. ಮನೋಹರಬಾಬುಗಳು ಎನ್ನತೊಡಗಿದರು "ಮಹಾಶಯರೆ, ತಾವೇನು ಸಾಧಾರಣ ಮನುಷ್ಯರೇ! ಇಡಿ ಊರಲ್ಲಿ ತಮ್ಮ ಖ್ಯಾತಿಯಿದೆ. ನಿಮ್ಮ ಒಂದು ಮಾತಿಗೆ ಜನರು ಜೀವ ಕೊಡಲಿಕ್ಕೂ ಸಿದ್ಧರಾಗುತ್ತಾರೆ, ನಿಮ್ಮ ಒಂದು ಮಾತಿನಿಂದ ಅವರು ಜೀವಿಸಿರುವ ವರೆಗೆ ಜೀವಿಸಿರಲು ಶಕ್ಯವಾಗುವುದು. ಆದುದರಿಂದ ನಿಮ್ಮ ಮಾತನ್ನು ಎಲ್ಲರೂ ಕೇಳುವರು. ಇದು ನನಗೆ ತಿಳಿಯದ ವಿಷಯವೆ? ನೀವು ಒಂದು ಸಾಲನ್ನು ದೊಡ್ಡ ಸಾಹೇಬರಿಗೆ ಬರೆದರಾಯಿತು, ಅವನಿಗೆ ಹದಿನಾಲ್ಕು ವರ್ಷ ಜೇಲಾಯಿತೇ, ಇದನ್ನು ನಾನು ಅರಿಯೆನೆ? ಹಾಕಬಾರದೆ ಹೆದರಿಕೆ ಈ ನೀಚನಿಗೆ?"

ಈ ಮಾತುಗಳನ್ನು ಕೇಳಿ ನಾನು ದಿಗ್ಭ್ರಮೆಗೊಂಡೆ. ನಾನು ಒಂದು ಸಾಲನ್ನು ಬರೆದರಾಯಿತು ದೊಡ್ಡ ಸಾಹೇಬರು ಅದಕ್ಕೆ ಬೆಲೆ ಕೊಟ್ಟು ಅವನಿಗೆ ಹದಿನಾಲ್ಕು ವರ್ಷ ಜೇಲಾಗುವುದು, ಇಷ್ಟು ದೊಡ್ಡ ಅದ್ಭುತ ಶಕ್ತಿ ನನ್ನಲ್ಲಿದೆ ಎಂಬುದನ್ನು ಈ ವ್ಯಕ್ತಿಯ ಬಾಯಿಂದ ಕೇಳಿ ನನಗೇನೂ ತೋಚದಾಯಿತು. ಈ ಮಾತುಗಳನ್ನು ಕುರಿತು ನಾನೇನು ಹೇಳಲಿ? ನಾನೇನು ಮಾಡಲಿ? ಯಾವುದೂ ತಿಳಿಯದಂತಾಯಿತು. ಆದಾಗ್ಯೂ ಅವರು ಆಗಾಗ್ಗೆ ಹೇಳತೊಡಗಿದ್ದರಿಂದ,

ಬಲವಂತಪಡಿಸಿದ್ದರಿಂದ ಮುಂಗಾಣದವನಾಗಿ ನಾನು ‘ ಕಂಬಾಯಿನ್ಡ್ ಹ್ಯಾಂಡಿ ’ಗೆ ಬೆದರಿಕೆ ಹಾಕುವುದಕ್ಕಾಗಿ ಅಡುಗೆಯ ಮನೆಯನ್ನು ಹೊಕ್ಕೆ. ಅಡುಗೆಮನೆಯೇನು ಹೇಳಲಿ? ಅಂಧಕಾರಮಯ ಅಂಧ ಕೂಪದಂತೆ.

ಅವನು ಮರೆಯಲ್ಲಿ ನಿಂತು ನನ್ನ ಶಕ್ತಿಯ ಮಹಿಮೆಯನ್ನು ತನ್ನ ಯಜಮಾನನ ಬಾಯಿಂದ ಕೇಳಿದ್ದ. ಆದ್ದರಿಂದ ಅಳುಮೊಗದಿಂದ ಕೈಜೋಡಿಸಿ ಅವನೆಂದ “ ಈ ಮನೆಯಲ್ಲಿ ‘ ದೇವತೆ ’ ಇವೆ, ಇಲ್ಲಿ ನಾನು ಒಂದು ಗಳಿಗೆ ಕೂಡ ಇರಲಾರೆ. ತರತರದ ‘ ಛಾಯೆ ’ಗಳು ರಾತ್ರಿಯಲ್ಲಿ ತಿರುಗುತ್ತಿರುವುವು. ಯಜಮಾನರು ಇನ್ನೊಂದು ಮನೆಗೆ ಹೋಗಿ ಇದ್ದರೆ ನಾನು ಅವರ ನೌಕರಿಯನ್ನು ಹೇಗಾದರೂ ಮಾಡಬಲ್ಲೆ. ಆದರೆ ಈ ಮನೆಯಲ್ಲಿ— ”

ಭೇಷ್, ಈ ಕತ್ತಲುಮನೆಯಲ್ಲಿ ‘ ಛಾಯೆ ’ಗಳೇನು ಮಾಡ್ಯಾವು! ಆದರೆ ‘ ಛಾಯೆ ’ಯೆ ಇಲ್ಲ, ಒಂದು ಕೊಳಕು ನಾತವಿದ್ದಿತು, ನಾನು ಬಂದ ವೇಳೆಯಿಂದ ಅದು ಬರುತ್ತಿದ್ದಿತು. ನಾನು ಕೇಳಿದೆ “ ಈ ನಾತ ಯಾತರದೊ ? ”

‘ ಕಂಬಾಯಿನ್ಡ್ ಹ್ಯಾಂಡ್ ’ ಮಾತಾಡಿದ “ ಇಲಿಗಿಲಿ ಕೊಳಿತು ಬಿದ್ದಿರಬಹುದು. ”

ನಾನು ಬೆಚ್ಚಿಬಿದ್ದೆ. “ ಎಂಥ ಇಲಿಯೊ ? ಈ ಮನೆಯಲ್ಲಿ ಇಲಿಗಳು ಸಾಯುತ್ತವೆಯೇನು ? ”

ದಿನಾಲು ಬೆಳಿಗ್ಗೆ ತಾನೇ ನಾಲ್ಕೈದು ಸತ್ತ ಇಲಿಗಳನ್ನು ಹೊರಗೆ ಒಯ್ದು ಚೆಲ್ಲುತ್ತಿರುವೆನೆಂದು ಅವನು ಹೇಳಿದ.

ಚಿಮಣಿ ಎಣ್ಣೆಯ ದೀಪವನ್ನು ಹಚ್ಚಿ ಹುಡುಕಲಾಯಿತು, ಕೊಳಿತ ಇಲಿಯು ದೊರೆಯಲಿಲ್ಲ. ಆದಾಗ್ಯೂ ನನ್ನ ಶರೀರದಲ್ಲಿ ಒಂದುಬಗೆಯ ಹೊಡೆತ ಸುರುವಾಯಿತು. ಆದಾಗ್ಯೂ ‘ ಈ ಬೇನೆಯಿಂದ ಬಳಲುವ ಯಜಮಾನನನ್ನು ತೊರೆದು ಹೋಗುವುದು ಯೋಗ್ಯವಾದುದಲ್ಲ ’ ಎಂಬ ಮಾತನ್ನು ನಾನು ಹೇಳಲಾರೆ.

ಮಲಗುವ ಕೋಣೆಯನ್ನು ಹೊಕ್ಕೆ. ಮನೋಹರಬಾಬುಗಳು ಮಂಚದ ಮೇಲೆ ಕುಳಿತುಕೊಂಡು ನನ್ನ ದಾರಿಯನ್ನು ನೋಡುತ್ತಿದ್ದರು.

ನನ್ನನ್ನು ತಮ್ಮ ಹತ್ತಿರ ಕುಳ್ಳಿರಿಸಿಕೊಂಡು ಈ ಮನೆಯ ವರ್ಣನೆಯನ್ನು ಮಾಡತೊಡಗಿದರು—'ಇಷ್ಟು ಕಡಮೆ ಬಾಡಿಗೆಗೆ ಊರ ನಡುವೆ ಮನೆಯು ಸಿಕ್ಕುದು ನನ್ನ ಸುದೈವ. ಈ ಮನೆಯ ಯಜಮಾನನೂ ಬಹಳ ಒಳ್ಳೆಯವ. ಪಕ್ಕದಲ್ಲಿರುವ ಹೋಟಲಿನ ಒಡೆಯರು ಮದ್ರಾಸೀ ಕ್ರಿಶ್ಚಿಯನ್ನರು, ಅವರೂ ಬಹಳ ಒಳ್ಳೆಯವರು, ನಿನಗೆ ಸ್ವಲ್ಪ ಗುಣವಾಗುತ್ತಲೇ ಈ ಬ್ರಾಹ್ಮಣನನ್ನು ಹೊಡೆದು ಹೊರಗೆ ಹಾಕುವೆನು' ಎಂದು ಹೇಳಿದರು. ಬಳಿಕ ಅವರು ಒಮ್ಮೆಗೇ ಕೇಳಿದರು "ಒಳ್ಳೇದು ಶ್ರೀಕಾಂತಬಾಬೂ, ನೀವು ಸ್ವಪ್ನಗಳನ್ನು ನಂಬುತ್ತೀರಾ?"

"ಇಲ್ಲ."

"ನಾನೂ ನಂಬುವುದಿಲ್ಲ; ಆದಾಗ್ಯೂ ನಿನ್ನೆ ರಾತ್ರಿ ನಾನು ಒಂದು ಕನಸನ್ನು ಕಂಡೆ. ನಿಚ್ಚಣಿಕೆಯ ಮೇಲಿಂದ ನಾನು ಕೆಳಗೆ ಬಿದ್ದೆ. ಎಚ್ಚೆತ್ತು ನೋಡಿದೆ— ಒಂದು ಕಾಲು ಮುರಿದು ಬಾತಿದೆ! ನಿಜವೊ ಸುಳ್ಳೊ ಎಂಬುದನ್ನು ನನ್ನ ದೇಹವನ್ನು ಮುಟ್ಟಿ ನೋಡಿ ಹೇಳಿರಿ. ನನಗೆ ಜ್ವರ ಕೂಡ ಬಂದಿವೆ."

ಈ ಮಾತುಗಳನ್ನು ಕೇಳಿದಕೂಡಲೆ ನನ್ನ ಮುಖವು ಕಪ್ಪಿಟ್ಟಿತು. ಬಳಿಕ ನಾಡಿಯನ್ನು ನೋಡಿದೆ, ಮೈಮೇಲೆ ಕೈಯಿಟ್ಟು ಜ್ವರವನ್ನೂ ನೋಡಿದೆ.

ಒಂದು ನಿಮಿಷ ಮೂಢನಂತೆ ನಿಂತು "ಡಾಕ್ಟರರನ್ನು ಇದುವರೆಗೆ ನೀವು ಕರೆಕಳುಹಲಿಲ್ಲವೇಕೆ? ಈಗ ಯಾರನ್ನಾದರೂ ಬೇಗ ಕಳಿಸಿರಿ" ಎಂದೆ.

"ಮಹಾಶಯರೆ, ಈ ದೇಶ! ಇಲ್ಲಿ ಡಾಕ್ಟರರ ಫೀಯೂ ಕಡಿಮೆ ಇಲ್ಲ! ಅವರನ್ನು ಕರೆಸಿದರೆ ನಾಲ್ಕಾರು ರೂಪಾಯಿಗಳು ಹಾಗೆಯೇ ಖರ್ಚಾಗುವುವು! ಮೇಲಾಗಿ ಔಷಧಕ್ಕೂ ಹಣ ಕೊಡಬೇಕು! ಹೀಗೆ ಮತ್ತೆ ಎರಡು ರೂಪಾಯಿಗಳ ಗಜ್ಜು ಕೂಡುವುದು."

"ಕೂಡಲಿ ಬಿಡಿರಿ, ಕರೆಕಳುಹಿಸಿರಿ."

"ಯಾರು ಹೋಗುವರು ಮಹಾಶಯರೆ? ತಿವಾರಿಗಂತೂ ಗೊತ್ತೇ ಇಲ್ಲ. ಮೇಲಾಗಿ ಅವನು ಹೋದರೆ ಅಡುಗೆಯನ್ನು ಯಾರು ಮಾಡುವರು?"

"ಒಳ್ಳೇದು, ನಾನೇ ಹೋಗುವೆ." ಎಂದು ಡಾಕ್ಟರರನ್ನು ಕರೆದುಕೊಂಡು ಬರಲಿಕ್ಕೆ ನಾನೇ ಹೊರಹೊರಟೆ.

ಡಾಕ್ಟರರು ಬಂದು ಮನೋಹರಬಾಬುಗಳನ್ನು ಪರೀಕ್ಷಿಸಿದರು. ನನ್ನನ್ನು ಮರೆಗೆ ಕರೆದುಕೊಂಡು ಹೋಗಿ "ಇವರು ನಿಮಗೇನಾಗಬೇಕು ?" ಎಂದು ಕೇಳಿದರು.

"ಏನೂ ಇಲ್ಲ" ಎಂದು ಹೇಳಿ ನಾನು ಇಲ್ಲಿಗೆ ಹೇಗೆ ಬಂದು ಸಿಲುಕಿಕೊಂಡೆ ಎಂಬುದನ್ನೂ ಸ್ಪಷ್ಟವಾಗಿ ಹೇಳಿದೆ.

"ಇವರ ಪರಿವಾರದವರು ಮತ್ತೆ ಯಾರಾದರೂ ಇಲ್ಲಿ ಇರುವರೇನು ?"

"ನನಗೆ ಗೊತ್ತಿಲ್ಲ. ಬಹುಶಃ ಯಾರೂ ಇರಲಿಕ್ಕಿಲ್ಲ."

ಡಾಕ್ಟರರು ಕ್ಷಣಮಾತ್ರ ಸುಮ್ಮಗಿದ್ದು "ನಾನೊಂದು ಔಷಧವನ್ನು ಕೊಟ್ಟುಹೋಗುವೆ. ತಲೆಯಮೇಲೆ ಹಿಮಗಡ್ಡೆಯನ್ನೂ ಇಡಬೇಕು. ಇವರನ್ನು ಪ್ಲೇಗಿನ ಆಸ್ಪತ್ರೆಗೆ ಕಳಿಸುವುದು ಅತ್ಯಂತ ಆವಶ್ಯಕ. ನೀವೂ ಈ ಮನೆಯಲ್ಲಿ ಇರಬೇಡಿರಿ. ನನಗೆ ನೀವು ಫೀ ಕೊಡಬೇಕಾದುದಿಲ್ಲ." ಎಂದರು.

ಡಾಕ್ಟರರು ಹೊರಟು ಹೋದರು. ನಾನು ಅತ್ಯಂತ ಸಂಕೋಚದಿಂದ ಆಸ್ಪತ್ರೆಗೆ ಹೋಗಬೇಕೆಂದು ಮನೋಹರಬಾಬುಗಳಿಗೆ ಸೂಚಿಸಿದೆ. ಕೇಳುತ್ತಲೇ ಅವರು ಅಳತೊಡಗಿದರು ! ಅವರೆಂದರು "ಅಲ್ಲಿ ವಿಷ ಕೊಟ್ಟು ರೋಗಿಗಳನ್ನು ಕೊಲ್ಲುವರು. ಅಲ್ಲಿಗೆ ಹೋದರೆ ತೀರಿತು, ಯಾವನೂ ಹಿಂತಿರುಗುವಂತಿಲ್ಲ." ಹೀಗೆ ಅವರು ಬಹಳ ಬಡಬಡಿಸಿದರು.

ಔಷಧವನ್ನು ತರುವುದಕ್ಕಾಗಿ ತಿವಾರಿಯನ್ನು— ಕಂಬಾಯನ್ಡ ಹ್ಯಾಂಡನ್ನು—ಹುಡುಕತೊಡಗಿದೆ. ಅವನು ತನ್ನ ಸಾಮಾನುಗಳನ್ನು ತೆಗೆದುಕೊಂಡು ಎಲ್ಲಿಗೋ ಹೋಗಿಬಿಟ್ಟಿದ್ದ. ಅವನು ಬಹುಶಃ ಡಾಕ್ಟರರು ನನಗೆ ಹೇಳಿದ ಮಾತುಗಳನ್ನು ಮರೆಯಲ್ಲಿ ನಿಂತು ಕೇಳಿರಬಹುದು. 'ಹಿಂದುಸ್ತಾನೀ ಜನರಿಗೆ' ಯಾವ ವಿಷಯವೂ ತಿಳಿಯಲಿಕ್ಕಿಲ್ಲ, ಆದರೆ 'ಪ್ಲೇಗ' ಶಬ್ದದ ಅರ್ಥವು ಅವರಿಗೆ ಚೆನ್ನಾಗಿ ತಿಳಿಯುತ್ತದೆ.

ಆಗ ನಾನೇ ಔಷಧ ತರಲು ಹೋಗಬೇಕಾಯಿತು. ಆಯಿಸ್, ಆಯಿಸ್-ಬ್ಯಾಗ್ ಮೊದಲಾದ ಆವಶ್ಯಕ ವಸ್ತುಗಳನ್ನೆಲ್ಲ ನಾನೇ ಕೊಂಡು ತಂದೆ. ಈಗ ಮನೆಯಲ್ಲಿ ನಾವಿಬ್ಬರೇ ಉಳಿದೆವು— ನಾನು ಮತ್ತು ಮನೋಹರಬಾಬುಗಳು. ಒಂದು ಸಾರೆ ನಾನು ಅವರ ಹಣೆಯ ಮೇಲೆ ಆಯಿಸ್‌ಬ್ಯಾಗ್ ಇಡುತ್ತಿದ್ದೆ— ಒಂದು ಸಾರೆ ಅವರು ನನ್ನ ತಲೆಯ ಮೇಲೆ ಇಡುತ್ತಿದ್ದರು. ಹೀಗೆ ಮಾಡುತ್ತ ಮಾಡುತ್ತ ಇರುವಷ್ಟರಲ್ಲಿ ಎರಡು ಬಾರಿಸಿತು. ಆಗ ಅವರು ನಿಸ್ತೇಜವಾಗಿ ಹಾಸುಗೆಯ ಮೇಲೆ ಮಲಗಿದರು. ಆಗಾಗ್ಗೆ ಆವರು ಎಚ್ಚರದಪ್ಪಿದ್ದವರಂತೆ ಮಾತಾಡುತ್ತಿದ್ದರು. ಸಾಯಂಕಾಲಕ್ಕೆ ಒಮ್ಮೆ ಎಚ್ಚತ್ತು ನನ್ನ ಕಡೆಗೆ ನೋಡಿ ಅವರು "ಶ್ರೀಕಾಂತಬಾಬೂ, ಇನ್ನು ನಾನು ಬದುಕಲಾರೆ" ಎಂದರು.

ನಾನು ಸುಮ್ಮಗಿದ್ದೆ. ಬಳಿಕ ಬಹಳ ಪ್ರಯಾಸದಿಂದ ಅವರು ತಮ್ಮ ಸೊಂಟದೊಳಗಿನ ಬೀಗದ ಕೈಯನ್ನು ಹೊರತೆಗೆದು ನನ್ನ ಕೈಗಿತ್ತು "ನನ್ನ ಟ್ರಂಕಿನಲ್ಲಿ ಮುನ್ನೂರು ಗಿನ್ನಿಗಳು ಇವೆ. ನನ್ನ ಹೆಂಡತಿಗೆ ಕಳಿಸಿಕೊಡಿರಿ. ಆಕೆಯ ವಿಳಾಸ ಟ್ರಂಕಿನಲ್ಲಿಯೆ ಇದೆ, ಹುಡುಕಿದರೆ ಸಿಗುವುದು" ಎಂದರು.

ನನಗೆ ಪಕ್ಕದಲ್ಲಿದ್ದ 'ಹೊಟಲು' ಒಡೆಯರ ಧೈರ್ಯ ಬೆಂಬಲವಾಗಿದ್ದಿತು. ಅಲ್ಲಿಯವರ ದನಿ, ಪದಸ್ವರ ಕೇಳುತ್ತಿದ್ದೆ. ಸಾಯಂಕಾಲದ ನಂತರ ಒಂದು ಬಾರಿ ಅಲ್ಲಿ ಹೆಚ್ಚು ಗಲಾಟೆಯಾದುದು ಕೇಳಿಸಿತು. ಸ್ವಲ್ಪ ಹೊತ್ತಿನಲ್ಲಿಯೆ ಅವರು ಬಾಗಿಲಿಗೆ ಬೀಗ ಹಾಕಿ ಎಲ್ಲಿಗೊ ಹೋಗುತ್ತಿರುವರೆಂದು ಎನಿಸಿತು. ಹೊರಗೆ ಬಂದು ನೋಡಿದೆ. ನಾನು ತಿಳಿದುಕೊಂಡುದು ಸತ್ಯವಾಗಿದ್ದಿತು, ನಿಜವಾಗಿಯೂ ಬಾಗಿಲಿಗೆ ಬೀಗ ಬಿದ್ದಿದ್ದಿತು. ಅವರು ಹೊರಗೆ ತಿರುಗಾಡಲು ಹೋಗಿರುವರು, ಕೊಂಚ ಕಾಲದಲ್ಲಿ ಹಿಂತಿರುಗಿ ಬರುವರು ಎಂದು ನಾನು ತಿಳಿದೆ. ಆದಾಗ್ಯೂ ಆದೇಕೊ ಏನೊ ನನ್ನ ಮನಸ್ಸು ಗಾಬರಿಯಾಗತೊಡಗಿತು, ಮನಸ್ಸು ಕೆಟ್ಟಿತು.

ಇತ್ತ ಆ ರೋಗೀ ಮನುಷ್ಯ ಉತ್ತರೋತ್ತರವಾಗಿ ಅನೇಕ ಚೇಷ್ಟೆ, ತಮಾಷೆ, ಸಂಜ್ಞೆಗಳನ್ನು ಮಾಡತೊಡಗಿದ. ಅವುಗಳನ್ನು ಕುರಿತು

ನಾನು ಏನೆಂದು ಹೇಳಲಿ? ಅಲ್ಲಿ ಒಬ್ಬರೇ ಕುಳಿತು ತಮಾಷೆಯಿಂದ ಆನಂದವನ್ನು ಪಡೆಯುವಂತಿರಲಿಲ್ಲ. ರಾತ್ರಿ ಹನ್ನೆರಡು ಬಾರಿಸುವ ಕಾಲ ಸನಿಹಕ್ಕೆ ಬಂದಿತು. ಹೋಟಲಿನ ಬಾಗಿಲ ತೆರೆದುದರ ಮತ್ತು ಯಾರಾದರೂ ಬಂದುದರ ಶಬ್ದವೇ ಕೇಳಿಸಲಿಲ್ಲ. ಆಗಾಗ್ಗೆ ನಾನು ಹೊರಗೆ ಬಂದು ನೋಡಿ ಹೋಗುತ್ತಿದ್ದೆ; ಬೀಗವು ಹಾಕಿದ್ದ ಹಾಗೆಯೆ ಇರುತ್ತಿದ್ದಿತು. ಒಮ್ಮೆಗೆ ಕಟ್ಟಿಗೆಯ ಗೋಡೆಯ ಸಂದಿಯೊಳಗಿಂದ ಪ್ರಕಾಶವು ಕಾಣಿಸಿತು. ಆ ಕೋಣೆಯೊಳಗಿಂದ ಬೆಳಕು ಈ ಕೋಣೆಗೆ ಬರುತ್ತಿದ್ದಿತು. ಕುತೂಹಲದಿಂದ ನಾನು ಆ ಸಂದಿಯೊಳಗಿಂದ ನೋಡಿದೆನು ಬೆಳಕು ಎಲ್ಲಿಂದ ಬರುತ್ತಿರುವದೆಂಬುದನ್ನು ಗೊತ್ತು ಮಾಡಲಿಕ್ಕಾಗಿ. ಆಗ ನನ್ನ ಕಣ್ಣಿಗೆ ಬಿದ್ದ ದೃಶ್ಯ ನನ್ನ ನೆತ್ತರ ಹೆಪ್ಪುಗಟ್ಟಿ ಹೋಯಿತು. ಎದುರಿಗೆ ಮಂಚದ ಮೇಲೆ ಇಬ್ಬರು ತರುಣರು ಮಲಗಿದ್ದರು. ಅವರ ದಿಂಬಿನ ಬಳಿಯಲ್ಲಿ ಸಾಲಾಗಿ ಮೇಣಬತ್ತಿಗಳು ಹಚ್ಚಲ್ಪಟ್ಟಿದ್ದುವು. ಈಗ ಅವು ಥಾಳಾಗಿ ಉರಿದು ಆರತೊಡಗಿದ್ದುವು. ರೋಮನ್ ಕೆಥೊಲಿಕ್ ಸಂಪ್ರದಾಯದ ಕ್ರಿಶ್ಚಿಯನ್ನರು ಹೆಣದ ತಲೆಯ ಭಾಗದಲ್ಲಿ ಮೇಣಬತ್ತಿಗಳನ್ನು ಹಚ್ಚುವರೆಂಬುದು ನನಗೆ ಗೊತ್ತಿದ್ದಿತು. ಇಂಥ ಸಬಲ ಶರೀರಧಾರಿಗಳು ಈ ಸಮಯದಲ್ಲಿ ಮಲಗಿಕೊಂಡುದರ ಕಾರಣವು ಹೊಳೆದುಹೋಯಿತು. ಆಗ ನೀವು ಸಾವಿರಾರು ಸಲ ಬೇಕಾದಷ್ಟು ಉಚ್ಚ ಸ್ವರದಿಂದ ಕೂಗಿದರೂ ಅವರ ನಿದ್ರಾಭಂಗವಾಗುವುದಿಲ್ಲ ಎಂಬುದನ್ನು ತಿಳಿದುಕೊಂಡೆ. ಇತ್ತ ನಮ್ಮ ಕೋಣೆಯಲ್ಲಿಯೂ ಮನೋಹರಬಾಬುಗಳು ಸುಮಾರು ಎರಡು ಗಂಟೆಯ ಕಾಲ ಒದ್ದಾಡಿ ಮಲಗಿಬಿಟ್ಟರು!—'ಸಾಕಪ್ಪಾ ಸಾಕು, ಹೊರಡು ಇನ್ನು, ಜೀವ ಉಳಿದಂತಾಯಿತು ನನ್ನದು' ಎಂದು ಮನದೊಳಗೇ ನುಡಿದೆ.

ಗೊತ್ತು--ಪರಿಚಯವಿದ್ದವರು ಕಾಯಿಲೆವಿದ್ದವರು ಸುದ್ದಿಯನ್ನು ಕೇಳಿ ಅವರ ಕೇರಿಯಲ್ಲಿ ಕಾಲನಿಕ್ಕಬಾರದೆಂದು ಯಾರು ಆ ದಿನ ನನಗೆ ಉಪದೇಶ ಮಾಡಿದ್ದರೊ ಅವರದೇ ಹೆಣದ ಮತ್ತು ಗಿನ್ನಿಗಳ ಕಾವಲಿಗಾಗಿ ದೇವರು ನನ್ನನ್ನು ನಿಯಮಿಸಿದ್ದನು. ನಿಯಮಿಸಿದ್ದನೇನೊ ನಿಜ, ಆದರೆ ಉಳಿದ ರಾತ್ರಿಯನ್ನೆಲ್ಲ ನಾನು ಹೇಗೆ ಕಳೆದೆನೆಂಬುದನ್ನು ಬರೆದು ತಿಳಿಸುವುದು—ಮನಗಾಣಿಸುವುದು ಸಂಭವವಷ್ಟೇ ಇಲ್ಲ, ಆದರೆ ಅತ್ತ

ನನ್ನ ಪ್ರವೃತ್ತಿಯೂ ಇಲ್ಲ, ನನ್ನ ಪ್ರವೃತ್ತಿಯು ಆಗುವುದೂ ಇಲ್ಲ. ಅದಾಗ್ಯೂ ಯಾವ ಪಾಠಕನೂ ಈ ನನ್ನ ಮಾತಿನ ಮೇಲೆ ಅವಿಶ್ವಾಸವನ್ನು ಮಾಡಲಿಕ್ಕಿಲ್ಲ ಸ್ಥೂಲವಾಗಿ ಹೇಳುವುದಾದರೆ ನಾನು ರಾತ್ರಿಯನ್ನು ಚೆನ್ನಾಗಿ ಕಳೆಯಲಿಲ್ಲ.

ಮರುದಿನ 'ಡೆಥ್ ಸರ್ಟಿಫಿಕೇಟು' ತೆಗೆದುಕೊಳ್ಳುವುದಕ್ಕೂ ಪುಲೀಸರನ್ನು ಕರೆಯುವುದಕ್ಕೂ ತಂತಿಯನ್ನು ಕಳುಹುವುದಕ್ಕೂ ಗಿನ್ನಿಗಳ ವ್ಯವಸ್ಥೆಯನ್ನು ಮಾಡುವುದಕ್ಕೂ ಮತ್ತು ಹೆಣವನ್ನು ಬೀಳ್ಕೊಡುವುದಕ್ಕೂ ಸಾಕಷ್ಟು ಸಮಯವು ತಗುಲಿತು. ಇಷ್ಟೆಲ್ಲ ಕೆಲಸಗಳನ್ನು ಮುಗಿಸುವ ಹೊತ್ತಿಗೆ ಮೂರು ಬಾರಿಸಿದುವು. ಇರಲಿ, ಮನೋಹರಬಾಬುಗಳಂತೂ ಎಕ್ಕಾಗಾಡಿಯಲ್ಲಿ ಕುಳಿತು ಬಹುಶಃ ಸ್ವರ್ಗಕ್ಕೆ ಹೋದರು. ನಾನೊಬ್ಬ ಈ ಮನೆಯಲ್ಲಿ ಉಳಿದೆ. ಬಳಿಕ ನಾನೂ ನನ್ನ ಕೋಣೆಗೆ ಬಂದೆ. ಹಿಂದಿನ ದಿನ ಏಕಾದಶಿಯನ್ನು ಮಾಡಿದ್ದೆ—ಇವೊತ್ತು ಸಂಜೆಯಾಯಿತು, ಊಟ ಮಾಡಲಿಲ್ಲ. ನನ್ನ ಕೋಣೆಗೆ ಹಿಂತಿರುಗಿ ಬಂದಬಳಿಕ ಬಲಗಿವಿಯ ಹಿಂದೆ ಸ್ವಲ್ಪ ಬಾವು ಬಂದಿದೆಯೆಂದೂ ನೋವು ಆಗುತ್ತಿರುವುದೆಂದೂ ಎನಿಸಿತು. ಇಡಿ ರಾತ್ರಿ ನಾನೇ ತಿಕ್ಕಿತಿಕ್ಕಿಕೊಂಡು ನೋವನ್ನುಂಟು ಮಾಡಿಕೊಂಡಿರುವೆನೊ ಅಥವಾ ಗಿನ್ನಿಗಳ ಲೆಕ್ಕವನ್ನು ಮನೋಹರಬಾಬುಗಳಿಗೆ ಒಪ್ಪಿಸಲು ನಾನೂ ಸ್ವರ್ಗಕ್ಕೆ ಹೋಗಬೇಕಾಗುವುದೊ ಏನೊ ಎಂಬುದು ತಿಳಿಯದಾಯಿತು. ಆದರೆ, ಆ ಮೇಲೆ ಏನು ಬೇಕಾದುದಾದರೂ ಆಗಲಿ, ಮೈಮೇಲೆ ಎಚ್ಚರವು ಇರುವುದರೊಳಗೆ ನನ್ನ ವ್ಯವಸ್ಥೆಯನ್ನು ನಾನೇ ಮಾಡಿಕೊಳ್ಳತಕ್ಕದ್ದು ಎಂಬುದನ್ನು ತಿಳಿದುಕೊಳ್ಳಲು ನನಗೆ ಸಮಯ ಹಿಡಿಯಲಿಲ್ಲ. ಏಕೆಂದರೆ ಮನೋಹರಬಾಬುಗಳಂತೆ ಐಸ್ ಬ್ಯಾಗನ್ನು ತೆಗೆದುಕೊಂಡು ತಲೆಯಮೇಲೆ ಇಟ್ಟುಕೊಳ್ಳುವುದು ಸರಿಯೂ ಎನಿಸುವುದಿಲ್ಲ, ಸುಂದರವಾಗಿಯೂ ಕಾಣಿಸುವುದಿಲ್ಲ; ಈ ವಿಷಯವನ್ನು ನಿಶ್ಚಯಿಸುವುದಕ್ಕೂ ವೇಳೆ ಹತ್ತಲಿಲ್ಲ. ಏಕೆಂದರೆ ಇಷ್ಟು ದೊಡ್ಡ ರೋಗದ ಭಾರವನ್ನು ನಾನು ಯಾವನಾದರೊಬ್ಬ ಪುಣ್ಯಾತ್ಮ ಸಾಧು-ಪುರುಷನ ಮೇಲೆ ಹೇರಹೋಗುವುದು ದೊಡ್ಡ ಪಾಪವೆಂದು ನನಗೆ ತೋಚಿತು. ಯಾವನಾದರೂ ಒಳ್ಳೆಯ ಮನುಷ್ಯನಿಗೆ ತೊಂದರೆಯನ್ನು ಕೊಡುವುದು,

ಪೀಡಿಸುವುದು ನನ್ನ ಕರ್ತವ್ಯವಲ್ಲ, ಆದರೆ ಅಶಾಸ್ತ್ರೀಯವಾದುದು! ಆದುದರಿಂದ ಹೀಗೆ ಮಾಡುವುದು ಸರಿಯಲ್ಲ ಎಂದೂ ಎನಿಸಿತು. ಹೌದು, ಈ ರಂಗೂನದಲ್ಲಿ ಒಂದು ಮೂಲೆಯೊಳಗೆ ಅಭಯಾ ಎಂಬ ಹೆಸರಿನ ಒಬ್ಬ ಮಹಾ ಪಾಪಿಷ್ಠಿಯೂ ಪತಿತಳೂ ಆದ ನಾರಿಯು ಇರುವಳು— ಅವಳನ್ನು ಒಂದು ದಿನ ತಿರಸ್ಕರಿಸಿ ಬಂದಿರುವೆ. ಈಗ ಅವಳ ಮೇಲೆಯೆ ಈ ಅಂಟು ರೋಗದ ಹೊಲಸಾದ ಭಾರವನ್ನು ತಿರಸ್ಕಾರದಿಂದ ಹೊರಿಸಿಬಿಡಬೇಕು— ಸತ್ತರೆ ಅಲ್ಲಿಯೆ ಸಾಯಬೇಕು. ಇದರಿಂದ ಪುಣ್ಯ ಸಂಚಯವಾದರೂ ಆದೀತು ಎಂದು ಯೋಚಿಸಿ ನಾನು ಆಳುಮಗನಿಗೆ ಗಾಡಿಯನ್ನು ತರಲು ಅಪ್ಪಣೆಯನ್ನಿತ್ತೆ.

೧೨

ಆ ದಿವಸ ಮೃತ್ಯುವಿನ ತಿಕಿಟನ್ನು ಕೈಯಲ್ಲಿ ಹಿಡಿದುಕೊಂಡು ಅಭಯಾಳ ಬಾಗಿಲ ಎದುರಿಗೆ ನಿಂತಾಗ ನನಗೆ ಮೃತ್ಯುವಿಗಿಂತಲೂ ಹೆಚ್ಚಾಗಿ ಸಾಯುವೆನೆಂಬ ಅಧೈರ್ಯದಿಂದ ನನಗೆ ನಾಚಿಕೆಯಾಯಿತು; ಮತ್ತು ಈ ನಾಚಿಕೆಯೆ ನನ್ನಲ್ಲಿ ಹೆಚ್ಚು ಭಯವನ್ನು ಹುಟ್ಟಿಸಿತು.

ಅಭಯಾಳ ಮುಖವು ಕಳೆಗುಂದಿತು. ಆದರೆ ಆಕೆಯ ಬಾಯಿಂದ ಈ ಶಬ್ದಗಳು ಹೊರಬಿದ್ದವು "ನಿಮ್ಮ ಭಾರವನ್ನು ನಾನು ಹೊತ್ತುಕೊಳ್ಳದಿದ್ದರೆ ಇನ್ನಾರು ಹೊತ್ತುಕೊಳ್ಳುವರು? ಇಲ್ಲಿ ನಿಮ್ಮ ಆವಶ್ಯಕತೆ ನನಗೆ ಇರುವಷ್ಟು ಇನ್ನಾರಿಗೆ ಇರುವುದು?" ಆಕೆಯ ಎರಡೂ ಕಂಬನಿಗಳಲ್ಲಿ ನೀರು ತುಂಬಿಬಂದುವು. ಆದಾಗ್ಯೂ ನಾನೆಂದೆ "ನಾನಂತೂ ಹೊರಟೆ. ದಾರಿಯ ಕಷ್ಟವನ್ನು ನಾನು ಅನುಭವಿಸಲೇಬೇಕಾಗುವುದು. ಅದನ್ನು ನಿವಾರಿಸುವ ಶಕ್ತಿ ಯಾರಲ್ಲಿಯೂ ಇಲ್ಲ. ಆದರೆ ಹೋಗುವಾಗ ನಿನ್ನ ಹೊಸ ಸಂಸಾರದಲ್ಲಿ ಇಷ್ಟು ದೊಡ್ಡ ಸಂಕಟವನ್ನು ತಂದು ಹಾಕುವುದಕ್ಕೆ ಮನಸ್ಸೇ ಆಗುವುದಿಲ್ಲ. ಅಭಯಾ, ಗಾಡಿ ಇನ್ನೂ ನಿಂತಿದೆ, ನನ್ನ ಮೇಲೆ ಎಚ್ಚರವೂ ಇದೆ. ನಾನು ಪ್ಲೇಗ ಆಸ್ಪತ್ರೆಗೆ ಹೋಗಬಲ್ಲೆ. ನೀನು ಕ್ಷಣಮಾತ್ರ ನಿನ್ನ ಮನಸ್ಸನ್ನು ಕಠೋರಮಾಡಿ 'ಒಳ್ಳೇದು, ಹೋಗಿರಿ ಎಂದು ಹೇಳಿಬಿಡು." ಅಭಯಾ ಯಾವ ಉತ್ತರವನ್ನೂ ಕೊಡದೆ ನನ್ನ ಕೈಯನ್ನು ಹಿಡಿದು ಒಳಗೆ ಕರೆದುಕೊಂಡು ಹೋಗಿ ಹಾಸುಗೆಯ ಮೇಲೆ ಮಲಗಿಸಿದಳು. ತನ್ನ ಕಂಬನಿಗಳನ್ನು ಒರೆಸಿ

ಕೊಂಡಳು; ಮತ್ತು ನನ್ನ ಕಾಯ್ದ ಹಣೆಯ ಮೇಲೆ ಮೆಲ್ಲಗೆ ಕೈಯಾಡಿಸುತ್ತ "ನಿಮಗೆ 'ಹೋಗಿರಿ' ಎಂದು ಹೇಳಬಲ್ಲವಳಾಗಿದ್ದರೆ ನಾನು ಹೊಸ ಸಂಸಾರವನ್ನು ಹೂಡುತ್ತಿರಲಿಲ್ಲ. ಇವೊತ್ತಿನಿಂದ ನನ್ನ ಹೊಸ ಸಂಸಾರವು ನಿಜವಾದ ಸಂಸಾರವಾಯಿತು" ಎಂದಳು.

ಆದರೆ, ಅದು ಪ್ಲೇಗು ಇರಲಿಲ್ಲವೆಂದು ತೋರುವುದು. ಆದುದರಿಂದಲೇ ಸಾವು ಕೇವಲ ಸ್ವಲ್ಪ ಪರಿಹಾಸ ಮಾಡಿ ಹೊರಟು ಹೋಯಿತು. ಹತ್ತು ಹನ್ನೆರಡು ದಿನಗಳಲ್ಲಿ ನಾನು ಗುಣ ಹೊಂದಿದೆ. ಎದ್ದು ನಿಲ್ಲಲು ಶಕ್ತಿ ಬಂದಿತು. ಆದರೆ ಅಭಯಾ ಮತ್ತೆ ನನಗೆ ನನ್ನ ಹೋಟಲಿಗೆ ಹೋಗಲು ಬಿಡಲಿಲ್ಲ.

ಕಚೇರಿಗೆ ಹೋಗಲೊ ಇನ್ನೂ ಕೆಲವು ದಿವಸ ರಜೆಯನ್ನು ತೆಗೆದು ಕೊಂಡು ವಿಶ್ರಾಂತಿಯನ್ನು ಪಡೆಯಲೊ ಎಂದು ಯೋಚಿಸುವಷ್ಟರಲ್ಲಿ ಕಚೇರಿಯ ಆಳುಮಗನು ಬಂದು ಪತ್ರವನ್ನು ಕೊಟ್ಟು ಹೋದನು. ಒಡೆದು ನೋಡಿದೆ— ಪ್ಯಾರಿಯ ಪತ್ರ. ನಾನು ಬರ್ಮಾಕ್ಕೆ ಬಂದ ನಂತರ ನನಗೆ ಸಿಕ್ಕದ್ದು ಇದೇ ಆಕೆಯ ಮೊದಲನೆಯ ಪತ್ರ. ನಾನು ಆಗಾಗ್ಗೆ ಆಕೆಗೆ ಕಾಗದಗಳನ್ನು ಬರೆಯುತ್ತಿದ್ದೆ. ಅವಕ್ಕೆ ಉತ್ತರವು ಬರದಿದ್ದರೂ ಬರೆಯುತ್ತಿದ್ದೆ. ಬರುವಾಗ ಇದೇ ಕರಾರನ್ನು ಆಕೆಯು ನನ್ನಿಂದ ಮಾಡಿಸಿಕೊಂಡಿದ್ದಳು. ಪತ್ರದ ಪ್ರಾರಂಭದಲ್ಲಿಯೆ ಈ ಮಾತನ್ನು ಉಲ್ಲೇಖಿಸಿ ಆಕೆಯು ಬರೆದಿದ್ದಳು "ನನ್ನ ಸಾವಿನ ಸಮಾಚಾರವನ್ನು ನೀವು ಕೇಳುವಿರಿ. ಜೀವಿಸಿರುವವರೆಗೂ ನನ್ನ ಸಮಾಚಾರವನ್ನು ತಿಳಿದುಕೊಳ್ಳದೆ ಹೋದರೆ ನಿಮ್ಮ ಕೆಲಸ ನಡೆಯುವುದಿಲ್ಲ, ಹೀಗೇನೂ ಇಲ್ಲ. ಆದರೆ ನನ್ನದು ಹಾಗಿಲ್ಲ. ನನ್ನ ಎಲ್ಲ ಪ್ರಾಣಗಳು ನಿರಂತರ ವಿದೇಶದಲ್ಲಿಯೆ ಇರುವುವು. ಈ ಮಾತು ಅತ್ಯಂತ ಸತ್ಯವಾದುದು. ಇದನ್ನು ನೀವು ನಂಬದೆ ಇರಲಾರಿರಿ. ಆದುದರಿಂದ ಉತ್ತರ ಬರದಿದ್ದರೂ ಆಗಾಗ್ಗೆ ನೀವು ಅಲ್ಲಿ ಚೆನ್ನಾಗಿರುವಿರೆಂದು ಪತ್ರ ಬರೆದು ತಿಳಿಸುತ್ತಿರಬೇಕಾಗುತ್ತದೆ.'

"ಇದೇ ತಿಂಗಳಲ್ಲಿಯೇ ಬಂಕೂನ ವಿವಾಹ ಮಾಡಿಬಿಡಬೇಕೆಂದು ಗೊತ್ತು ಮಾಡಿರುವೆ. ನೀವು ಸಮ್ಮತಿಯನ್ನು ಬರೆಯಿರಿ. ಕುಟುಂಬದ ಸಂರಕ್ಷಣೆ ಮಾಡುವಷ್ಟು ಯೋಗ್ಯತೆಯು ಬರದ ವರೆಗೆ ಮದುವೆ

ಮಾಡುವುದು ಒಳಿತಲ್ಲ ಎಂದು ನೀವು ಹೇಳುತ್ತಿದ್ದ ಮಾತನ್ನು ನಾನು ಅಸ್ವೀಕಾರ ಮಾಡುವುದಿಲ್ಲ. ಬಂಕೂನಲ್ಲಿ ಆ ಯೋಗ್ಯತೆಯು ಇನ್ನೂ ಬಂದಿಲ್ಲವೆಂಬುದೇನೊ ನಿಜ, ಆದಾಗ್ಯೂ ನಾನು ಏಕೆ ಮಾಡಬೇಕೆಂದಿರುವೆನೆಂಬುದು ನೀವು ನನ್ನನ್ನು ಕಣ್ಣಾರೆ ಕಾಣದ ವಿನಹ ಅರಿಯಲಾರಿರಿ! ಹೇಗಾದರೂ ಮಾಡಿ ಇಲ್ಲಿಗೆ ಬಂದುಬಿಡಿರಿ. ನಿಮಗೆ ನನ್ನ ಪ್ರಾಣದಾಣೆಯಾಗಿದೆ. ''

ಪತ್ರದ ಉತ್ತರಾರ್ಧದಲ್ಲಿ ಅಭಯಾಳನ್ನು ಕುರಿತು ಬರೆಯಲಾಗಿದ್ದಿತು. ಯಾರನ್ನು ನಾನು ಬಯಸುವೆನೊ, ಪ್ರೀತಿಸುವೆನೊ ಅವರ ಮನೆತನವನ್ನು ನಿಲ್ಲಿಸುವುದಕ್ಕಾಗಿ ಒರ್ವ ಪಶುವನ್ನು ತೊರೆದು ಬಂದಿರುವೆ, ಎಂದು ಹೇಳಿದ ಮತ್ತು ಇದೇ ವಿಷಯವನ್ನೆತ್ತಿ ಅನೇಕ ಸಾಮಾಜಿಕ ರೀತಿ - ನೀತಿಗಳನ್ನು ಕುರಿತು ಸ್ಪರ್ಧೆಯಿಂದ ವಾದಿಸಿದ ಅಭಯಾಳನ್ನು ಕುರಿತು ನಾನು ಪ್ಯಾರಿಗೆ ಅದೆಷ್ಟೊ ಮಾತುಗಳನ್ನು ಬರೆದಿದ್ದೆ. ಈ ದಿನ ಅವುಗಳಿಗೆ ಆಕೆಯು ಪ್ರತ್ಯುತ್ತರವನ್ನು ಕೊಟ್ಟಿದ್ದಾಳೆ—

“ ನಿಮ್ಮ ಬಾಯಿಂದ ನನ್ನ ವಿಷಯವಾಗಿ ಅಥವಾ ನನ್ನ ಹೆಸರನ್ನು ಕೇಳಿದ್ದರೆ ಅಭಯಾಳನ್ನು ಭೆಟ್ಟಿಯಾಗಿರಿ ಮತ್ತು ನನ್ನ ಶತಕೋಟಿ ನಮಸ್ಕಾರಗಳನ್ನು ತಿಳಿಸಿರಿ; ವಯಸ್ಸಿನಲ್ಲಿ ನನಗಿಂತ ಹಿರಿಯಳೊ ಚಿಕ್ಕವಳೊ ಎಂಬುದು ನನಗೆ ಗೊತ್ತಿಲ್ಲ. ನನಗೆ ಅದನ್ನು ತಿಳಿದುಕೊಳ್ಳುವ ಆವಶ್ಯಕತೆಯೂ ಇಲ್ಲ. ಅವಳು ತನ್ನ ತೇಜಸ್ಸಿನ ಮೂಲಕ ನನ್ನಂತಹ ಸಾಮಾನ್ಯ ಹೆಂಗುಸಿಗೆ ವಂದನೀಯಳಾಗಿರುವರು. ಈ ದಿನ ನನಗೆ ನನ್ನ ಗುರುದೇವರು ಆಡಿದ ಮಾತುಗಳು ಆಗಾಗ್ಗೆ ನೆನಪಿಗೆ ಬರುವುವು. ಕಾಶಿಯೊಳಗಿನ ನನ್ನ ಮನೆಯಲ್ಲಿ ದೀಕ್ಷೆಯ ಸರ್ವ ಸಿದ್ಧತೆಗಳೂ ಆಗಿವೆ. ಗುರುದೇವರು ಆಸನವನ್ನು ಗ್ರಹಿಸಿ ಸ್ತಬ್ಧರಾಗಿ ಏನನ್ನೊ ಯೋಚಿಸುತ್ತಿರುವರು. ನಾನು ಮರೆಯಲ್ಲಿ ನಿಂತು ಅವರ ಪ್ರಸನ್ನವದನವನ್ನು ಒಂದೇಸವನೆ ನೋಡುತ್ತಿದ್ದೆ. ಒಮ್ಮಿಂದೊಮ್ಮೆಗೆ ನನ್ನ ಎದೆಯಲ್ಲಿ ಭಯವು ಉತ್ಪನ್ನವಾಯಿತು; ಹೃದಯದಲ್ಲಿ ಅಲ್ಲೋಲ ಕಲ್ಲೋಲವುಂಟಾಯಿತು. ಅವರ ಪಾದಗಳ ಮೇಲೆ ಬಿದ್ದು ನಾನು ಅಳುತ್ತ ‘ ಬಾಬಾ, ನಾನು ಮಂತ್ರವನ್ನು ಸ್ವೀಕರಿಸಲಾರೆ ’ ಎಂದೆ.

ಅವರು ಅಚ್ಚರಿಗೊಂಡು ನನ್ನ ತಲೆಯ ಮೇಲೆ ಕೈಯನ್ನು ನೇವರಿಸುತ್ತ "ಏಕೆ ಮಗೂ, ಏಕೆ ಸ್ವೀಕರಿಸುವುದಿಲ್ಲ.' ಎಂದರು.

ನಾನೆಂದೆ— 'ಮಹಾಪಾಪಿಷ್ಠಳು'—

ಅವರು ನಡುವೇ ಬಾಯಿ ಹಾಕಿ ಎಂದರು ಹೀಗಿದ್ದ ಪಕ್ಷದಲ್ಲಿ ಮಂತ್ರವನ್ನು ಸ್ವೀಕರಿಸುವುದು ಇನ್ನೂ ಅತ್ಯಗತ್ಯವಾಗಿದೆ ಮಗಳೇ'—

ನಾನು ಅಳುತ್ತ ಅಳುತ್ತ ಎಂದೆ— 'ನಾಚಿಕೆಯಿಂದ ನಾನು ನಿಮಗೆ ನನ್ನ ಸರಿಯಾದ ಪರಿಚಯವನ್ನು ಕೊಟ್ಟಿಲ್ಲ; ಕೊಟ್ಟಿದ್ದರೆ ನೀವು ನನ್ನ ಮನೆಯ ಹೊಸ್ತಿಲವನ್ನು ಸಹ ದಾಟುತ್ತಿರಲಿಲ್ಲ.'

ಗುರುದೇವರು ನಸುನಕ್ಕು 'ಇಲ್ಲ, ನಾನು ಅವಶ್ಯವಾಗಿ ದಾಟುತ್ತಿದ್ದ ಮತ್ತು ದೀಕ್ಷೆಯನ್ನು ಕೊಡುತ್ತಿದ್ದೆ. ಪ್ಯಾರಿಯ ಮನೆಯಲ್ಲಿ ನಾನು ಬಹುಶಃ ಪ್ರವೇಶ ಮಾಡದೆ ಇರಬಹುದಾಗಿತ್ತು, ಆದರೆ ರಾಜಲಕ್ಷ್ಮಿಯ ಮನೆಗೆ ಬಾರದೆ ಇರುತ್ತಿರಲಿಲ್ಲ, ಮಗಳೇ.'

ನಾನು ಬೆಚ್ಚಿ ಬಿದ್ದೆ, ಸ್ತಬ್ಧಳಾದೆ. ಸ್ವಲ್ಪ ಹೊತ್ತು ತಡೆದು ಎಂದೆ 'ಆದರೆ, ನನ್ನ ತಾಯಿಯ ಗುರುಗಳು ನನಗೆ ದೀಕ್ಷೆಯನ್ನು ಕೊಡುವುದರಿಂದ ಪತಿತರಾಗಬೇಕಾಗುವುದು ಎಂದು ಹೇಳಿದ್ದರು. ಹಾಗಾದರೆ ಆ ಮಾತು ಸತ್ಯವಲ್ಲವೇ?'

ಗುರುದೇವರು ನಕ್ಕರು. ಬಳಿಕ ಎಂದರು ನಿಜ, ಆದುದರಿಂದಲೇ ಅವರು ದೀಕ್ಷೆಯನ್ನು ಕೊಡದಾದರು ಮಗಳೇ! ಆದರೆ ಯಾರಿಗೆ ಅಭಯವಿರುವುದಿಲ್ಲವೊ ಅವರೇಕೆ ಕೊಡಲಾರರು?'

ನಾನೆಂದೆ 'ಭಯವೇಕೆ ಇರುವುದಿಲ್ಲ?'

ಅವರು ನಕ್ಕು ನುಡಿದರು 'ಒಂದೇ ಮನೆಯಲ್ಲಿ ಒಬ್ಬ ಮನುಷ್ಯನನ್ನು ರೋಗದ ಕೀಟಾಣುಗಳು ಕೊಂದುಬಿಡುವವು, ಆದರೆ ಅದೇ ಮನೆಯಲ್ಲಿ ಇರುವ ಮತ್ತೊಬ್ಬನನ್ನು ಮುಟ್ಟುವುದಿಲ್ಲ ಕೂಡ. ಅದೇಕೆಂಬುದನ್ನು ಕೇಳಬಲ್ಲೆಯೇನು?'

ನಾನೆಂದೆ 'ಅವು ಮುಟ್ಟುವುವು, ಆದರೆ ಸಬಲರಿದ್ದವರು ಸಾಯುವುದಿಲ್ಲ, ನಿರ್ಬಲರು ಸಾಯುವರು.'

ಗುರುದೇವರು ಪುನಃ ನನ್ನ ತಲೆಯಮೇಲೆ ತಮ್ಮ ಕೈಯನ್ನಿಟ್ಟು ಎಂದರು 'ಈ ಮಾತನ್ನು ನೀನೆಂದಿಗೂ ಮರೆಯಬೇಡ ಮಗಳೇ.

ಯಾವ ಅಪರಾಧವು ಒಬ್ಬನನ್ನು ಮಣ್ಣುಗೂಡಿಸುವುದೊ ಅದೇ ಅಪ-ರಾಧದೊಳಗಿಂದ ಇನ್ನೊಬ್ಬನು ಅನಾಯಾಸವಾಗಿ ಪಾರಾಗಿ ಹೋಗುವನು. ಆದುದರಿಂದಲೇ, ಎಲ್ಲ ವಿಧಿನಿಷೇಧಗಳನ್ನೂ ಎಂದೇ ಸೂತ್ರದಲ್ಲಿ ಕಟ್ಟಲಿಕ್ಕೆ ಆಗುವುದಿಲ್ಲ. '

ಸಂಕೋಚದಿಂದ ನಾನು ವಿಚಾರಿಸಿದೆ ' ಯಾವುದು ಅನ್ಯಾಯ, ಅಧರ್ಮ ಇರುವುದೊ ಅದು ಸಬಲರಿಗೂ ದುರ್ಬಲರಿಗೂ ಅನ್ಯಾಯ ಮತ್ತು ಅಧರ್ಮ ಅಲ್ಲವೆ ? ಇಲ್ಲವೆ ಇದ್ದ ಪಕ್ಷದಲ್ಲಿ ಅದು ಅವಿಚಾರ ವಲ್ಲವೆ ? '

ಗುರುದೇವರು ಎಂದರು ' ಅಲ್ಲ ಮಗಳೇ, ಹೊರಗೆ ಅದು ಬೇಕಾದ ಹಾಗೆ ಕಂಡರೂ ಅದರ ಫಲವು ಸಮಾನವಾಗಿರುವುದಿಲ್ಲ. ಒಂದು ವೇಳೆ ಹೀಗೆ ಇದ್ದುದಾಗಿದ್ದರೆ ಪ್ರಪಂಚದಲ್ಲಿ ಈ ದಿನ ಕಾಣಬರುತ್ತಿರುವ ಸಬಲ-ನಿರ್ಬಲರಲ್ಲಿಯ ಭೇದ ಇಷ್ಟು ಹೆಚ್ಚಾಗಿ ಕಾಣುತ್ತಿರಲಿಲ್ಲ. ಐದು ವರುಷದ ಮಗುವನ್ನು ಕೊಲ್ಲುವಂಥ ವಿಷವು ಇಪ್ಪತ್ತೊಂದು ವರ್ಷದ ಯುವಕನನ್ನು ಕೊಲ್ಲದೆ ಹೋದಲ್ಲಿ ದೋಷವನ್ನು ಯಾರಿಗೆ ಕೊಡುವಿ ಮಗಳೇ ? ಆದರೆ, ಈ ದಿನ ನನ್ನ ಮಾತಿನ ಅರ್ಥವು ನಿನಗೆ ಸಂಪೂರ್ಣವಾಗಿ ಆಗದಿದ್ದರೂ ಪರವಾ ಇಲ್ಲ; ಆದರೆ, ಯಾರ ಹೃದಯದಲ್ಲಿ ಬೆಂಕಿಯು ಪ್ರಜ್ವಲಿಸುತ್ತಿರುವುದೊ ಅವರೆಲ್ಲರ ಕರ್ಮಗಳ ಭಾರ-ವನ್ನು ಒಂದೇ ತಕ್ಕಡಿಯಲ್ಲಿ ತೂಗಲಿಕ್ಕಾಗುವುದಿಲ್ಲ. ಒಂದು ವೇಳೆ ತೂಗಿದರೆ ತಪ್ಪಾಗುವುದು ಎಂಬುದನ್ನು ಮಾತ್ರ ನೆನಪಿನಲ್ಲಿಡು. '

" ಶ್ರೀಕಾಂತಣ್ಣಾ, ನಿಮ್ಮ ಪತ್ರವನ್ನು ಓದಿ ಈ ದಿವಸ ನನಗೆ ನನ್ನ ಗುರುದೇವರು ಆಡಿದ ಆ ಒಳಗಿನ ಬೆಂಕಿಯ ಮಾತುಗಳು ನೆನಪಿಗೆ ಬರುತ್ತಿರುವುವು. ಅಭಯಾಳನ್ನು ನಾನು ಪ್ರತ್ಯಕ್ಷವಾಗಿ ಕಂಡಿಲ್ಲ, ಆದಾಗ್ಯೂ, ಆಕೆಯ ಕರ್ಮಗಳನ್ನು ಕುರಿತು ಹುಷಾರಿಯಿಂದ ವಿಚಾರ ಮಾಡಿರಿ. ನನ್ನಂಥ ಸಾಮಾನ್ಯ ಸ್ತ್ರೀಯ ತೂಗುವ ಕಲ್ಲುಗಳನ್ನು ತೆಗೆದುಕೊಂಡು ಆಕೆಯ ಪಾಪಪುಣ್ಯಗಳನ್ನು ತೂಗಬೇಡಿರಿ. "

ಪತ್ರವನ್ನು ಅಭಯಾಳ ಕೈಯಲ್ಲಿ ಕೊಟ್ಟು " ರಾಜಲಕ್ಷ್ಮಿಯು ನಿನಗೆ ಸಹಸ್ರಾರು ನಮಸ್ಕಾರಗಳನ್ನು ತಿಳಿಸಿದ್ದಾಳೆ " ಎಂದೆ.

ಪತ್ರದಲ್ಲಿ ಬರೆದುದನ್ನು ಮೂರು ನಾಲ್ಕು ಸಲ ಓದಿ, ಅಭಯಾ ಪತ್ರವನ್ನು ನನ್ನ ಹಾಸುಗೆಯ ಮೇಲೆ ಚೆಲ್ಲಿ ಭರದಿಂದ ಹೊರಗೆ ಹೋಗಿ ಬಿಟ್ಟಳು. ಜಗತ್ತಿನ ಕಣ್ಣಿನ ಎದುರಿಗೆ ಅವಳ ಲಾಂಛಿತ ಮತ್ತು ಅಪಮಾನಿತವಾಗುತ್ತಿದ್ದ ನಾರಿತ್ವಕ್ಕೆ ಶತಯೋಜನ ದೂರದಿಂದ ಒರ್ವ ಅಪರಿಚಿತ ನಾರಿಯು ಸನ್ಮಾನದ ಪುಷ್ಪಗಳನ್ನು ಅರ್ಪಿಸಿರುವಳು. ಇದರಿಂದ ಅಭಯಾಳಿಗೆ ಸೀಮಾತೀತ ಆನಂದವಾಗಿರುವುದು. ಆ ಆನಂದವೇದನೆಯನ್ನು ಒಬ್ಬ ಪುರುಷನಿಂದ ಮರೆಮಾಡುವುದಕ್ಕಾಗಿ ಅಭಯಾನನ್ನ ಕೋಣೆಯಿಂದ ಹೊರಗೆ ಹೋದಳು.

ಸುಮಾರು ಅರ್ಧ ಗಂಟೆಯ ನಂತರ ಚೆನ್ನಾಗಿ ಕಣ್ಣು-ಮುಖ ತೊಳೆದುಕೊಂಡು ಹಿಂತಿರುಗಿ ಬಂದಳು; ಮತ್ತು ಎಂದಳು " ಶ್ರೀಕಾಂತಣ್ಣ— "

ನಾನು ತಡೆದು " ಇದೇನು ? ' ಅಣ್ಣ ' ಎಂದಿನಿಂದಾದೆ ? " ಎಂದೆ.

" ಇವೊತ್ತಿನಿಂದಲೇ. "

" ಇಲ್ಲ, ಇಲ್ಲ, ' ಅಣ್ಣ 'ನಲ್ಲ. ನೀವೆಲ್ಲರೂ ನನ್ನನ್ನು ಎಲ್ಲ ಕಡೆಗಳಿಂದಲೂ ಸುತ್ತುವರಿದು ನನ್ನ ಮಾರ್ಗವನ್ನು ಕಟ್ಟು ಮಾಡಿಬಿಡಬೇಡಿರಿ ! "

ಅಭಯಾ ನಕ್ಕು " ಮನಮನಸ್ಸಿನೊಳಗೇ ಏನೊ ಲೆಕ್ಕ ಹಾಕುತ್ತಿರುವಂತೆ ತೋರುತ್ತದೆ " ಎಂದಳು.

" ಏಕೆ, ನಾನು ಮನುಷ್ಯನಲ್ಲವೇ ? "

" ಮನುಷ್ಯರೇನೊ ನಿಜ, ಸ್ವಲ್ಪ ಡೊಂಕು ಮನುಷ್ಯರಂತೆ ಕಾಣುವಿರಿ. ,ಪಾಪ, ರೋಹಿಣಿಬಾಬುಗಳು ಕಾಯಿಲೆಯ ಕಾಲದಲ್ಲಿ ಸ್ವಲ್ಪ ಆಶ್ರಯ ಕೊಟ್ಟರು; ಈಗ ಗುಣ ಹೊಂದಿದ ಬಳಿಕ ಅವರಿಗೆ ಇದೇ ಪಾರಿತೋಷಕವನ್ನು ಕೊಡಬೇಕೆಂದಿರುವಿರೇನು ! ಆದರೆ, ನನ್ನದೇ ದೊಡ್ಡ ತಪ್ಪಾಯಿತು. ಆಗ ಕಾಯಿಲೆಯ ಬಗ್ಗೆ ಒಂದು ತಂತಿಯನ್ನು ಕಳಿಸಿದ್ದರೆ ಅವರನ್ನು ಈ ದಿವಸ ನೋಡಬಹುದಾಗಿತ್ತು ಇಲ್ಲಿ. "

ನಾನು ಕತ್ತನ್ನು ಅಲ್ಲಾಡಿಸಿ " ಆಕೆಯು ಬರುತ್ತಿದ್ದಳು. ಇದರಲ್ಲಿ ಅಚ್ಚರಿಯೇನು ? " ಎಂದೆ.

ಅಭಯಾ ಕ್ಷಣಕಾಲ ಸ್ಥಿರಚಿತ್ತಳಾಗಿದ್ದು ನುಡಿದಳು “ನೀವು ಒಂದೆರಡು ತಿಂಗಳದ ರಜೆ ತೆಗೆದುಕೊಂಡು ಹೋಗಿರಿ ಶ್ರೀಕಾಂತಣ್ಣಾ. ನಿಮ್ಮ ಆವಶ್ಯಕತೆ ಅವರಿಗೆ ಬಹಳವಾಗಿರುವಂತೆ ತೋರುವುದು.”

ನನ್ನ ಆವಶ್ಯಕತೆ ಅವಳಿಗೆ ಬಹಳವಾಗಿರುವುದೆಂದು ನನಗೂ ಎನಿಸುತ್ತಿದ್ದಿತು. ಅದೇಕೊ ಏನೊ ಮರುದಿನವೇ ನಾನು ಆಫೀಸಿಗೆ ಒಂದು ಚೀಟಿಯನ್ನು ಬರೆದು ಒಂದು ತಿಂಗಳದ ರಜೆಯನ್ನು ತೆಗೆದುಕೊಂಡೆ. ಮೇಲಿನಿಂದ ಹೊರಡುವ ನಿರ್ಧಾರ ಮಾಡಿ ಆಳುಮಗನನ್ನು ಟಿಕಿಟು ಕೊಳ್ಳಲು ಬಂದರಕ್ಕೆ ಕಳುಹಿಸಿದೆ.

ಹೊರಡುವಾಗ ಅಭಯಾ ನಮಸ್ಕರಿಸಿ “ಶ್ರೀಕಾಂತಣ್ಣಾ, ಒಂದು ವಚನವನ್ನು ಕೊಡಿರಿ” ಎಂದಳು.

“ಏನೆಂದು ವಚನ ಕೊಡಲಿ ತಂಗೀ?”

“ಪುರುಷರು ಪ್ರಪಂಚದಲ್ಲಿರುವ ಎಲ್ಲ ಸಮಸ್ಯೆಗಳ ಮೀಮಾಂಸೆಯನ್ನು ಮಾಡಲಾರರು. ಎಲ್ಲಾದರೂ ಮೀಮಾಂಸೆ ಮಾಡುವಾಗ ನಿಮಗೆ ಅಡೆ-ತಡೆಯುಂಟಾದರೆ ಬರೆದು ನನ್ನ ಅಭಿಪ್ರಾಯವನ್ನು ತೆಗೆದುಕೊಳ್ಳುವಿರಾ?”

ನಾನು ಒಪ್ಪಿ, ಬಂದರಕ್ಕೆ ಹೋಗಲು ಗಾಡಿಯಲ್ಲಿ ಕುಳಿತೆ. ಅಭಯಾ ಗಾಡಿಯ ಬಾಗಿಲ ಬಳಿಗೆ ನಿಂತು ಮತ್ತೊಮ್ಮೆ ನಮಸ್ಕಾರ ಮಾಡಿದಳು. ಬಳಿಕ “ರೋಹಿಣಿಬಾಬುಗಳಿಂದ ನಾನು ನಿನ್ನೆಯೆ ಅಲ್ಲಿಗೆ ತಂತಿಯನ್ನು ಕಳುಹಿಸಿದ್ದೇನೆ. ಆದರೆ, ಹಡಗದಲ್ಲಿ ನಿಮ್ಮ ಪ್ರಕೃತಿಯ ಕಡೆಗೆ ಗಮನ ಇಟ್ಟುಕೊಂಡಿರಿ ಶ್ರೀಕಾಂತಣ್ಣಾ, ಇದಕ್ಕೂ ಹೆಚ್ಚಿಗೆ ನಾನೇನು ಹೇಳಬಲ್ಲೆ?” ಎಂದಳು.

“ಒಳ್ಳೇದು” ಎಂದು ನಾನು ಮುಖವೆತ್ತಿ ನೋಡಿದೆ— ಅಭಯಾಳ ನಯನಗಳ ಎರಡೂ ಆಲಿಗಳು ನೀರಲ್ಲಿ ಈಜುತ್ತಿದ್ದುವು.

೪

ಕಲಕತ್ತೆಯ ಬಂದರಕ್ಕೆ ಬಂದು ನಮ್ಮ ಹಡಗು ನಿಂತಿತು. ಬಂಕೂ ಬಂದು ನಿಂತಿದುದನ್ನು ನೋಡಿದೆ. ಅವನು ಕೂಡಲೆ ನಿಚ್ಚಣಿಕೆಯನ್ನೇರಿ ಬಂದ ಮತ್ತು ಸಿರಬಾಗಿ ವಂದಿಸಿದ. ಬಳಿಕ ಅವನು “ಅಮ್ಮನವರು ಗಾಡಿಯಲ್ಲಿ ನಿಮ್ಮ ದಾರಿ ಕಾಯುತ್ತ ಕುಳಿತಿರುವರು.

ನೀವು ಕೆಳಗೆ ಇಳಿದು ನಡೆಯಿರಿ, ನಾನು ಸಾಮಾನುಗಳನ್ನು ತೆಗೆದು ಕೊಂಡು ಹಿಂದಿನಿಂದ ಬರುವೆ" ಎಂದ.

ಹೊರಗೆ ಬರುತ್ತಲೇ ಇನ್ನೊಬ್ಬನು ಬಾಗಿ ನಮಸ್ಕರಿಸಿ ನಿಂತ. ನಾನೆಂದೆ "ರತನ! ಏನು, ಚೆನ್ನಾಗಿರುವೆಯಾ?"

ರತನ ಸ್ವಲ್ಪ ನಕ್ಕು "ನಿಮ್ಮ ಆಶೀರ್ವಾದದಿಂದ. ಬನ್ನಿರಿ" ಎಂದು ದಾರಿಯನ್ನು ತೋರಿಸುತ್ತ ಗಾಡಿಯ ವರೆಗೂ ಹೋದ ಮತ್ತು ಅದರ ಬಾಗಿಲು ತೆರೆದ. ರಾಜಲಕ್ಷ್ಮಿಯೆಂದಳು "ಬನ್ನಿರಿ— ರತನ, ನೀವು ಇನ್ನೊಂದು ಗಾಡಿಯನ್ನು ಬಾಡಿಗೆ ಮಾಡಿ ಹಿಂದಿನಿಂದ ಬರ್ರಿ. ಎರಡು ಗಂಟೆಯಾಗಿದೆ, ಇವರು ಇನ್ನೂ ಸ್ನಾನ ಮಾಡಿಲ್ಲ, ಉಂಡಿಲ್ಲ. ನಾವು ಮನೆಗೆ ಹೋಗುವೆವು. ಗಾಡಿಯವನಿಗೆ ಗಾಡಿ ಹೊಡೆಯಲು ಹೇಳು."

ನಾನು ಗಾಡಿಯಲ್ಲಿ ಕುಳಿತೆ. ರತನ "ಒಳ್ಳೇದು ಅಮ್ಮನವರೆ" ಎಂದು ಬಾಗಿಲನ್ನು ಮುಚ್ಚಿ ಗಾಡಿಯವನಿಗೆ ಗಾಡಿಯನ್ನು ಹೊಡೆಯಲು ಹೇಳಿದ. ರಾಜಲಕ್ಷ್ಮಿಯು ತಲೆಬಾಗಿಸಿ ಪಾದಸ್ಪರ್ಶ ಮಾಡಿ, ಪಾದ ಧೂಳಿಯನ್ನು ಕೊರಳಿಗೆ ಹಚ್ಚಿಕೊಂಡು "ಹಡಗದಲ್ಲಿ ಕಷ್ಟವಾಗಲಿಲ್ಲ ತಾನೇ?" ಎಂದು ವಿಚಾರಿಸಿದಳು.

"ಇಲ್ಲ."

"ಪ್ರಕೃತಿ ಬಹಳ ಕೆಟ್ಟಿತ್ತೇನು?"

"ಪ್ರಕೃತಿ ಕೆಟ್ಟುದೇನೊ ನಿಜ, ಆದರೆ ಬಹಳ ಕೆಟ್ಟಿರಲಿಲ್ಲ. ಆದರೆ, ನೀನು ಕೂಡ ನಿರೋಗಿಯಾಗಿ ತೋರುವುದಿಲ್ಲ. ಊರಿಂದ ಯಾವಾಗ ಬಂದೆ?"

"ಮೊನ್ನೆ ಅಭಯಾಳಿಂದ ನೀವು ಬರುವ ಸಮಾಚಾರ ದೊರೆತ ಕೂಡಲೆ ನಾವು ಊರಿಂದ ಹೊರಟೆವು. ಇಲ್ಲಿಗೆ ನಾವು ಬರಲೇಬೇಕಾಗಿತ್ತು— ಎರಡು ದಿನ ಮೊದಲೇ ಹೊರಟುಬಂದೆವು. ಇಲ್ಲಿ ನೀವು ಎಷ್ಟು ಕೆಲಸ ಮಾಡಬೇಕಾಗಿರುವುದೆಂಬುದು ಗೊತ್ತಿರುವುದೇನು?" ೮

"ಕೆಲಸದ ಮಾತು ಆ ಮೇಲೆ— ಆದರೆ ನೀನು ಹೀಗೇಕೆ ಆಗಿರುವೆ? ನಿನಗೇನಾಗಿತ್ತು?"

ರಾಜಲಕ್ಷ್ಮಿಯು ನಕ್ಕಳು. ಈ ನಗೆಯನ್ನು ನೋಡಿ ಎಷ್ಟೋ ದಿನಗಳಿಂದ ನೋಡಿರಲಿಲ್ಲ, ಇದನ್ನು ನೋಡಬೇಕೆಂಬ ಉತ್ಸುಕತೆ ಬಹಳ ದಿನಗಳಿಂದ ಇದ್ದಿತು. ಇದನ್ನು ನಾನು ಹೇಗೆ ಬಚ್ಚಿಟ್ಟಿದ್ದೆನೆಂಬುದು ಯಾರಿಗೂ ತಿಳಿಯದು. ಆದರೆ ಇದನ್ನು ಆ ಪರಮಾತ್ಮನೇ ಬಲ್ಲ. ನನ್ನ ಈ ಆಸೆಯನ್ನು ವ್ಯಕ್ತ ಮಾಡಬಾರದೆಂದು ನಾನೆಷ್ಟು ಪ್ರಯತ್ನಿಸಿದರೂ ಕೊನೆಗೆ ಒಂದು ನೀಳವಾದ ಉಸಿರು ಹೊರಬಿದ್ದಿತು. ಆಕೆಯು ವಿಸ್ಮಯದಿಂದ ಕ್ಷಣಹೊತ್ತು ನನ್ನ ಮುಖವನ್ನು ದಿಟ್ಟಿಸಿ ನೋಡುತ್ತಿದ್ದು, ಬಳಿಕ ನಕ್ಕು ಕೇಳಿದಳು "ಹೇಗೆ ಕಾಣಿಸುವೆ? ರೋಗಿಯಂತೆಯೆ?"

ಒಮ್ಮೆಗೆ ಈ ಪ್ರಶ್ನೆಗೆ ಉತ್ತರವೀಯಲಾಗಲಿಲ್ಲ. ಹೌದು, ರೋಗಿಯಂತೆ ಕಾಣುವಳು, ಆದರೆ ಅಲ್ಲ ಇದಾವುದೂ ಅಲ್ಲ. ಆಕೆಯು ಪಾದಚಾರಿಯಾಗಿ ಅದೆಷ್ಟು ತೀರ್ಥಯಾತ್ರೆಯನ್ನು ಮಾಡಿ ಹಿಂತಿರುಗಿ ಬಂದಿರುವಳು, ಆದುದರಿಂದ ದಣಿದಂತೆ, ಬಾಡಿದಂತೆ ಕಾಣುತ್ತಿರುವಳು ಎಂದು ವಿಚಾರವು ಬಂದಿತು. ಈಗ ತನ್ನ ಭಾರವನ್ನು ತಾನು ಹೊತ್ತುಕೊಳ್ಳುವಷ್ಟು ಶಕ್ತಿಯು ಅವಳಲ್ಲಿ ಈಗ ಇಲ್ಲವೇನೊ ಎಂಬಂತೆ ಎನಿಸುತ್ತಿದ್ದಿತು, ಭಾರವಹನದ ಪ್ರವೃತ್ತಿಯೂ ಇಲ್ಲವೇನೊ ಎಂಬಂತೆ ಎನಿಸುತ್ತಿದ್ದಿತು. ಈಗ ಅವಳು ನಿಶ್ಚಿಂತೆಯಿಂದ, ನಿರ್ಭಯವಾಗಿ ಕಣ್ಣುಮುಚ್ಚಿಕೊಂಡು ಮಲಗಲು ಸ್ವಲ್ಪ ಸ್ಥಳವನ್ನು ಹುಡುಕುತ್ತಿರುವಳು. ನಾನು ನಿರುತ್ತರಳಾದುದನ್ನು ನೋಡಿ "ಹೇಳಿರಿ, ಹೇಳುವುದಿಲ್ಲವೇಕೆ?" ಎಂದು ನುಡಿದಳು.

"ಹೇಳಿಸಬೇಡ."

ರಾಜಲಕ್ಷ್ಮಿಯು ಮಕ್ಕಳಂತೆ ಜೋರಾಗಿ ತಲೆಯಲ್ಲಾಡಿಸಿ "ಆಗದು, ಹೇಳಲೇಬೇಕು. ನಾನು ನೋಡಲಿಕ್ಕೆ ಈಗ ಕುರುಪಿಯಾಗಿರುವೆನೆಂದು ಜನರು ಹೇಳುತ್ತಾರೆ. ಇದು ನಿಜವೇ?" ಎಂದಳು.

ನಾನು ಗಂಭೀರನಾಗಿ "ಹೌದು, ನಿಜ." ಎಂದೆ.

ರಾಜಲಕ್ಷ್ಮಿಯು ನಕ್ಕು ನೀವು ಮನುಷ್ಯರನ್ನು ಇಷ್ಟು ಅಪ್ರತಿಭರನ್ನಾಗಿ ಮಾಡುತ್ತೀರಿ-- ಒಳ್ಳೇದು, ಇದರಲ್ಲಿ ಕೆಡುಕೇನು! ಒಳ್ಳೆಯದು ಏನು? ಸೌಂದರ್ಯವನ್ನು ಕಟ್ಟಿಕೊಂಡು ಇನ್ನು ನಾನು ಮಾಡುವು

ದಾದರೂ ಏನು! ನಾನು ನಿಮ್ಮೊಡನೆ ಸುಂದರ-ಅಸುಂದರ, ಒಳ್ಳೆಯವಳು, ಕೆಟ್ಟವಳು ಆಗಿ ಕಾಣುವಂತಹ ಸಂದರ್ಭವನ್ನು ಇಟ್ಟುಕೊಂಡಿಲ್ಲ. ಅದಕ್ಕಾಗಿ ನಾನೇಕೆ ಚಿಂತೆ ಹಚ್ಚಿಕೊಂಡು ಸಾಯಬೇಕು!" ಎಂದಳು.

"ಅದು ನಿಜ, ಚಿಂತೆಯಿಂದ ಸಾಯಲು ಯಾವ ಕಾರಣವೂ ಇಲ್ಲ. ಜನರು ನಿನಗೆ ಈ ಮಾತನ್ನು ಹೇಳುವುದಿಲ್ಲ, ಮೇಲಾಗಿ ನಂಬಿಕೆ ಇಡುವಂಥವಳೂ ಇರುವುದಿಲ್ಲ. ಮನದೊಳಗೇ ತಿಳಿಯುತ್ತಿದ್ದರೆ—"

ರಾಜಲಕ್ಷ್ಮಿಯು ಕೋಪದಿಂದ "ಎಲ್ಲರ ಮನದೊಳಗಿನ ಮಾತನ್ನು ತಿಳಿದುಕೊಳ್ಳುವ ಶಕ್ತಿಯುಳ್ಳ ಅಂತರ್ಯಾಮಿಯು ನೀವೇನು! ನಾನು ಹೀಗೆ ಎಂದೆಂದಿಗೂ ವಿಚಾರ ಮಾಡುವವಳಲ್ಲ. ನೀವೇ ನಿಜ, ನಿಜ ಹೇಳಿರಿ. ನೀವು ಬೇಟೆಯಾಡಲು ಹೋದಾಗ ನನ್ನನ್ನು ಯಾವ ಸ್ಥಿತಿಯಲ್ಲಿ ನೋಡಿದ್ದಿರೊ ಅದೇ ಸ್ಥಿತಿಯಲ್ಲಿ ನಾನಿರುವೆನೇನು? ಆಗಿನಷ್ಟು ರೂಪವತಿಯು ನಾನಿರುವೆನೇನು? ಆಗಿನ ರೂಪ ಈಗ ಉಳಿದಿಲ್ಲ, ಎಷ್ಟೊ ಕುರೂಪಿಯಾಗಿರುವೆ!" ಎಂದಳು.

"ಇಲ್ಲ, ಆಗಿನಕ್ಕಿಂತ ಈಗ ಚೆನ್ನಾಗಿ ಕಾಣಿಸುವಿ."

ರಾಜಲಕ್ಷ್ಮಿಯು ಕ್ಷಣಮಾತ್ರದಲ್ಲಿ ಕಿಡಿಕಿಯ ಹೊರಗೆ ತನ್ನ ಮುಖವನ್ನು ಹಾಕಿ ತನ್ನ ನಗುಮೊಗವನ್ನು ನನಗೆ ತೋರಗೊಡಲಿಲ್ಲ. ನನ್ನ ಮಾತಿಗೆ ಉತ್ತರವೀಯದೆ ಸುಮ್ಮಗಾಗಿಬಿಟ್ಟಳು. ತನ್ನ ಮೊಗದ ಮೇಲಿನ ನಗುವನ್ನು ದೂರ ಮಾಡಿಕೊಂಡು ಪುನಃ ಮುಖವನ್ನು ಒಳಗೆ ತೆಗೆದುಕೊಂಡು "ನಿಮಗೆ ಜ್ವರ ಬಂದಿದ್ದುವೆ? ಆ ದೇಶದ ಹವೆ ಮತ್ತು ನೀರು ನಿಮಗೆ ತಡೆಯುವದಿಲ್ಲವೆ?" ಎಂದು ಕೇಳಿದಳು.

ನಾನು "ತಡೆಯದಿದ್ದರೇನಾಯಿತು? ಹೇಗಾದರೂ ಸರಿಯೆ, ಎಲ್ಲವನ್ನು ಅನುಕೂಲ ಮಾಡಿಕೊಂಡು ಇರಬೇಕಾಗುವುದು" ಎಂದೆ. ಈ ಮಾತಿಗೆ ರಾಜಲಕ್ಷ್ಮಿಯು ಏನೆಂದು ಉತ್ತರ ಕೊಡುವಳೆಂಬುದನ್ನು ನಾನು ಅರಿತುಕೊಂಡಿದ್ದೆ. ಯಾವ ದೇಶದ ಜಲವಾಯುವನ್ನು ನಾನು ಒಗ್ಗಿಸಿಕೊಳ್ಳಲಾರದೆ ಹೋದೆನೊ ಅದನ್ನು ಇನ್ನು ಮುಂದೆ ಒಗ್ಗಿಸಿಕೊಳ್ಳಬಲ್ಲೆನೆಂಬುದರ ಮೇಲೆ ಆಕೆಗೆ ವಿಶ್ವಾಸವಾಗದು. ಆದ್ದರಿಂದ

ಪುನಃ ನನಗೆ ಹೋಗಗೊಡಳು ಎಂದು ನಾನು ಬಗೆದಿದ್ದೆ. ಆದರೆ ಹೀಗೆ ಆಗಲಿಲ್ಲ. ಆಕೆಯು ಸ್ವಲ್ಪ ಹೊತ್ತು ಸುಮ್ಮಗಿದ್ದು ಕೋಮಲ ದನಿಯಿಂದ “ ಅದೇನೊ ನಿಜ. ಇದರ ಹೊರತಾಗಿ ಅಲ್ಲಿ ಇನ್ನೂ ಎಷ್ಟೋ ಜನ ಬಂಗಾಲಿಗಳೂ ಇರುತ್ತಾರೆ. ಅವರಿಗೆ ಅಲ್ಲಿಯ ನೀರು ಹವೆ ಒಗ್ಗಿದರೆ ನಿಮಗೇಕೆ ಒಗ್ಗಲಾರದು ? ಅಹುದೊ ಅಲ್ಲವೊ ? ಹೇಳಿರಿ. ” ಎಂದಳು.

ಈ ರೀತಿಯಾಗಿ ನನ್ನ ಪ್ರಕೃತಿಯ ಬಗ್ಗೆ ಆಕೆಯು ತೋರಿಸಿದ ನಿಷ್ಕಾಳಜಿತನವು ನನಗೆ ನೋವನ್ನುಂಟು ಮಾಡಿತು. ಆದುದರಿಂದ ನಾನು ಕೇವಲ ‘‘ ಹೂಃ ಎಂದು ಸುಮ್ಮಗಾದೆ. ನನ್ನ ಪ್ಲೇಗಿನ ಕತೆಯನ್ನು ರಾಜಲಕ್ಷ್ಮಿಯ ಕಿವಿಗೆ ಯಾವ ರೀತಿಯಾಗಿ ಹಾಕಲಿ ಎಂದು ನಾನು ಆಗಾಗ್ಗೆ ಯೋಚಿಸುತ್ತಿದ್ದೆ. ದೂರದ ಪ್ರವಾಸದಲ್ಲಿ ಜೀವನ ಮೃತ್ಯುವಿನ ಸಂಧಿಕಾಲದಲ್ಲಿ ನಾನು ಕಳೆಯುತ್ತಿದ್ದ ದುಃಖದ ದಿನಗಳ ವರ್ಣನೆಯನ್ನು ಕೇಳಿ ಆಕೆಯ ಹೃದಯದಲ್ಲಿ ಎಂತಹ ಬಿರುಗಾಳಿ ಏಳಬಹುದು ಎಂಬುದನ್ನೂ ಯೋಚಿಸುತ್ತಿದ್ದೆ! ಎರಡೂ ನಯನಗಳನ್ನು ನೀರಿನಲ್ಲಿ ತೇಲಿಸಿ ಎಂತಹ ಕಂಬನಿಗಳ ಹೊಳೆ ಹರಿದೀತು ಎಂಬುದನ್ನೂ ಯೋಚಿಸುತ್ತಿದ್ದೆ ! ಹೀಗೆ ನಾನು ಅದೆಷ್ಟೊ ರಸಭರಿತ, ನಾನಾ ವರ್ಣದ ಚಿತ್ರವನ್ನು ಕಲ್ಪನೆಯ ಚಕ್ಷುಗಳಿಂದ ನೋಡುತ್ತ ಇರುವೆ. ಇದೇ ಕಲ್ಪನೆಯು ಈಗ ನನ್ನನ್ನು ಅತ್ಯಂತ ಲಜ್ಜಿತನನ್ನಾಗಿ ಮಾಡಿತು. ಛಿಃ ! ಛಿಃ !! ಯಾರಿಗೂ ಯಾರ ಮನದೊಳಗಿನ ಮಾತು ತಿಳಿಯದು, ಇದೇ ಒಂದು ದೇವರು ಇತ್ತ ಸೌಭಾಗ್ಯ. ಇಲ್ಲದೆ ಹೋಗಿದ್ದರೆ—, ಆದರೆ ಇರಲಿ ಬಿಡಿರಿ ಈ ಮಾತು ಇಷ್ಟಕ್ಕೇ. ಏನಾದರೂ ಆಗಲಿ, ನನ್ನ ಆ ಜೀವನ-ಮರಣದ ಕತೆಯನ್ನು ಆಕೆಗೆ ಎಂದೂ ಹೇಳಬಾರದು ಎಂದು ಮನದಲ್ಲಿಯೇ ಎಂದುಕೊಂಡೆ.

ಬಹೂ ಬಾಜಾರದಲ್ಲಿದ್ದ ನಿವಾಸಸ್ಥಾನಕ್ಕೆ ಬಂದು ಮುಟ್ಟಿದೆವು. ರಾಜಲಕ್ಷ್ಮಿಯು ತನ್ನ ಕೋಮಲ ಬೆರಳುಗಳಿಂದ ತೋರಿಸಿ ‘‘ ಇದು ಅಟ್ಟಕ್ಕೆ ಹೋಗುವ ದಾರಿ. ನಿಮ್ಮ ಕೋಣೆಯು ಮೂರನೆಯ ಅಂತಸ್ತಿನ ಮೇಲೆ ಇದೆ. ಅಲ್ಲಿಗೆ ನೀವು ಹೋಗಿರಿ, ಸ್ವಲ್ಪ ವಿಶ್ರಮಿಸಿರಿ. ನಾನು ಬರುವೆ ” ಎಂದು ಅಡುಗೆಯಮನೆಯ ಕಡೆಗೆ ನಡೆದಳು.

ನಾನು ಕೋಣೆಯನ್ನು ಪ್ರವೇಶಿಸಿದೆ. ನನಗಾಗಿಯೆ ಅದು ಸಜ್ಜು ಗೊಳಿಸಲ್ಪಟ್ಟಿದ್ದಿತು. ಪ್ಯಾರಿಯು ಪಾಟಣಾದ ತನ್ನ ಮನೆಯಿಂದ ನನ್ನ ಪುಸ್ತಕ, ನನ್ನ ಗುಡಗುಡಿ ಕೂಡ ತರಲು ಮರೆತಿರಲಿಲ್ಲ. ಸೂರ್ಯಾಸ್ತದ ಒಂದು ಬೆಲೆಯುಳ್ಳ ಚಿತ್ರವು ನನಗೆ ಅತ್ಯಂತ ಪ್ರಿಯವಾಗಿದ್ದಿತು. ಅಲ್ಲಿ ಆಕೆಯು ಅದನ್ನು ತನ್ನ ಕೋಣೆಯೊಳಗಿಂದ ತೆಗೆದು ನನ್ನ ಶಯನ ಗೃಹದಲ್ಲಿ ತೂಗು ಹಾಕಿದ್ದಳು. ಆ ಚಿತ್ರವನ್ನು ಕೂಡ ಆಕೆಯು ತನ್ನ ಸಂಗಡ ಕಲಕತ್ತೆಗೆ ತಂದಿರುವಳು. ಇವೆಲ್ಲವೂ ನನಗೆ ಸಜ್ಜುಗೊಳಿಸಿದ ಕೋಣೆಯಲ್ಲಿ ಚೆನ್ನಾಗಿ ಇಡಲ್ಪಟ್ಟಿದ್ದುವು. ನನ್ನ ಲೇಖನ ಸಾಮಗ್ರಿ ಗಳೂ ಬಂದಿದ್ದುವು. ನನ್ನ ಬಟ್ಟೆಗಳೂ ತೂಗು ಹಚ್ಚಲ್ಪಟ್ಟಿದ್ದುವು. ಅಲ್ಲಿ ಒಂದು ಆರಾಮ ಕುರ್ಚಿಯನ್ನೂ ನಾನು ಉಪಯೋಗಿಸುತ್ತಿದ್ದೆ. ಅದನ್ನು ಬಹುಶಃ ತರಲು ಪ್ಯಾರಿಗೆ ಸಾಧ್ಯವಾಗಿರಲಿಕ್ಕಿಲ್ಲವೆಂದು ತೋರ್ಯು ತ್ತದೆ. ಏಕೆಂದರೆ ಅದೇ ತರದ ಒಂದು ಹೊಸ ಆರಾಮ ಕುರ್ಚಿಯು ಕಿಡಿಕಿಯ ಬಳಿಯಲ್ಲಿ ಇಡಲ್ಪಟ್ಟಿದ್ದಿತು. ಮೆಲ್ಲಗೆ ನಾನು ಹೋಗಿ ಅದರ ಮೇಲೆಯೆ ಕಣ್ಣು ಮುಚ್ಚಿಕೊಂಡು ಮಲಗಿದೆ. ಒಣಗಿದ ನದಿಗೆ ಮಹಾ ಪೂರ ಬಂದಾಗ ಆಗುವ ಜಲೋಚ್ಛ್ವಾಸದಂತೆ ಶಬ್ದವು ಪುನಃ ಕೇಳಿಸ ತೊಡಗಿದಂತೆ ಎನಿಸಿತು.

ಸ್ನಾನ ತೀರಿಸಿಕೊಂಡು ಊಟ ಮಾಡಿದೆ. ದಣಿವಾದುದರಿಂದ ಮಧ್ಯಾಹ್ನ ಮಲಗಿದೆ. ನಿದ್ರೆಯು ಹಾರುತ್ತಲೇ ಕಣ್ದೆರೆದು ನೋಡಿದೆ--- ಪಶ್ಚಿಮದ ಕಡೆಯ ಸಂಧ್ಯಾಕಾಲದ ಬಿಸಿಲು ನನ್ನ ಪಾದಗಳ ಮೇಲೆ ಬೀಳುತ್ತಿದ್ದಿತು ಮತ್ತು ಪ್ಯಾರಿಯು ಎಡ ಮೊಳಕೈ ಊರಿ ನನ್ನ ಮುಖದ ಮೇಲೆ ಬಾಗಿ ಬಲಗೈಯಿಂದ ನನ್ನ ಮುಖದ ಹಾಗೂ ಎದೆಯ ಮೇಲಿನ ಬೆವರನ್ನು ತನ್ನ ಸೆರಗಿನಿಂದ ಒರೆಸುತ್ತಿದ್ದಳು. ಆಕೆಯು ಮೆಲ್ಲಗೆ " ಬೆವರಿನಿಂದ ಗಾದಿ ಮತ್ತು ದಿಂಬು ತೊಯ್ದು ಹೋಗಿವೆ. ಪಶ್ಚಿಮದ ಕಡೆಗೆ ಇರುವುದರಿಂದ ಈ ಕೋಣೆಯಲ್ಲಿ ಬಿಸಿಲು ಬಹಳ ಬರುವುದು. ನಾಳೆ ಎರಡನೆಯ ಅಂತಸ್ತಿನ ಮೇಲೆ ನನ್ನ ಕೋಣೆಯ ಪಕ್ಕದಲ್ಲಿ ಇರುವ ಕೋಣೆಯಲ್ಲಿ ನಿಮ್ಮ ಹಾಸುಗೆಯನ್ನು ಹಾಸಿಸುವೆ. " ಎಂದು ಮೆಲ್ಲಗೆ ನುಡಿದು ನನ್ನ ಎದೆಯ ತೀರ ಸನಿಹದಲ್ಲಿ ಕುಳಿತು ಬೀಸಣಿಕೆ ಯಿಂದ ಗಾಳಿ ಹಾಕತೊಡಗಿದಳು. ರತನ ಕೋಣೆಗೆ ಬಂದು

"ಅಮ್ಮಾ, ಬಾಬೂಜಿಯವರಿಗೆ ಟೀ ತೆಗೆದುಕೊಂಡು ಬರಲಾ?" ಎಂದು ಕೇಳಿದ.

"ಹೂಂ, ತೆಗೆದುಕೊಂಡು ಬಾ. ಬಂಕೂ ಮನೆಯಲ್ಲಿದ್ದರೆ ಸ್ವಲ್ಪ ಅವನನ್ನು ಇಲ್ಲಿಗೆ ಕಳಿಸಿಕೊಡು." ಎಂದು ಪ್ಯಾರಿಯು ಹೇಳಿದಳು. ನಾನು ಪುನಃ ಕಣ್ಣುಗಳನ್ನು ಮುಚ್ಚಿಕೊಂಡೆ. ಸ್ವಲ್ಪೆ ಹೊತ್ತಿನಲ್ಲಿ ಹೊರಗೆ ಚಪ್ಪಲಿನ ಶಬ್ದ ಕೇಳಿಸಿತು. ಪ್ಯಾರಿಯು ಕೂಗಿ "ಯಾರು, ಬಂಕೂ? ಸ್ವಲ್ಪ ಇಲ್ಲಿ ಬಾ" ಎಂದಳು.

ಅವನ ಹೆಜ್ಜೆಯ ಸಪ್ಪಳದಿಂದ ಅವನು ಬಹಳ ಮೆಲ್ಲಗೆ ಕೋಣೆಯಲ್ಲಿ ಬಂದಿರುವನೆಂದು ಎನಿಸಿತು. ಪ್ಯಾರಿಯು ಮೊದಲಿನಂತೆ ಗಾಳಿ ಹಾಕುತ್ತ ಹಾಕುತ್ತ "ಸ್ವಲ್ಪ ಕಾಗದ ಪೆನ್ಸಿಲು ತೆಗೆದುಕೊಂಡು ಕುಳಿತುಕೊ. ಏನೇನು ತರಬೇಕಾಗಿದೆಯೊ ಅದರದೊಂದು ಪಟ್ಟಿಯನ್ನು ಮಾಡಿಕೊಂಡು ಆಳುಮಗನನ್ನು ಕರೆದುಕೊಂಡು ಪೇಟೆಗೆ ಹೋಗಿ ಬಾ ಮಗೂ. ಮನೆಯಲ್ಲಿ ಏನೂ ಇಲ್ಲ" ಎಂದಳು.

ಈ ದಿನ ನನಗೆ ಪ್ಯಾರಿಯ ವ್ಯವಹಾರವು ತೀರ ಹೊಸದಾಗಿ ತೋರಿತು. ನನ್ನ ಕಾಯಿಲೆಯ ಮಾತಂತೂ ದೂರ ಇರಲಿ, ಆದರೆ ಇದಕ್ಕೂ ಪೂರ್ವದಲ್ಲಿ ಆಕೆಯು ನನ್ನ ಇಷ್ಟು ಸಮೀಪದಲ್ಲಿ ಕುಳಿತು ಎಂದೂ ಗಾಳಿಯನ್ನು ಹಾಕಿದ್ದಿಲ್ಲ. ಆದರೆ, ಇದೂ ಒಂದು ದಿವಸ ಸಂಭವಿಸಬಹುದೆಂದು ನಾನು ಒಪ್ಪಿಕೊಳ್ಳಬಹುದು. ಆದರೆ ಇದೇನು? ಆಕೆಯು ಎಳ್ಳಷ್ಟೂ ಸಂಕೋಚಪಟ್ಟುಕೊಳ್ಳದೆ ಆಳುಮಕ್ಕಳ ಎದುರಿಗೆ ಬಂಕೂನ ಎದುರಿಗೆ ಕೂಡ ದರ್ಪದಿಂದ ತಾನೇ ತನ್ನನ್ನು ಪ್ರಕಟಗೊಳಿಸಿದಳು. ಆಕೆಯ ಆ ದಿನದ ಅಪೂರ್ವ ಸೌಂದರ್ಯವು ನನ್ನ ರೋಮರೋಮದಲ್ಲಿ ಸಂಚರಿಸಿ ಆಕೆಯ ವಶಕ್ಕೆ ನನ್ನನ್ನು ಕೊಟ್ಟುಬಿಟ್ಟಿತು! ಇದೇ ಬಂಕೂ, ಪ್ಯಾರಿಯ ಪಾಟಣಾ ನಗರದ ಮನೆಯಲ್ಲಿರುವಾಗ ಎಲ್ಲಿ ತಪ್ಪು ತಿಳಿದುಕೊಳ್ಳತೊಡಗುವನೊ ಎಂದು ಪ್ಯಾರಿಯನ್ನು ಒಂದು ದಿನ ನಾನು ಅಗಲಬೇಕಾಗಿತ್ತು ಎಂಬ ಸಂಗತಿಯು ನೆನಪಿಗೆ ಬಂದಿತು. ಆ ದಿನದ ಮತ್ತು ಈ ದಿನದ ಆಚರಣೆಯಲ್ಲಿ ಎಷ್ಟು ಅಂತರ!

ಪೇಟೆಯಿಂದ ತರುವ ವಸ್ತುಗಳ ಪಟ್ಟಿಯನ್ನು ಮಾಡಿಕೊಂಡು ಬಂಕೂ ಹೊರಟುಹೋದ. ಚಹಾ ಮತ್ತು ಗುಡಗುಡಿಯನ್ನು ಕೊಟ್ಟು

ರತನನೂ ಕೆಳಗೆ ಹೊರಟುಹೋದ. ಪ್ಯಾರಿಯು ಸ್ವಲ್ಪ ಹೊತ್ತು ಸುಮ್ಮಗೆ ಕುಳಿತುಕೊಂಡು ನನ್ನ ಮುಖದ ಕಡೆಗೆ ನೋಡುತ್ತಿದ್ದಳು. ಬಳಿಕ ಒಮ್ಮೆಲೆ ವಿಚಾರಿಸಿದಳು "ನಾನು ನಿಮಗೆ ಒಂದು ಮಾತನ್ನು ಕೇಳುವೆ-ಒಳ್ಳೇದು, ಅಭಯಾ ಮತ್ತು ರೋಹಿಣಿಬಾಬೂ ಇವರಲ್ಲಿ ಯಾರ ಪ್ರೀತಿಯು ಹೆಚ್ಚಾಗಿರುವುದು ಎಂಬುದನ್ನು ಹೇಳಬಲ್ಲಿರಾ ?"

ನಾನು ನಕ್ಕು "ನಿನ್ನ ಮೇಲೆ ಇಷ್ಟು ಮೋಹಿತಳಾದ ಅಭಯಾಳ ಪ್ರೀತಿಯೆ ನಿಶ್ಚಯವಾಗಿಯೂ ಹೆಚ್ಚಾಗಿದೆ" ಎಂದೆ.

ರಾಜಲಕ್ಷ್ಮಿಯೂ ನಕ್ಕುಬಿಟ್ಟು "ನನ್ನ ಮೇಲೆ ಮೋಹಿತಳಾಗಿರು ರುವಳೆಂಬುದನ್ನು ನೀವು ಹೇಗೆ ತಿಳಿದುಕೊಂಡಿರಿ ?" ಎಂದು ಕೇಳಿದಳು.

ನಾನೆಂದೆ "ಹೇಗಾದರೂ ತಿಳಿದುಕೊಂಡಿರಲಿ, ನಿಜವಹುದೊ ಅಲ್ಲವೊ ?"

ರಾಜಲಕ್ಷ್ಮಿಯು ಕ್ಷಣಹೊತ್ತು ಸುಮ್ಮಗಿದ್ದು "ಅದು ಹೇಗಾದರೂ ಇರಲಿ, ಆದರೆ ಹೆಚ್ಚು ಪ್ರೀತಿಯನ್ನು ರೋಹಿಣಿಬಾಬುಗಳೇ ಮಾಡುತ್ತಾರೆ. ಅವರು ಇಷ್ಟು ಹೆಚ್ಚು ಪ್ರೀತಿ ಮಾಡುತ್ತಿದ್ದುದರಿಂದಲೇ ಇಷ್ಟು ದೊಡ್ಡ ದುಃಖವನ್ನು ತಮ್ಮ ತಲೆಯಮೇಲೆ ಹೊತ್ತುಕೊಂಡಿದ್ದಾರೆ. ಇಲ್ಲದೇ ಹೋಗಿದ್ದರೆ, ಇದು ಅವರು ಅವಶ್ಯವಾಗಿ ಮಾಡಬೇಕಾದ ಕರ್ತವ್ಯವಿರಲಿಲ್ಲ. ಅವರ ಈ ತ್ಯಾಗದ ಎದುರಿನಲ್ಲಿ ಅಭಯಾ ಎಷ್ಟು ಸ್ವಾರ್ಥತ್ಯಾಗ ಮಾಡಬೇಕಾಯಿತು ಹೇಳಿರಿ ನೋಡೋಣ ?" ಎಂದಳು.

ಆಕೆಯ ಪ್ರಶ್ನೆಯನ್ನು ಆಲಿಸಿ ನಾನು ನಿಜವಾಗಿಯೂ ವಿಸ್ಮಿತನಾದೆ. ನಾನೆಂದೆ "ನನಗೆ ಮಾತ್ರ ನಿನ್ನ ಅಭಿಪ್ರಾಯಕ್ಕೆ ತೀರ ವಿರುದ್ಧವಾಗಿ ಕಾಣುತ್ತದೆ. ತ್ಯಾಗದ ದೃಷ್ಟಿಯಿಂದ ವಿಚಾರ ಮಾಡಿದರೆ, ಹೆಚ್ಚು ಕಠಿನವಾದ ತ್ಯಾಗವನ್ನು ಅಭಯಾಳೇ ಮಾಡಬೇಕಾಯಿತು, ದುಃಖವನ್ನೂ ಹೆಚ್ಚಾಗಿ ಅನುಭವಿಸಬೇಕಾಯಿತು. ರೋಹಿಣಿಬಾಬುಗಳು ಬೇಕಾದುದನ್ನು ಮಾಡಿದರೂ ಅವರು ಸಮಾಜದ ದೃಷ್ಟಿಯಲ್ಲಿ ಗಂಡುಸರು— ನೀನು ನಿತಾಂತ ಸತ್ಯವನ್ನು ಏಕೆ ಮರೆಯುವಿ ?"

ರಾಜಲಕ್ಷ್ಮಿಯು ತಲೆಯಲ್ಲಾಡಿಸಿ "ನಾನೇನನ್ನೂ ಮರೆಯುವುದಿಲ್ಲ. ಗಂಡಸರೆಂದು ಹೇಳಿ ಸಹಜವಾಗಿ ಪಾರಾಗುವ ಹಂಚಿಕೆಯನ್ನು ಹುಡುಕುವುದು ಕ್ಷುದ್ರ ಮತ್ತು ಅಧಮ ಮನುಷ್ಯರ ನಡತೆ. ರೋಹಿಣೀ ಬಾಬುಗಳಂತಹವರದಲ್ಲ. ಅವರು ಆಸೆಯು ಪೂರ್ಣವಾದಕೂಡಲೆ ಅಥವಾ ತಮಗೆ ಬೇಕಾದುದು ದೊರೆಯದಂತೆ ಆದ ಬಳಿಕ ಎಲ್ಲವನ್ನೂ ತೊರೆದು ಓಡಿಹೋಗಿ, ಮನೆಯಲ್ಲಿದ್ದುಕೊಂಡು ಸಭ್ಯ ಮನುಷ್ಯರಂತೆ ಜೀವನಯಾತ್ರೆಯನ್ನು ಮಾಡಬಲ್ಲರೆಂದು ನೀವು ಹೇಳುತ್ತಿರುವಿಲ್ಲವೆ? ಅವರು ಹಾಗೆ ಮಾಡಬಲ್ಲರು, ನಿಜ, ಆದರೆ ಹೀಗೆ ಎಲ್ಲರೂ ಮಾಡಬಲ್ಲರೇನು? ನೀವು ಮಾಡಬಲ್ಲಿರೇನು? ಯಾರು ಈ ರೀತಿಯಾಗಿ ಮಾಡಲಾರರೊ ಅವರ ಮೇಲಿರುವ ಹೊಣೆಯ ಭಾರವನ್ನು ಸ್ವಲ್ಪ ತೂಗಿ ನೋಡಿರಿ. ಆ ಮೇಲೆ ವಿಚಾರ ಮಾಡಿ ಹೇಳಿರಿ. ಅವರು ತಮ್ಮ ನಿಂದಿತ ಜೀವನವನ್ನು ಮನೆಯ ಒಂದು ಮೂಲೆಯಲ್ಲಿ ಕಳೆಯುವುದಕ್ಕೂ ಅನುಕೂಲತೆಯಿಲ್ಲ. ಅವರು ಪ್ರಪಂಚದೊಳಗೆ ದ್ವಂದ್ವ ಯುದ್ಧದಲ್ಲಿ ಇಳಿಯಬೇಕಾಗುವುದು, ಅಪಿಚಾರ ಮತ್ತು ಅಪಯಶದ ಹೊರೆಯನ್ನು ಬಾಯಿಗೆ ಬೀಗ ಹಾಕಿಕೊಂಡು ಹೊತ್ತುಕೊಂಡಿರಬೇಕಾಗುವುದು. ತಮ್ಮ ಅತ್ಯಂತ ಸ್ನೇಹಕ್ಕೆ ಪಾತ್ರಳಾದವಳನ್ನು— ಭಾವೀ ಸಂತಾನದ ಜನನಿಯನ್ನು ಸಮಾಜದ ಸಮಸ್ತ ಅಪಮಾನಗಳಿಂದ ಅಕಲ್ಯಾಣಗಳಿಂದ ಸಂರಕ್ಷಿಸಿ ಇಡಬೇಕಾಗುವುದು— ಇದು ಸಾಮಾನ್ಯ ಕಷ್ಟದ ಕೆಲಸವೆಂದು ನೀವು ಬಗೆದಿರುವಿರಾ? ಇಲ್ಲಿ ಎಲ್ಲಕ್ಕೂ ಹೆಚ್ಚಿನ ದುಃಖದ ಸಂಗತಿಯೊಂದಿದೆ-- ಯಾರು ಅನಾಯಾಸವಾಗಿ ದುಃಖದ ಭಾರವನ್ನು ಇಳಿಸಿ ಜಾರಬಲ್ಲರೊ ಅವರೇ ಸರ್ವಸ್ವವನ್ನೂ ನಾಶಮಾಡಿ ಬಿಡುವ ವಿಕಟ ಪ್ರಲೋಭನೆಯಿಂದ ತನ್ನನ್ನು ತಾನೇ ರಕ್ಷಿಸಿಕೊಂಡು ನಡೆಯುವ ಗುರುತರವಾದ ಭಾರವನ್ನು ಹೊತ್ತುಕೊಂಡು ತಿರುಗಬೇಕಾಗುತ್ತದೆ. ದುಃಖದ ತಕ್ಕಡಿಯಲ್ಲಿ ಆತ್ಮೋತ್ಸರ್ಗದೊಡನೆ ಸಮತೂಕವನ್ನು ಮಾಡುವುದಕ್ಕಾಗಿ ಯಾವ ಪ್ರೀತಿಯ ಆವಶ್ಯಕತೆಯು ಇರುವುದೊ ಅದನ್ನು ಪುರುಷನು ತನ್ನೊಳಗಿಂದ ಹೊರಗೆ ವ್ಯಕ್ತ ಮಾಡಲಾರದವನಾದರೆ ಯಾವ ಸ್ತ್ರೀಗೂ ಅದನ್ನು ಪೂರ್ತಿಗೊಳಿಸಲು ಸಾಧ್ಯವಿಲ್ಲ." ಎಂದಳು.

ನಾನು ಈ ಸಮಸ್ಯೆಯನ್ನು ಈ ದೃಷ್ಟಿಯಿಂದ ಎಂದೂ ವಿಚಾರಿಸಿ

ನೋಡಿರಲಿಲ್ಲ. ರೋಹಿಣಿಬಾಬುವಿನ ಆ ಸರಳ ಮುಗ್ಧ ಭಾವವನ್ನೂ ಅಭಯಾ ತನ್ನ ಪತಿಯ ಮನೆಗೆ ಹೋಗುವಾಗ ಅವನ ಶಾಂತ ಮುಖದ ಮೇಲೆ ಅಪರಿಸೀಮ ವೇದನೆಯನ್ನು ಸಹಿಸುವ ಚಿತ್ರವನ್ನು ನಾನು ಕಂಡಿದ್ದೆ. ಅದು ಈಗ ಇದ್ದಕ್ಕೆ ಇದ್ದಂತೆ ನನ್ನ ಕಣ್ಮುಂದೆ ಬಂದು ನಿಂತಿತು. ಅದರ ಪ್ರತಿಯೊಂದು ರೇಖೆಯೂ ಗೋಚರಿಸುತ್ತಿದ್ದಿತು. ಆದರೆ ನಾನು ಬಾಯಿಂದ "ಆದರೆ ನೀನು ಕೇವಲ ಅಭಯಾಳಿಗೇ ಪತ್ರಮುಖೇನ ಪುಷ್ಪಾಂಜಲಿಯನ್ನು ಕಳುಹಿದ್ದೆ." ಎಂದೆ.

"ಅವಳಿಗೆ ದೊರೆಯಬೇಕಾದುದನ್ನು ಇಂದಿಗೂ ನಾನು ಕೊಡುವೆ. ಏಕೆಂದರೆ ಆಕೆಯು ತಾನು ಮಾಡಿದ ಪಾಪವನ್ನೊ ಅಪರಾಧವನ್ನೊ ತನ್ನ ಆಂತರಿಕ ತೇಜಸ್ಸಿನಿಂದ ಸುಟ್ಟು ನಿರ್ಮಲ ಮಾಡಿಬಿಟ್ಟಿದ್ದಾಳೆ. ಒಂದು ವೇಳೆ ಆಕೆಯು ಹಾಗೆ ಮಾಡದಿದ್ದರೆ ಈ ದಿನ ಸಾಧಾರಣ ಹೆಂಗುಸಿನಂತೆಯೆ ತುಚ್ಛಳೂ ಹೀನಳೂ ಆಗಿರುತ್ತಿದ್ದಳು."

"ಹೀನವೇಕೆ ?"

"ಪತಿಯನ್ನು ಪರಿತ್ಯಜಿಸಿದ ಪಾಪವು ಚಿಕ್ಕದೆ? ಅದಕ್ಕೆ ಸೀಮೆಯಿದೆಯೆ? ಆ ಪಾಪವನ್ನು ಸುಟ್ಟು ಬೂದಿ ಮಾಡುವಷ್ಟು ಬೆಂಕಿಯು ಆಕೆಯಲ್ಲಿ ಇಲ್ಲದೆ ಹೋಗಿದ್ದರೆ ಆಕೆಯು ಈ ದಿನ—"

ನಡುವೇ ನಾನು ಬಾಯಿ ಹಾಕಿ—"ಬೆಂಕಿಯ ಮಾತು ಅಷ್ಟಕ್ಕೇ ಇರಲಿ ಬಿಡು. ಆಕೆಯ ಪತಿಯು ಎಂತಹ ನತದೃಷ್ಟನೆಂಬುದನ್ನು ಸ್ವಲ್ಪ ನೋಡು. ಅವನ ಬಗ್ಗೆ ಸ್ವಲ್ಪ ಯೋಚಿಸಿ ನೋಡು" ಎಂದೆ.

"ಪುರುಷ ಜಾತಿಯು ಚಿರಕಾಲದಿಂದ ಉಚ್ಛೃಂಖಲವಾಗಿದೆ—ಚಿರಕಾಲದಿಂದ ಸ್ವಲ್ಪ ಸ್ವಲ್ಪ ಅತ್ಯಾಚಾರಿಯೂ ಆಗಿರುವುದು; ಆದುದರಿಂದಲೇ ಓಡಿಹೋಗಬೇಕೆನ್ನುವ ಯುಕ್ತಿಯು ಸಫಲವಾಗುವುದಿಲ್ಲ. ಸ್ತ್ರೀಜಾತಿಯು ಸಹಿಸಲೇಬೇಕಾಗುವುದು, ಇಲ್ಲದೆ ಹೋದರೆ ಸಂಸಾರವೇ ನಡೆಯಲಿಕ್ಕಿಲ್ಲ."

ರಾಜಲಕ್ಷ್ಮಿಯ ಮಾತಿನ ಝುರಿಯನ್ನು ನೋಡಿ ನನ್ನ ಎಲ್ಲ ವಿಚಾರಗಳು ಕಲಕುಮುಲಕಾದವು. ಮನದಲ್ಲಿಯೇ ನಾನೆಂದುಕೊಂಡೆ—'ಇದು ಸ್ತ್ರೀಯರ ಸನಾತನ ದಾಸ್ಯದ ಸಂಸ್ಕಾರ!' ಸ್ವಲ್ಪ ಅಸಹಿಷ್ಣುತೆ

ಯಿಂದ "ಹಾಗಾದರೆ, ನೀನು ಇದುವರೆಗೆ 'ಬೆಂಕಿ ಬೆಂಕಿ' ಎಂದು ಏನನ್ನು ಬೊಗಳುತ್ತಿದ್ದೆ ?" ಎಂದು ಕೇಳಿದೆ.

ರಾಜಲಕ್ಷ್ಮಿಯು ನಕ್ಕು ನುಡಿದಳು "ಏನು ಬೊಗಳುತ್ತಿದ್ದೆನೆಂಬು ದನ್ನು ಕೇಳುವಿರಾ ? ಈ ದಿನವೇ ಎರಡು ಗಂಟೆ ಮೊದಲು ಪಾಟಣಾದ ವಿಳಾಸಕ್ಕೆ ಬರೆದ ಅಭಯಾಳ ಪತ್ರ ಇಲ್ಲಿಗೆ ಬಂದಿದೆ. ಬೆಂಕಿ ಯಾವು ದೆಂಬುದು ನಿಮಗೆ ಗೊತ್ತಿದೆಯೆ ? ಆ ದಿನ 'ಪ್ಲೇಗು' ಎಂದು ನೀವು ಅಳಿಯನಂತೆ ಆಕೆಯ ಮನೆಯ ಬಾಗಿಲಿಗೆ ಹೋದಾಗ ಯಾವ ವಸ್ತು ವಿನ ಬಲದ ಮೇಲೆ ಆಕೆಯು ನಿಮ್ಮನ್ನು ನಿರ್ಭಯತೆಯಿಂದ, ಯಾವ ಹಿಂದುಮುಂದಿನ ಯೋಚನೆಯನ್ನು ಮಾಡದೆ ಒಳಕ್ಕೆ ಕರೆದುಕೊಂಡಳೊ ಅದಕ್ಕೇ ನಾನು 'ಬೆಂಕಿ' ಎಂದು ಕರೆಯೋಣ. ಆಗ ಆಕೆಗೆ ತನ್ನ ಸುಖದ ಪರವೆ ಇರಲಿಲ್ಲ. ಕರ್ತವ್ಯವೆಂದು ತಿಳಿದು ಯಾವ ತೇಜಸ್ಸು ಮನುಷ್ಯನನ್ನು ಮುಂದುಮುಂದಕ್ಕೆ ದೂಡುತ್ತಿರುವುದೊ ಹಿಂದೆ ಸರಿ ಯಲು ಕೊಡುವುದಿಲ್ಲವೊ ಅದಕ್ಕೇ ನಾನು ಇವೊತ್ತಿನವರೆಗೆ 'ಬೆಂಕಿ ಬೆಂಕಿ' ಎಂದು ಹೇಳುತ್ತಿದ್ದೆ. ಬೆಂಕಿಗೆ 'ಸರ್ವಭುಕ್' ಎಂಬ ಇನ್ನೊಂದು ಹೆಸರಿದೆ, ಅದು ನಿಮಗೆ ಗೊತ್ತಿಲ್ಲವೆ ? ಅದು ಸುಖವನ್ನೂ ದುಃಖವನ್ನೂ ತನ್ನೆಡೆಗೆ ಸೆಳೆದುಕೊಳ್ಳುವುದು, ಯಾವ ಭೇದವನ್ನೂ ಮಾಡುವುದಿಲ್ಲ. ಆಕೆಯು ಇನ್ನೂ ಒಂದು ವಿಷಯವನ್ನು ಬರೆದಿರುವಳು, ಗೊತ್ತೇನು ನಿಮಗೆ ? ಆಕೆಯು ರೋಹಿಣಿಬಾಬುಗಳ ಜೀವನವನ್ನು ಸಾರ್ಥಕ ಮಾಡಬಯಸುವಳು. ಏಕೆಂದರೆ ಈ ಪ್ರಪಂಚದಲ್ಲಿ ಕೇವಲ ತನ್ನ ಜೀವನದ ಸಾರ್ಥಕ್ಯದೊಳಗಿಂದ ಮತ್ತೊಬ್ಬರ ಜೀವನದಲ್ಲಿ ಸಾರ್ಥಕ್ಯವನ್ನು ಸೇರಿಸಬಹುದೆಂದೂ ವ್ಯರ್ಥವಾಗುವುದಾದರೆ ಕೇವಲ ಒಂದೇ ಒಂದು ಜೀವನವು ವ್ಯರ್ಥವಾಗುವುದಿಲ್ಲವೆಂದೂ— ಅದು ತನ್ನೊಡನೆ ಭಿನ್ನ ಭಿನ್ನ ಜೀವನಗಳು ಭಿನ್ನ ಭಿನ್ನ ದಿಕ್ಕುಗಳಿಂದಲೂ ವ್ಯರ್ಥಮಾಡಿ ವ್ಯರ್ಥವಾಗಿ ಹೋಗುವುದೆಂದೂ ಆಕೆಯ ವಿಶ್ವಾಸ. ನಿಜವಲ್ಲವೆ ?" ಇಷ್ಟು ನುಡಿದಬಳಿಕ ಆಕೆಯು ಒಂದು ನೀಳವಾದ ಉಸಿರನ್ನು ಬಿಟ್ಟು ಸುಮ್ಮಗಾದಳು. ಬಳಿಕ ಬಹಳ ಸಮಯದವರೆಗೆ ನಾವಿಬ್ಬರೂ ಮೌನದಿಂದ ಇದ್ದೆವು. ಇನ್ನು ಹೇಳುವುದಕ್ಕೆ ಏನೂ ಇರಲಿಲ್ಲವೆಂದೊ ಏನೊ ಆಕೆಯು ನನ್ನ ಬಿರುಸಾದ ತಲೆಗೂದಲು

ಗಳನ್ನು ಅತ್ತಿಂದ ಇತ್ತ ಇತ್ತಿಂದ ಅತ್ತ ತನ್ನ ಕೋಮಲ ಬೆರಳುಗಳಿಂದ ಹೊರಳಾಡಿಸತೊಡಗಿದಳು. ಆಕೆಯ ಈ ಆಚರಣೆಯು ನನಗೆ ತೀರ ಹೊಸದಂತೆ ತೋರಿತು! ಆಕೆಯು ಒಮ್ಮೆಗೇ ನುಡಿದಳು "ಆಕೆಯು ಬಹಳ ಶಿಕ್ಷಣ ಪಡೆದವಳು ಇರುವಳಲ್ಲವೆ? ಇಲ್ಲದಿದ್ದರೆ ಇಷ್ಟು ತೇಜಸ್ವಿಯು ಇರುತ್ತಿರಲಿಲ್ಲ."

"ಹೌದು, ನಿಜವಾಗಿಯೂ ಆಕೆಯು ಒರ್ವ ಶಿಕ್ಷಣ ಪಡೆದ ರಮಣಿ!"

"ಆದರೆ ಒಂದು ಮಾತನ್ನು ಆಕೆಯು ನನಗೆ ಹೇಳದೇ ಬಚ್ಚಿಟ್ಟಿದ್ದಾಳೆ. ತಾಯಿಯಾಗುವ ಲೋಭವನ್ನು ತನ್ನ ಪತ್ರದಲ್ಲಿ ಮೊದಲಿಂದ ಕೊನೆಯವರೆಗೂ ಹತ್ತಿಕ್ಕಿ ಬಚ್ಚಿ ಇಟ್ಟಿದ್ದಾಳೆ."

"ಏನು? ಆಕೆಗೆ ಈ ಲೋಭವಿದೆಯೆ? ಎಲ್ಲಿ, ನಾನಂತೂ ಕೇಳಲಿಲ್ಲವಲ್ಲ?"

"ಹೋಗಿ,— ಈ ಲೋಭವು ಯಾವ ಹೆಂಗುಸಿಗೆ ಇರುವುದಿಲ್ಲ ಹೇಳಿ! ಏನು ಇದಕ್ಕಾಗಿಯೆ ಆಕೆಯು ಗಂಡುಸರ ಎದುರಿಗೆ ಇದನ್ನು ಹೇಳುತ್ತಾ ತಿರುಗಬೇಕೇನು? ನೀವೂ ಚೆನ್ನಾಗಿದ್ದೀರಿ!"

"ಹಾಗಾದರೆ, ನಿನಗೂ ಈ ಲೋಭವು ಇರುವುದು, ಅಲ್ಲವೆ?"

"ಹೋಗಿ!" ಎಂದು ಆಕೆಯು ಅಕಸ್ಮಾತ್ ನಾಚಿದಳು. ಆಕೆಯ ಮುಖವು ಕೆಂಪೇರಿತು. ತನ್ನ ಮುಖವನ್ನು ಮುಚ್ಚಿಕೊಳ್ಳುವುದಕ್ಕಾಗಿ ಆಕೆಯು ತಲೆ ಕೆಳಗೆ ಮಾಡಿ ಹಾಸುಗೆಯ ಮೇಲೆ ಒರಗಿದಳು. ಆಗ ಅಸ್ತವಾಗುತ್ತಿರುವ ಸೂರ್ಯನ ಕಿರಣಗಳು ಪಶ್ಚಿಮ ಕಿಡಕಿಯಿಂದ ಕೋಣೆಯಲ್ಲಿ ಪ್ರವೇಶಿಸಿದ್ದವು. ಆ ಹೊಂಬಣ್ಣದ ಸೂರ್ಯ ರಶ್ಮಿಗಳು ಆಕೆಯ ಕಪ್ಪಾದ ನೀಳವಾದ ಕೂದಲುಗಳ ಮೇಲೆ ಬಿದ್ದು ವಿಚಿತ್ರವಾದ ಶೋಭೆಯನ್ನುಂಟು ಮಾಡಿದುವು. ಕರ್ಣಗಳಲ್ಲಿ ಧರಿಸಿದ ಲೋಲಕಗಳು ಮಿರಿಮಿರಿ ಮಿಂಚತೊಡಗಿದುವು. ಅವುಗಳ ನಾನಾ ಬಣ್ಣಗಳು ಒಂದು ಅಲೌಕಿಕ ಕಾಂತಿಯನ್ನು ಬೀರಿದುವು. ಸ್ವಲ್ಪ ಹೊತ್ತಿನಲ್ಲಿಯೆ ಆಕೆಯು ತನ್ನನ್ನು ಸಂಬಾಳಿಸಿಕೊಂಡು ಪುನಃ ನೇರವಾಗಿ ಎದ್ದು ಕುಳಿತು "ಲೋಭವಾಗುವುದಕ್ಕೆ ನನಗೆ ಮಕ್ಕಳುಮರಿಗಳು ಇಲ್ಲವೇನು? ಹೆಣ್ಣು ಮಕ್ಕಳ ಮದುವೆಯನ್ನು ಮಾಡಿರುವೆ, ಮಗನ ಮದುವೆಯನ್ನು ಮಾಡ

ಲಿಕ್ಕೆ ಬಂದಿರುವೆ.— ಇನ್ನು ಮೊಮ್ಮಕ್ಕಳು ಮರಿಮಕ್ಕಳು ಆಗುವರು, ಅವರನ್ನು ಎತ್ತಿಕೊಂಡು ಸುಖದಿಂದ ಇರುವೆ.— ನನಗೇತರ ಅಭಾವ ಏದೆ ಹೇಳಿರಿ ?" ಎಂದಳು.

ನಾನು ಸುಮ್ಮನಾದೆ. ಈ ವಿಷಯವನ್ನೆತ್ತಿ ಚರ್ಚೆ ಮಾಡಲು ನನಗೆ ಮನಸ್ಸಾಗಲಿಲ್ಲ.

ರಾಜಲಕ್ಷ್ಮಿಯೆಂದಳು "ಬಂಕೂನ ಮದುವೆಗೆ ಇನ್ನೂ ಹತ್ತು-ಹದಿನೈದು ದಿನಗಳು ಇವೆ. ಕಾಶಿಗೆ ಹೋಗೋಣ ನಡೆಯಿರಿ, ನಿಮ್ಮನ್ನು ನನ್ನ ಗುರುಗಳಿಗೆ ತೋರಿಸಿಕೊಂಡು ಬರುವೆ."

ನಾನು ನಕ್ಕು "ನಾನು ಪ್ರದರ್ಶನದ ವಸ್ತುವೇನು ?" ಎಂದು ನುಡಿದೆ.

"ಇದನ್ನು ಯೋಚಿಸುವ ಭಾರ ನೋಡುವವರ ಮೇಲಿದೆ, ನಿಮ್ಮ ಮೇಲಿರುವುದಿಲ್ಲ."

"ಹಾಗೆಯೆ ಆಗಲಿ. ಆದರೆ ಇದರಿಂದ ನನಗೇನು ಲಾಭ? ನಿನ್ನ ಗುರುದೇವರಿಗೇನು ಲಾಭ ?"

ರಾಜಲಕ್ಷ್ಮಿಯು ಗಂಭೀರಳಾಗಿ "ಲಾಭ ನಿಮಗೇನೂ ಆಗುವುದಿಲ್ಲ, ಆದರೆ ನನಗೆ ಆಗುವುದು. ನನಗೋಸ್ಕರವಾಗಿಯಾದರೂ ಹೊರಡಿ." ಎಂದಳು. ಆದ್ದರಿಂದ ನಾನು ಒಪ್ಪಿದೆ.

ಮುಂದೆ ಬಹಳ ಸಮಯದವರೆಗೆ ಮದುವೆಯ ಮುಹೂರ್ತವಿರಲಿಲ್ಲ, ಆದುದರಿಂದ ಮದುವೆಯ ಸುಗ್ಗಿಯೆ ಸುಗ್ಗಿ ನಡೆದಿದ್ದಿತು. ನಾನಾ ಬ್ಯಾಂಡುಗಳ ಬಜಂತ್ರಿಗಳ ದನಿಗಳು ಮನುಷ್ಯನನ್ನು ಹುಚ್ಚನನ್ನಾಗಿ ಮಾಡಲು ಸೊಂಟಕಟ್ಟಿರುವುವೊ ಏನೊ ಎಂಬಂತೆ ನುಡಿಯುತ್ತಿದುವು. ನಾನು ಸ್ಟೇಶನ್ನಿಗೆ ಹೋಗುವಾಗಲೂ ಇವೇ ವಾದ್ಯಗಳ ಪ್ರಚಂಡ ನಿನಾದವು ಗಗನವನ್ನು ಭೇದಿಸುತ್ತಿದ್ದಿತು. ಈ ವಾದ್ಯಗಳ ಅಬ್ಬರವು ಕೊಂಚ ಕಡಿಮೆಯಾದ ಬಳಿಕ ರಾಜಲಕ್ಷ್ಮಿಯು ಒಮ್ಮೆಗೇ ಬಂದು ಪ್ರಶ್ನೆಯನ್ನು ಕೇಳಿದಳು "ನಿಮ್ಮ ಅಭಿಪ್ರಾಯದಂತೆ ಎಲ್ಲರೂ ನಡೆಯತೊಡಗಿದರೆ ಬಡವರ ಮದುವೆಯೇ ಆಗಲಿಕ್ಕಿಲ್ಲ. ಗೃಹಸ್ಥಿಕೆಯ ಮನೆಗಳೇ ಉಳಿಯಲಿಕ್ಕಿಲ್ಲ. ಆ ಮೇಲೆ ಸೃಷ್ಟಿಯಾಗುವುದು ಹೇಗೆ?"

ಆಕೆಯ ಅಸಾಧಾರಣ ಗಾಂಭೀರ್ಯವನ್ನು ಕಂಡು ನಾನು ನಕ್ಕೆ. ನಾನು ಮಾತನಾಡಿದೆ "ಸೃಷ್ಟಿಯ ರಕ್ಷಣೆಯನ್ನು ಮಾಡುವ ಚಿಂತೆಯು ನಿನಗೆ ಬೇಡ. ಅದರ ಚಿಂತೆಮಾಡುವ ಅಗತ್ಯವೂ ನಿನಗಿಲ್ಲ. ನಮ್ಮಂತೆ ನಡೆಯುವ ಜನರು ಜಗತ್ತಿನಲ್ಲಿ ಬಹಳವಿಲ್ಲ. ನಮ್ಮದೇಶದಲ್ಲಿಯಂತೂ ಇಲ್ಲವೆನ್ನಲು ಯಾವ ಅಡಚಣೆಯೂ ಇಲ್ಲ ಎಂದು ಹೇಳಬಹುದು."

"ಇಲ್ಲದಿರುವುದೇ ಒಳಿತು. ಕೇವಲ ದೊಡ್ಡವರೇ ಮನುಷ್ಯರೇನು? ಬಡವರು ಈ ಪ್ರಪಂಚದಲ್ಲಿ ಎಲ್ಲಿಂದಲೋ ಹರಿದು ಬಂದಿರುವರೇನು? ಮಕ್ಕಳು ಮರಿಗಳನ್ನು ಹಡೆದು ಮನೆಮಾಡಿಕೊಂಡು ಇರಬೇಕೆಂಬ ಆಸೆಯು ಆಗಿರುವದಿಲ್ಲವೇನು?" ಎಂದು ರಾಜಲಕ್ಷ್ಮಿಯು ನುಡಿದಳು. ಅದಕ್ಕೆ ನಾನು ಎಂದೆ "ಅವರಿಗೆ ಆಸೆಯಾಗುತ್ತದೆ, ಆದುದರಿಂದಲೇ ಅವರು ಅದರಂತೆ ನಡೆಯಬೇಕು. ಎಂದೇನು ನಿನ್ನ ಮಾತಿನ ಅರ್ಥ?"

"ಅದೇಕಲ್ಲ? ನೀವು ನನಗೆ ತಿಳಿಸಿಕೊಡಿರಿ."

ಸ್ವಲ್ಪಹೊತ್ತು ಸುಮ್ಮಗಿದ್ದು ನಾನು ಎಂದೆ "ಎಲ್ಲ ಬಡವರ ಬಗ್ಗೆ ನನ್ನ ಅಭಿಪ್ರಾಯವು ಹೀಗಿರುವುದಿಲ್ಲ. ನಾನು ಹೇಳುವುದು ಕೇವಲ ಬಡವರಾಗಿರುವ ಸಜ್ಜನರ ಬಗ್ಗೆ. ನನ್ನ ಈ ಅಭಿಪ್ರಾಯಕ್ಕೆ ಕಾರಣವೇನಿದೆ ಎಂಬುವನ್ನು ನೀನು ಬಲ್ಲೆ."

ರಾಜಲಕ್ಷ್ಮಿಯು ಹಟಕ್ಕೆ ಬಿದ್ದಂತೆ ತೋರಿತು. ಆಕೆಯ ಹಟದ ದನಿಯಂತಿದ್ದಿತು. ಆಕೆಯೆಂದಳು. "ನಿಮ್ಮ ಅಭಿಪ್ರಾಯವು ತಪ್ಪು."

ನನ್ನ ತಲೆಗೂ ಹಟವು ಏರಿತು. ನಾನು ಎಂದು ಬಿಟ್ಟೆ "ಸಾವಿರಾರು ತಪ್ಪು ಇರಬಹುದು. ಆದರೆ ನಿನ್ನ ಬಾಯಿಂದ ಇಂತಹ ಮಾತುಗಳು ಹೊರಟುದು ಸರಿಯಲ್ಲ. ಇಂಥ ಮಾತನಾಡುವುದು ನಿನಗೆ ಶೋಭಿಸುವುದಿಲ್ಲ. ಬಂಕೂನ ತಂದೆಯು ಕೇವಲ ಎಪ್ಪತ್ತೆರಡು ರೂಪಾಯಿಗಳಿಗೆ ನೀವಿಬ್ಬರೂ ಅಕ್ಕತಂಗಿಯರನ್ನು ಮದುವೆಯಾಗಿದ್ದ.—ಆ ದಿನವು ಇನ್ನೂ ಬಹಳ ಹಳೆಯದಾಗಿಲ್ಲ ಇಷ್ಟು ಮರೆಯಲಿಕ್ಕೆ. ಆ ಮನುಷ್ಯನ ಉದ್ಯೋಗವೇ ಇದಾಗಿತ್ತು, ಇದಕ್ಕಾಗಿ ನೀನು ದೇವರಿಗೆ ಧನ್ಯವಾದಗಳನ್ನು ಅರ್ಪಿಸಬೇಕು. ಒಂದು ವೇಳೆ ಅವನು ನಿನ್ನನ್ನು ತನ್ನ ಮನೆಗೆ ಕರೆದುಕೊಂಡು ಹೋಗಿದ್ದರೆ ಮತ್ತು ನಿನಗೆ ಮೂರುನಾಲ್ಕು

ಮಕ್ಕಳಾಗಿದ್ದರೆ ನಿನ್ನ ಸ್ಥಿತಿ ಏನಾಗಿರುತ್ತಿತ್ತು ಎಂಬುದನ್ನು ಸ್ವಲ್ಪ ಯೋಚನೆಮಾಡಿ ಕಲ್ಪನೆಮಾಡಿ ನೋಡು.''

ರಾಜಲಕ್ಷ್ಮಿಯು ಕಣ್ಣುಗಳಲ್ಲಿ ಜಗಳದ ಭಾವವು ದಟ್ಟವಾಗತೊಡಗಿತು. ಆಕೆಯೆಂದಳು "ದೇವರು ಯಾರನ್ನು ಕಳಿಸಿರುವನೊ ಅವರ ನೆಮ್ಮದಿಯನ್ನೂ ಅವನೇ ನೋಡಿಕೊಳ್ಳುತ್ತಾನೆ. ನೀವು ನಾಸ್ತಿಕರು, ಆದುದರಿಂದಲೇ ವಿಶ್ವಾಸವನ್ನಿಡುವುದಿಲ್ಲ."

ನಾನೂ ಉತ್ತರವಿತ್ತೆ ''ನಾನು ನಾಸ್ತಿಕನಾದರೂ ಇರಲಿ, ಮತ್ತೇನಾದರೂ ಆಗಿರಲಿ, ಆದರೆ ಆಸ್ತಿಕ ಜನರಿಗೆ ಪರಮಾತ್ಮನು ಕೇವಲ ಇದಕ್ಕಾಗಿಯೇ ಬೇಕೇನು ? ಈ ಎಲ್ಲ ಮಕ್ಕಳನ್ನು ಮನುಷ್ಯರನ್ನಾಗಿ ಮಾಡಲಿಕ್ಕೆ ಮಾತ್ರ ದೇವರು ಬೇಕೇನು ?

ರಾಜಲಕ್ಷ್ಮಿಯು ಕೋಪದಿಂದ ನುಡಿದಳು "ದೇವರು ಮಾಡಲಿ, ಮಾಡದೆ ಇರಲಿ, ಆದರೆ ನಾನು ಮಾತ್ರ ನಿಮ್ಮಹಾಗೆ ಅಂಜುಬುರುಕಳಿಲ್ಲ. ನಾನು ಮಾತ್ರ ಮನೆಮನೆಯನ್ನು ಅಲೆದು ಭಿಕ್ಷೆ ಬೇಡಿ, ಅವರನ್ನು ಮನುಷ್ಯರನ್ನಾಗಿ ಮಾಡುತ್ತಿದ್ದೆ. ಹಾಡುವವಳು, ಬಾರಿಸುವವಳು, ಕುಣಿಯುವಳು ಆಗಿರುವದಕ್ಕಿಂತ ಹಾಗೆ ಎಷ್ಟೋ ಒಳ್ಳೆಯದಾಗಿತ್ತು.

ನಾನು ಪುನಃ ತರ್ಕ ಮಾಡಲಿಲ್ಲ. ಮಾತಿನ ರೀತಿಯು ಅತ್ಯಂತ ವೈಯುಕ್ತಿಕವಾಗಿ ಅಪ್ರಿಯ ದಾರಿಯನ್ನು ತುಳಿಯುತೊಡಗಿತ್ತು, ಆದ್ದರಿಂದ ನಾನು ಕಿಡಕಿಯೊಳಗಿಂದ ಬೀದಿಯಕಡೆಗೆ ನೋಡುತ್ತ ಸುಮ್ಮಗೆ ಕುಳಿತೆ.

ನಮ್ಮ ಗಾಡಿಯು ಮೆಲ್ಲಮೆಲ್ಲನೆ ಸರಕಾರಿ ಮತ್ತು ಅರ್ಧಸರಕಾರಿ ಕಚೇರಿಗಳನ್ನು ದಾಟಿ ಬಹಳ ದೂರ ಬಂದಿತು. ಶನಿವಾರದಿನವಾಗಿತ್ತು. ಎರಡು ಗಂಟೆಯನಂತರ ಅನೇಕ ಜನ ಕಾರಕೂನರು ಸೂಟಿಯನ್ನು ಪಡೆದು ಎರಡೂವರೆ ಗಂಟೆಯ ಗಾಡಿಯನ್ನು ಹಿಡಿಯಲು ಅವಸರದಿಂದ ಬರುತ್ತಿದ್ದರು. ಪ್ರತಿಯೊಬ್ಬರ ಕೈಯಲ್ಲಿ ಒಂದಿಲ್ಲೊಂದು ಖಾದ್ಯ ಪದಾರ್ಥವಿತ್ತು. ಒಬ್ಬರ ಕೈಯಲ್ಲಿ ಮೀನುಗಳು ಇದ್ದವು, ಇನ್ನೊಬ್ಬರ ಕೈಯಲ್ಲಿ ಆಡಿನ ಮಾಂಸವಿತ್ತು, ಮತ್ತೊಬ್ಬರ ಕೈಯಲ್ಲಿ ಹಳ್ಳಿಯಲ್ಲಿ ಸಿಗದ ಕಾಯಿಪಲ್ಯಗಳಿದ್ದವು. ಏಳು ದಿನಗಳನಂತರ ಮನೆಗೆ ಹೋಗಿ ತಮ್ಮ ಮಕ್ಕಳು ಮರಿಗಳ ಮುಖದ ಮೇಲೆ ನಸುನಗುವನ್ನು ನೋಡುವ

ಉದ್ದೇಶದಿಂದ ತಮ್ಮ ತಮ್ಮ ಸಾಮರ್ಥ್ಯಕ್ಕೆ ಅನುಸಾರವಾಗಿ ಸ್ವಲ್ಪ ಮಿಠಾಯಿಯನ್ನು ತಮ್ಮ ಚಾದರಿನ ಚುಂಗಿನಲ್ಲಿ ಕಟ್ಟಿಕೊಂಡು ಓಡುತ್ತಿದ್ದರು. ಪ್ರತಿಯೊಬ್ಬರ ಮುಖದ ಮೇಲೆ ಆನಂದ ಔತ್ಸುಕ್ಯಗಳು ಹೊರಹೊಮ್ಮುತ್ತಿದ್ದವು. ರಾಜಲಕ್ಷ್ಮಿಯು ನನ್ನ ಕೈಯನ್ನು ಜಗ್ಗಿ ಕುತೂಹಲದಿಂದ ಕೇಳಿದಳು "ಅಲ್ಲ, ಇವರೆಲ್ಲರೂ ಹೀಗೇಕೆ ಸ್ಟೇಶನ್ನಿನ ಕಡೆಗೆ ಓಡುತ್ತಿದ್ದಾರೆ ? ಇವೊತ್ತು ಏನಿದೆ ?"

ನಾನು ತಿರುಗಿ "ಈವೊತ್ತು ಶನಿವಾರ. ಇವರೆಲ್ಲರೂ ಕಚೇರಿಯಲ್ಲಿ ಕೆಲಸಮಾಡುವ ಕಾರಕೂನರು. ಭಾನುವಾರ ರಜೆ, ಮನೆಗೆ ಹೋಗುತ್ತಿದ್ದಾರೆ. ಎಂದು ಹೇಳಿದೆ.

ರಾಜಲಕ್ಷ್ಮಿಯು ತಲೆಯಲ್ಲಾಡಿಸಿ "ಹೌದು ಹೀಗೆಯೇ ಇರಬಹುದು. ಆಗೋ ನೋಡಿರಿ, ಎಲ್ಲರೂ ಒಂದಿಲ್ಲೊಂದು ಖಾದ್ಯವಸ್ತು ತೆಗೆದುಕೊಂಡು ಹೋಗುತ್ತಿದ್ದಾರೆ. ಹಳ್ಳಿಯಲ್ಲಂತೂ ಏನೂ ಸಿಗುವುದಿಲ್ಲ, ಆದ್ದರಿಂದ ಮಕ್ಕಳು ಮರಿಗಳ ಕೈಯಲ್ಲಿ ಕೊಡಲು ಏನೇನೋ ಕೊಂಡುಕೊಂಡು ಒಯ್ಯುತ್ತಿದ್ದಾರೆ, ಅಲ್ಲವೆ ?" ಎಂದಳು.

ನಾನೆಂದೆ "ಹೌದು."

ಅದೇ ಕಲ್ಪನೆಯು ಓಡತೊಡಗಿತು. ಆದ್ದರಿಂದಲೇ ಆಕೆಯು ಅದೇ ಕ್ಷಣ ನುಡಿದಳು "ಹುಡುಗರು ಹುಡಿಗಿಯರಲ್ಲಿ ಎಷ್ಟು ಉತ್ಸಾಹ ತೋರಬಹುದು ! ಅವರು ಕೋಲಾಹಲ ಎಬ್ಬಿಸುವರು, ಕೊರಳಿಗೆ ಕರವನ್ನು ಸುತ್ತಿ ತಂದೆಯನ್ನು ಅಪ್ಪಿಕೊಂಡು ಮೇಲೆ ಹತ್ತಲು ಯತ್ನಿಸುವರು, ತಾಯಿಗೆ ತಂದೆಯ ಆಗಮನದ ಸುದ್ದಿಯನ್ನು ತಿಳಿಸಲು ಅಡುಗೆಮನೆಗೆ ಓಡಿ ಹೋಗುವರು, ಮನೆಯಲ್ಲಿ ಒಂದು ಆನಂದದ ಕೋಲಾಹಲವೇ ಏಳುವುದು, ಅಲ್ಲವೇ ?" ಹೀಗೆನ್ನುವಾಗ ಆಕೆಯ ಮುಖವು ಉಜ್ವಲವಾಯಿತು.

ನಾನು ಒಪ್ಪಿಕೊಳ್ಳುತ್ತ "ಹೌದು. ಹೀಗಾಗುವ ಸಂಭವವುಂಟು" ಎಂದೆ.

ರಾಜಲಕ್ಷ್ಮಿಯು ಗಾಡಿಯ ಕಿಡಿಳಿಯೊಳಗಿಂದ ಸ್ವಲ್ಪ ಹೊತ್ತು ಅವರನ್ನು ನೋಡುತ್ತಿದ್ದಳು. ಬಳಿಕ ಒಮ್ಮೆಗೆ ಒಂದು ಸಿಟ್ಟುಸಿರನ್ನು ಬಿಟ್ಟು "ಇವರ ಸಂಬಳ ಎಷ್ಟಿರಬಹುದು ?" ಎಂದು ಕೇಳಿದಳು.

“ಕಾರಕೂನರ ಸಂಬಳವು ಎಷ್ಟಿರುವುದು ?— ಇಪ್ಪತ್ತು-ಮೂವತ್ತು ರೂಪಾಯಿ ಇರಬಹುದು.”

“ಆದರೆ ಮನೆಯಲ್ಲಿ ತಾಯಿ, ತಂದೆ, ಅಣ್ಣ ತಮ್ಮಂದಿರು, ಅಕ್ಕ ತಂಗೆಂದಿರು, ಹೆಂಡತಿ, ಮಕ್ಕಳು ಇರುವರಲ್ಲ!”

ನಾನು ಆಕೆಯ ಮಾತಿಗೆ ಇವೆರಡೂ ಮಾತುಗಳನ್ನು ಜೋಡಿಸಿದೆ “ಒಬ್ಬಿಬ್ಬರು ವಿಧವಾ-ಸೋದರಿಯರೂ ಇರುವರು, ಮದುವೆ ಮುಂಜಿ, ಕ್ರಿಯಾ-ಕರ್ಮ, ಲೋಕವ್ಯವಹಾರ, ಗೃಹಸ್ಥಿಕೆ, ಕಲಕತ್ತೆಯಲ್ಲಿ ಭೋಜನದ ಖರ್ಚು, ಕಾಯಿಲೆಯ ಖರ್ಚು— ಈ ಮೊದಲಾದುವರ ಖರ್ಚೆಲ್ಲವೂ ಈ ಬಂಗಾಲೀ ಕಾರಕೂನರ ಮೂವತ್ತು ರೂಪಾಯಿ ಸಂಬಳ ಅವಲಂಬಿಸಿಕೊಂಡಿರುವುದು.”

ರಾಜಲಕ್ಷ್ಮಿಯ ಉಸಿರೇ ಕಟ್ಟತೊಡಗಿತು. ಆಕೆಯು ಅತ್ಯಂತ ವ್ಯಾಕುಲಳಾಗಿ ನುಡಿದಳು “ನಿಮಗೆ ಗೊತ್ತಿಲ್ಲ. ಇವರಿಗೆ ಭೂಮಿ ಕಾಣಿ ಇದೆ. ನಿಶ್ಚಯವಾಗಿಯೂ ಇದೆ.”

ಆಕೆಯ ಮುಖವನ್ನು ನೋಡಿ, ಆಕೆಯನ್ನು ನಿರಾಶಯುಕ್ತಳನ್ನಾಗಿ ಮಾಡಲು ಮನಸ್ಸಾಗಲಿಲ್ಲ. ಆಕೆಯ ವದನವನ್ನು ಕಂಡು ನನಗೇ ವೇದನೆಯಾಗತೊಡಗಿತು. ಆದಾಗ್ಯೂ ನಾನು ನುಡಿದೆ “ನಾನು ಇವರ ಮನೆತನದ ಇತಿಹಾಸವನ್ನು ಚೆನ್ನಾಗಿ ಬಲ್ಲೆ. ಇವರಲ್ಲಿ ಹದಿನಾಲ್ಕಾಣೆ ಜನರಿಗೆ ಗೇಣು ಹೊಲ ಕೂಡ ಇರುವುದಿಲ್ಲ. ನೌಕರಿಯು ಹೊರಟು ಹೋದರೆ ಇವರು ಭಿಕ್ಷೆಯನ್ನು ಬೇಡಬೇಕಾಗುವುದು ಇಲ್ಲವೆ ಪರಿವಾರದೊಡನೆ ಉಪವಾಸವ್ರತವನ್ನು ಕೊಳ್ಳಬೇಕಾಗುವುದು. ಇವರ ಹೆಣ್ಣು ಮತ್ತು ಗಂಡು ಮಕ್ಕಳ ಕತೆಯನ್ನು ಕೇಳಬಯಸುವೆಯೇನು ?”

ರಾಜಲಕ್ಷ್ಮಿಯು ಅಕಸ್ಮಾತ್ ಎರಡೂ ಕೈಗಳನ್ನು ಮೇಲಕ್ಕೆತ್ತಿ ಗಟ್ಟಿಯಾಗಿ “ಇಲ್ಲ, ಇಲ್ಲ, ಕೇಳುವುದಿಲ್ಲ— ನಾನು ಕೇಳಬಯಸುವುದಿಲ್ಲ” ಎಂದಳು.

ಆಕೆಯು ಉಕ್ಕಿ ಬರುವ ಕಂಬನಿಗಳನ್ನು ಬಲತ್ಕಾರದಿಂದ ತಡೆದು ಹಿಡಿದಿರುವಳೆಂಬುದನ್ನು ಆಕೆಯ ಮುಖವನ್ನು ನೋಡುತ್ತಲೇ ಅರಿತುಕೊಂಡೆ. ಆದುದರಿಂದ ನಾನು ಹೆಚ್ಚು ಮಾತನಾಡಬಯಸಲಿಲ್ಲ. ಪುನಃ

ಕಿಡಿಕಿಯ ಕಡೆಗೆ ಮುಖ ಹೊರಳಿಸಿದೆ. ಬಹಳ ಹೊತ್ತಿನವರೆಗೆ ಆಕೆಯು ಸ್ತಬ್ಧಳಾಗಿ ಕುಳಿತಿದ್ದಳು. ಬಳಿಕ ತನ್ನಷ್ಟಕ್ಕೆ ತಾನೇ ವಕೀಲಿಯನ್ನು ನಡೆಯಿಸಿ, ಕೊನೆಗೆ ತನ್ನ ಕೂತೂಹಲದ ಎದುರಿಗೆ ತಾನೇ ಪರಾಜಯ ಹೊಂದಿ ಆಕೆಯು ಮೆಲ್ಲಗೆ ನನ್ನ ಕೋಟಿನ ತುದಿಯನ್ನು ಹಿಡಿದು ಜಗ್ಗಿದಳು. ನಾನು ಆಕೆಯ ಕಡೆಗೆ ತಿರುಗಿ ನೋಡಿದೊಡನೆ ಕರುಣಾಪೂರಿತ ದನಿಯಿಂದ "ಹೇಳಿರಿ ಅವರ ಮಕ್ಕಳು ಮರಿಗಳ ಕತೆಯನ್ನು. ಆದರೆ ಸುಳ್ಳು ಸೊಟ್ಟು ಹೇಳಬಾರದೆಂದು ಸೆರಗೊಡ್ಡಿ ಬೇಡುವೆ. ದೇವಾ, ಬೇಡುವೆ!" ಎಂದು ನುಡಿದಳು.

ಆಕೆಯು ಬೇಡುವಾಗಿನ ಭಾವ-ಭಂಗಿಯನ್ನು ನೋಡಿ ನನಗೆ ನಗು ಬಂದಿತು. ಆದರೆ ನಾನು ನಗಲಿಲ್ಲ. ಸ್ವಲ್ಪ ಗಂಭೀರವಾಗಿಯೆ "ಅವರ ಬಗ್ಗೆ ಬೆಳೆಯಿಸಿ ಹೇಳುವುದಂತೂ ದೂರವೇ ಉಳಿಯಿತು. ನೀನು ಸ್ವಲ್ಪ ಹೊತ್ತಿನ ಹಿಂದೆ ಅಂಥ ಪ್ರಸಂಗ ಬಂದರೆ ಭಿಕ್ಷೆ ಬೇಡಿಯಾದರೂ ಮಕ್ಕಳನ್ನು ಕಾಪಾಡಿ, ಪೋಷಿಸಿ ಮನುಷ್ಯರನ್ನಾಗಿ ಮಾಡುವೆನೆಂಬ ಮಾತನ್ನು ಆಡದೆ ಹೋಗಿದ್ದರೆ, ನೀನು ಕೇಳಿದರೂ ನಾನು ಹೇಳುತ್ತಿರಲಿಲ್ಲ. ದೇವರು ಯಾರನ್ನು ಈ ಭೂಮಿಗೆ ಕಳಿಸುವನೊ ಅವರ ಸರ್ವ ಭಾರವನ್ನೂ ಹೊರುವನು. ಇದು ನಿನಗೂ ಗೊತ್ತಿದ್ದ ಮಾತು. ಈ ಮಾತನ್ನು ನಾನು ಬಲ್ಲೆ. ಈ ಮಾತನ್ನು ನಾನು ಒಪ್ಪದೆ ಇದ್ದರೆ ನಾನು ನಾಸ್ತಿಕನೆಂದು ಹೇಳಿ ನನಗೆ ಏನೇನೊ ಆಡಿಬಿಡುವೆ. ಆದರೆ ಸಂತಾನದ ಹೊಣೆ ದೇವರ ಮೇಲೆ ಎಷ್ಟು ಇದೆ ಮತ್ತು ತಂದೆಯ ಮೇಲೆ ಎಷ್ಟು ಇದೆ ಎಂಬುದರ ಮೀಮಾಂಸೆಯನ್ನು ನೀನೇ ಮಾಡು. ನನಗೆ ಗೊತ್ತಿದ್ದಷ್ಟನ್ನೇ ನಾನು ಮಾತ್ರ ಹೇಳಬಲ್ಲೆ. ಇದು ಸರಿಯಿರುವುದಲ್ಲವೆ?" ಎಂದೆ.

ನನ್ನ ಕಡೆಗೆ ಜಿಜ್ಞಾಸು ದೃಷ್ಟಿಯಿಂದ ಆಕೆಯು ನೋಡುತ್ತಿದ್ದಾಳೆ ಎಂಬುದನ್ನು ಕಂಡು ನಾನೆಂದೆ "ಮಗುವು ಹುಟ್ಟಿದ ಬಳಿಕ ಅದಕ್ಕೆ ತನ್ನ ಎದೆಯ ಹಾಲನ್ನು ಸ್ವಲ್ಪ ಕಾಲ ಉಣಿಸಿ, ಅದನ್ನು ಸ್ವಲ್ಪ ದಿನ ಬದುಕಿಸಿಡುವ ಭಾರವು ತಾಯಿಯ ಮೇಲೆಯೆ ಇರುವುದೆಂದು ನಾನು ತಿಳಿಯುತ್ತೇನೆ. ದೇವರ ಮೇಲೆ ನನಗೆ ನಿಶ್ಚಲ ಭಕ್ತಿ ಇದೆ, ಅವನ ದಯೆಯ ಬಗ್ಗೆಯೂ ನನಗೆ ಅಂಥವಿಶ್ವಾಸವಿದೆ, ಆದಾಗ್ಯೂ ತಾಯಿಯ

ಬದಲಾಗಿ ಈ ಭಾರವನ್ನು ಹೊರಲು ಬರುವಂತಹ ಉಪಾಯವು ಅವನ ಹತ್ತಿರವಾದರೂ ಇದೆಯೊ ಇಲ್ಲವೊ— ''

ರಾಜಲಕ್ಷ್ಮಿಯು ಕೋಪಗೊಂಡು, ನಕ್ಕುಬಿಟ್ಟಳು ಮತ್ತು ನುಡಿದಳು '' ನಿಮ್ಮ ಜಾಣತನವು ಅಷ್ಟಕ್ಕೆ ಇರಲಿ ಬಿಡಿ— '' ಇದನ್ನೂ ನಾನು ಬಲ್ಲೆ. ''

'' ನಿನಗೆ ಗೊತ್ತಿದೆಯೇನು ? ಹಾಗಾದರೆ ಅದು ಅಷ್ಟಕ್ಕೆ ಇರಲಿ, ಒಂದು ಜಟಿಲ ಸಮಸ್ಯೆಯು ಬಗೆಹರಿದಂತಾಯಿತು. ಆದರೆ ಮೂವತ್ತು ರೂಪಾಯಿ ಸಂಬಳ ತರುವ ಮನೆಯ ಯಜಮಾನನ ಹೆಂಡತಿಯು ಹಡೆದ ಬಳಿಕ ಆ ತಾಯಿಯ ಹಾಲು ಬತ್ತಿ ಹೋಗಲು ತಡವೇಕೆ ಆಗುವುದಿಲ್ಲ ಎಂಬುದನ್ನು ಆಕೆಯು ಬಾಣಂತಿತನದಲ್ಲಿ ಪಡೆಯುವ ಆಹಾರವನ್ನು ನೋಡಲು ಬಾಣಂತಿತನದಲ್ಲಿ ಆಕೆಯು ಉಣ್ಣುವ ಕಾಲಕ್ಕೆ ಹೋಗಿ ನೋಡಬೇಕಾದುದು ಅವಶ್ಯಕ. ಇದು ಆಗದೆ ಹೋದರೆ, ನನ್ನ ಮಾತನ್ನು ನೀನು ಒಪ್ಪಿಕೊಳ್ಳಬೇಕು. ''

ರಾಜಲಕ್ಷ್ಮಿಯು ಒಣಗಿದ ಮುಖ ಕಳೆಯುಳ್ಳವಳಾಗಿ ನನ್ನ ಕಡೆಗೆ ನೋಡತೊಡಗಿದಳು.

ನಾನೆಂದೆ '' ಹಳ್ಳಿಯಲ್ಲಿ ಹಸುವಿನ ಹಾಲೂ ದೊರೆಯುವುದು ದುಸ್ತರ ಎಂಬ ನನ್ನ ಮಾತನ್ನೂ ಒಪ್ಪಿಕೊಳ್ಳಬೇಕಾಗುವುದು. ''

ರಾಜಲಕ್ಷ್ಮಿಯು ಕೂಡಲೆ ನುಡಿದಳು '' ಅದು ನನಗೂ ಗೊತ್ತು. ಮನೆಯಲ್ಲಿ ಒಂದು ಹಸುವು ಇದ್ದರೆ ಚೆನ್ನು, ಇಲ್ಲದೆ ಹೋದರೆ, ತಲೆ ಯೊಡೆದುಕೊಂಡು ಹಳ್ಳಿಯಲ್ಲಿ ಒಂದು ಹನಿ ಹಾಲೂ ಕೂಡ ಸಿಕ್ಕುವುದು ದುಸ್ತರ. ಹಸುಗಳೇ ಇಲ್ಲ, ಹಾಲೆಲ್ಲಿಂದ ಸಿಕ್ಕಬೇಕು ? ''

ನಾನೆಂದೆ '' ಸರಿ, ಇನ್ನೂ ಒಂದು ಸಮಸ್ಯೆಯು ಬಗೆಹರಿಯದಂತಾಯಿತು. ಮಕ್ಕಳ ಭಾಗ್ಯಕ್ಕೆ ಕೇವಲ ಉಳಿದುದು ಸ್ವದೇಶೀ ಕೆರೆಗಳ ನೀರು ಮತ್ತು ವಿದೇಶೀ ಡಬ್ಬಿಗಳ ಬಾರ್ಲಿ ಹಿಟ್ಟು. ಅವರಿಗೆ ನಿರ್ಭಾಗ್ಯ ಮಕ್ಕಳಿಗೆ ಸ್ವಾಭಾವಿಕ ಖಾದ್ಯವೆಂದರೆ ತಾಯ ಹಾಲು, ಅದು ಭಾಗ್ಯವಿದ್ದರೆ ಮಾತ್ರ ಬಹಳ ದಿನ ದೊರೆಯಬೇಕು, ಏಕೆಂದರೆ ಬಹಳ ದಿನಗಳವರೆಗೆ ಹಾಲು ಉಳಿಯುವ ಸಂಭವವಿರುವುದಿಲ್ಲ. ನಾಲ್ಕೈದು ತಿಂಗಳುಗಳೊಳಗೇ ಮತ್ತೊಬ್ಬ ಆಗಂತುಕನು ತನ್ನ ಅವತಾರದ

ನೋಟೀಸನ್ನು ಕೊಟ್ಟು ತನ್ನ ಅಣ್ಣನ ಹಾಲನ್ನು ಬಂದು ಮಾಡಿ ಬಿಡುತ್ತಾನೆ. ಇದನ್ನು ಸಹ ಬಹುಶಃ ನೀನು— ''

ರಾಜಲಕ್ಷ್ಮಿಯು ನಾಚಿಕೆಯಿಂದ ಕೆಂಪಾಗಿ '' ಹೌದು, ಹೌದು, ನಾನು ಇದನ್ನು ಬಲ್ಲೆ. ಇದರ ಭಾಷ್ಯ, ವಾಖ್ಯೆ ಮಾಡಿ ಹೇಳುವುದು ಅಗತ್ಯವಿಲ್ಲ. ಇದರ ನಡೆಯುವ ಸಂಗತಿಯನ್ನು ,ಹೇಳಿರಿ. " ಎಂದು ನುಡಿದಳು.

'' ಬಳಿಕ ಮಕ್ಕಳಿಗೆ ಹೊಟ್ಟೆ ನೋವು ಗಂಟು ಬೀಳುವುದು, ಸ್ವದೇಶೀ ಮಲೇರಿಯಾ ಜ್ವರ ಬಂದು ಮುತ್ತುವುವು. ಆಗ ತಂದೆಯ ಕರ್ತವ್ಯವಾಗುವುದು ವಿದೇಶೀ ಕ್ವಿನೀನು ಮತ್ತು ಬಾರ್ಲಿಯನ್ನು ಕೂಡಿ ಹಾಕುವುದು ಹಾಗೂ ತಾಯಿಯ ತಲೆಯ ಮೇಲೆ ಪ್ರಸೂತಿ ಗೃಹವನ್ನು ಪ್ರವೇಶಿಸುವುದಕ್ಕಿಂತ ಮೊದಲು ಇವನ್ನು ಶುದ್ಧ ದೇಶೀ ನೀರಿನಲ್ಲಿ ಅವನ್ನು ಕದಡಿ ಕುಡಿಸುವ ಭಾರ ಬೀಳುವುದು. ಬಳಿಕ ಪ್ರಸೂತಿ ಗೃಹದ ಜಗಳವು ಮುಗಿದ ನಂತರ ಮಗುವನ್ನು ಎತ್ತಿಕೊಂಡು ತಾಯಿಯು ಹೊರಬರುವುದು ಮತ್ತು ಮೊದಲು ಜನಿಸಿದ ಮಗುವಿನ ಬಗ್ಗೆ ಅಳುವುದು ತಾಯಿಯ ಪಾಲಿಗೆ ಕಟ್ಟಿ ಇಟ್ಟದ್ದು. ''

ರಾಜಲಕ್ಷ್ಮಿಯ ಮುಖವು ಮಲಿನವಾಯಿತು. ಆಕೆಯು ಕೇಳಿದಳು " ಅಳುವುದು ಏಕೆ ? "

ನಾನೆಂದೆ " ಏಕೆ ? ಇದು ತಾಯಿಯ ಸ್ವಭಾವ. ಇದು ಕಾರಕೂನ ಮನೆಯ ಒಡತಿಯನ್ನೂ ಬಿಟ್ಟಿಲ್ಲ. ದೇವರು ಮಕ್ಕಳನ್ನು ಕಾಪಾಡುವ ಹೊಣೆಯಿಂದ ಆ ತಾಯಿಯನ್ನು ಮುಕ್ತ ಮಾಡುವುದಕ್ಕಾಗಿ ಮೊದಲಿನ ಮಗುವನ್ನು ತನ್ನ ಶ್ರೀ ಚರಣಗಳ ಬಳಿಗೆ ಕರೆದೊಯ್ಯುತ್ತಾನೆ ! ".

'' ಹಾಯ್ ಹಾಯ್ ! ''

ಇಷ್ಟು ಹೊತ್ತಿನವರೆಗೆ ನೋಡುತ್ತಾ ಮಾತನಾಡುತ್ತಿದ್ದೆ. ಅಕಸ್ಮಾತ್ ನಾನು ತಿರುಗಿ ನೋಡಿದಾಗ ಆಕೆಯ ದೊಡ್ಡ ದೊಡ್ಡ ಕಣ್ಣುಗಳಲ್ಲಿ ಕಂಬನಿಗಳು ಕಂಡುವು. ನನಗೆ ಬಹಳ ದುಃಖವಾಯಿತು. '' ಪಾಪ, ಈ ಬಡವೆಗೆ ದುಃಖಕೊಡುವುದರಿಂದೇನು ಪ್ರಯೋಜನ " ಎಂದು ಯೋಚಿಸಿದೆ " ಅನೇಕ ಜನ ಶ್ರೀಮಂತರಂತೆ ಜಗತ್ತಿನ ಈ ವಿರಾಟ ದುಃಖವು ಈಕೆಗೆ ಅಗೋಚರವಾಗಿದ್ದರೆ ಏನು ಹಾನಿಯಾಗು

ತ್ತಿದ್ದಿತು! ಭಯಂಕರ ಬಡತನದಿಂದ ಪೀಡಿತ ಬಂಗಾಲದ ಈ ನೌಕರೀ ಮಾಡುವ ಗೃಹಸ್ಥ ಪರಿವಾರವು ಕೇವಲ ಅನ್ನಾಭಾವದಿಂದಲೇ ಮಲೇರಿಯಾ ಮತ್ತು ಕಾಲರಾದ ನೆಪದಿಂದ ದಿನದಿನಕ್ಕೆ ಇಲ್ಲದಾಗುತ್ತಿರುವ ವಿಷಯವನ್ನು ಅನೇಕ ದೊಡ್ಡ ಮನುಷ್ಯರಂತೆ ಈಕೆಗೂ ಗೊತ್ತಾಗದಿದ್ದರೆ ಏನು ದೊಡ್ಡ ಹಾನಿಯಾಗುತ್ತಿತು!"

ಇದೇ ವೇಳೆಗೆ ಸರಿಯಾಗಿ ರಾಜಲಕ್ಷ್ಮಿಯು ತನ್ನ ಕಂಬನಿಗಳನ್ನು ಒರೆಸುತ್ತ ಬಿಗಿದ ಕಂಠದಿಂದ "ಅವರು ಕಾರಕೂನರು ಇರಬಹುದು, ಆದರೆ ಅವರು ನಿಮಗಿಂತಲೂ ಎಷ್ಟೋಪಾಲು ಒಳ್ಳೆಯವರು. ನೀವೋ ಕಲ್ಲು! ನಿಮಗೆ ಸ್ವಂತ ಯಾವ ದುಃಖವೂ ಇಲ್ಲ, ಆದುದರಿಂದಲೇ ಇವರ ದುಃಖವನ್ನು ಅತ್ಯಂತ ಆನಂದದಿಂದ ವರ್ಣಿಸುತ್ತಿರುವಿರಿ. ಆದರೆ ನನ್ನ ಎದೆಯು ಮಾತ್ರ ಬಿರಿಯುತ್ತಿರುವುದು." ಎಂದು ನುಡಿದಳು.

ಹೀಗೆಂದು ಆಕೆಯು ಪುನಃ ತನ್ನ ಕಂಬನಿಗಳನ್ನು ಒರೆಸಿಕೊಂಡಳು. ಆಕೆಯ ನುಡಿಗಳಿಗೆ ಪ್ರತಿಯಾಗಿ ನಾನೇನೂ ಮಾತನಾಡಲಿಲ್ಲ. ಏಕೆಂದರೆ ಅದರಿಂದ ನನಗಾವ ಲಾಭವೂ ಆಗುವಂತಿರಲಿಲ್ಲ. ಆದರೆ ನಮ್ರತೆಯಿಂದ ನಾನು ನುಡಿದೆ "ಇವರ ಸುಖದ ಅಂಶವೂ ನನ್ನ ಭಾಗದಲ್ಲಿಲ್ಲ. ಮನೆಗೆ ಮುಟ್ಟಬೇಕೆನ್ನುವ ಇವರ ಕುತೂಹಲವನ್ನಾದರೂ ವಿಚಾರಿಸಿನೋಡಿದರೆ ತಿಳಿಯುವುದು.."

ರಾಜಲಕ್ಷ್ಮಿಯ ಮುಖವು ನಗುವು ಮತ್ತು ಕಂಬನಿಯ ಮಧ್ಯದಲ್ಲಿ ಬೆಳಗಿತು. ಒಮ್ಮೆಗೇ ಆಕೆಯ ಮುಖದಮೇಲೆ ದಿವ್ಯ ಜ್ಯೋತಿಯು ಗೋಚರಿಸತೊಡಗಿತು. ಆಕೆಯು "ನಾನೂ ಇದನ್ನೇ ಹೇಳುತ್ತಿರುವೆ. ಈ ದಿನ ತಂದೆಯು ಬರುವನೆಂದು ಮಕ್ಕಳು ದಾರಿಕಾಯುತ್ತಿರುವರು. ಅವರಿಗೇತರ ದುಃಖ? ಅವರಿಗೆ ಸಂಬಳ ಕಡಿಮೆ ಇರಬಹುದು, ಅದರೆ ಅದೇ ಮಾನಕ್ಕೆ ಸರಿಯಾಗಿ ನೌಕರಿ, ದಿವಾಣಗಿರಿ ಇಲ್ಲ. ಆದಾಗ್ಯೂ ಅವರಿಗೆ ಸಂಬಳ ೨೦–೩೦ ರೂಪಾಯಿ ಮಾತ್ರ! ಇಷ್ಟು ಕಡಮೆ? ಎಂದೂ ಇರಲಿಕ್ಕಿಲ್ಲ. ನೂರೈವತ್ತು ರೂಪಾಯಿಗಳಂತೂ ಇರಬಹುದು ಎಂದು ನಿಶ್ಚಯವಾಗಿ ಹೇಳುವೆ" ಎಂದಳು.

ಇರಬಹುದು. "ನನಗೆ ಸರಿಯಾಗಿ ಗೊತ್ತಿಲ್ಲ."

ಈ ಮಾತುಗಳಿಂದ ರಾಜಲಕ್ಷ್ಮಿಯ ಉತ್ಸಾಹವು ದ್ವಿಗುಣಿತವಾಯಿತು. ಒಬ್ಬ ಕ್ಷುದ್ರ ಕಾರಕೂನನಿಗೆ ತಿಂಗಳೊಂದಕ್ಕೆ ೧೫೦ ರೂಪಾಯಿ ಸಂಬಳ ಕೊಡುವುದು ಆಕೆಗೆ ಸರಿಯೆನಿಸಲಿಲ್ಲ. ಆಕೆಯೆಂದಳು "ಅದೇ ತಿಂಗಳ ಸಂಬಳದ ಮೇಲೆ ಅವರು ಜೀವಿಸುತ್ತಿರಬಹುದೇನು ? ಮೇಲೆಯೂ ಅವರಿಗೆ ಎಷ್ಟೋ ಸಂಪಾದನೆಯು ಆಗುತ್ತಿರಬಹುದು."

ನಾನು "ಮೇಲೆ ? ಒಟ್ಟಲೇನು ?" ಎಂದೆ.

ಈಗ ಆಕೆಯು ಮಾತಾಡಲಿಲ್ಲ. ಆಕೆಯು ಮುಖವನ್ನು ಗಂಭೀರ ಮಾಡಿಕೊಂಡು ರಸ್ತೆಯಕಡೆಗೆ ಮುಖ ತಿರುಗಿಸಿ ನೋಡುತ್ತ ಕುಳಿತಳು. ಹೊರಗೆ ನೋಡುತ್ತ ನೋಡುತ್ತ ಸ್ವಲ್ಪ ಹೊತ್ತಿನಮೇಲೆ ಆಕೆಯು "ನಿಮ್ಮನ್ನು ನಾನು ಎಷ್ಟು ಬಾರಿ ನೋಡುವೆನೊ ಅಷ್ಟು ಬಾರಿ, ನೋಡಿದಷ್ಟು ನಿಮ್ಮಿಂದ ನನ್ನ ಮನಸ್ಸು ದೂರ ಹೋಗುತ್ತಿರುವುದು. ನಿಮ್ಮನ್ನು ಬಿಟ್ಟರೆ ನನಗಾರೂ ಗತಿಯಿಲ್ಲವೆಂಬುದನ್ನು ನೀವು ಬಲ್ಲಿರಿ, ಆದ್ದರಿಂದ ನೀವು ನನ್ನನ್ನು ಈ ರೀತಿಯಲ್ಲಿ ಕಾಣುತ್ತಿರುವಿರಿ." ಎಂದು ನುಡಿದಳು.

ಇಷ್ಟು ದಿನಗಳಾದ ಬಳಿಕ ಈ ದಿನ ನಾನು ಮೊಟ್ಟಮೊದಲು ಆಕೆಯ ಕೈಯನ್ನು ಹಿಡಿದು ನನ್ನೆಡೆಗೆ ಸೆಳೆದುಕೊಂಡೆನು. ಆಕೆಯ ಮುಖದ ಕಡೆಗೆ ನೋಡಿಕೊಂಡು ಮಾತನಾಡಲೂ ಬಯಸಿದೆ; ಆದರೆ ಇದೇ ಹೊತ್ತಿಗೆ ಸರಿಯಾಗಿ ಗಾಡಿಯು ಸ್ಟೇಶನದ ಸಮೀಪ ಹೋಗಿ ನಿಂತಿತು. ಒಂದು ಸ್ವತಂತ್ರವಾದ ಡಬ್ಬೆಯನ್ನು 'ರಿಜರ್ವ' ಮಾಡಿಸಲಾಗಿದ್ದಿತು ಮೊದಲೇ. ಆದಾಗ್ಯೂ ಬಂಕೂ ಸಾಮಾನುಗಳನ್ನು ತೆಗೆದುಕೊಂಡು ಮಧ್ಯಾಹ್ನಕ್ಕೇ ಸ್ಟೇಶನ್ನಿಗೆ ಬಂದಿದ್ದ. 'ಕೋಚ ಬಾಕ್ಸ'ದ ಮೇಲೆ ರತನನನ್ನು ನೋಡುತ್ತಲೇ ಅವನು ಓಡಿ ಬಂದ. ನಾನು ಆಕೆಯ ಕೈಯನ್ನು ಬಿಟ್ಟು ನೇರವಾಗಿ ಕುಳಿತೆ. ಯಾವ ಮಾತು ನಾಲಿಗೆಯ ತುದಿಯವರೆಗೂ ಬಂದಿದ್ದಿತೋ ಅದು ಅಂತಃಕರಣದೊಳಗೆ ಹೋಗಿ ಅಡಗಿಕೊಂಡುಬಿಟ್ಟಿತು.

೨॥ ಗಂಟೆಯ 'ಲೋಕಲ್ ಟ್ರೇನು' ಇನ್ನೂ ಬಿಡುವುದರಲ್ಲಿ ಇದ್ದಿತು. ನಮ್ಮ ಗಾಡಿಯು ಆ ಮೇಲೆ ಬಿಡುವುದಿದ್ದಿತು. ಇದೇ ವೇಳೆಗೆ ಒಬ್ಬ ಪ್ರೌಢಬಡವನು ತನ್ನ ಕೈಯಲ್ಲಿ ತರತರದ ಸರಕಾರೀ ಗಂಟುಗಳನ್ನು ಹಿಡಿದುಕೊಂಡು ಮತ್ತು ಇನ್ನೊಂದು ಕೈಯಲ್ಲಿ ಒಂದು

ರೆಂಬೆಯ ಮೇಲೆ ಕುಳಿತ ಮಣ್ಣಿನ ಹಕ್ಕಿಯನ್ನು ಹಿಡಿದುಕೊಂಡು 'ಪ್ಲ್ಯಾಟಫಾರ್ಮಿನ' ಕಡೆಗೆ ನೋಡುತ್ತ ಮತ್ತೆ ಯಾವ ಕಡೆಗೂ ನೋಡದೆ ಓಡುತ್ತ ಬಂದು ರಾಜಲಕ್ಷ್ಮಿಗೆ ಡಿಕ್ಕಿ ಹೊಡೆದ. ಮಣ್ಣಿನ ಹಕ್ಕಿ ಕೆಳಗೆ ಬಿದ್ದು ಚೂರು ಚೂರಾಯಿತು! ಅವನು ಹಾಯ್ ಹಾಯ್ ಎಂದು ಅದರ ಚೂರುಗಳನ್ನು ಆರಿಸುವವನಿದ್ದ, ಇಷ್ಟರಲ್ಲಿ ಪಾಂಡೇಯವರು ಒಂದು ಹಾರಿಕೆ ಹಾರಿದವರೇ ಅವನ ಕತ್ತನ್ನು ಹಿಡಿದರು ಮತ್ತು ಖಂಕೂ ಅವನಿಗೆ 'ಕುರುಡ!' ಎಂದು ಹೊಡೆಯಲು ಸಿದ್ಧನಾದ! ನಾನು ಸ್ವಲ್ಪ ದೂರದಲ್ಲಿ ಅನ್ಯ ಮನಸ್ಕನಾಗಿ ನಿಂತಿದ್ದೆ! ಗಾಬರಿಗೊಂಡು ಈ ರಂಗಭೂಮಿಗೆ ಬಂದೆ. ಪಾಪ, ಆ ಬಡ ಮನುಷ್ಯನು ಭಯದಿಂದ ಮತ್ತು ನಾಚಿಕೆಯಿಂದ ಆಗಾಗ್ಗೆ "ನೋಡಲಿಲ್ಲ ಅಮ್ಮನವರೆ, ನನ್ನಿಂದ ಬಹಳ ದೊಡ್ಡ ತಪ್ಪಾಯ್ತು" ಎನ್ನತೊಡಗಿದ.

ನಾನು ಅವನನ್ನು ಕೂಡಲೇ ಬಿಡಿಸಿ "ಏನು ಆಗಬೇಕಾಗಿತ್ತೊ ಅದು ಆಗಿ ಹೋಯಿತು. ನೀವು ಬೇಗ ಹೋಗಿರಿ. ನಿಮ್ಮ ಗಾಡಿ ಬಿಡುವುದರಲ್ಲಿಯೆ ಇದೆ." ಎಂದೆ.

ಆದಾಗ್ಯೂ ಅವನು ಆ ಆಟದ ಒಡವೆಯ ಚೂರುಗಳನ್ನು ಆರಿಸತೊಡಗಿದ. ಕೊನೆಗೆ ಓಡಿದ. ಅವನು ಸ್ವಲ್ಪ ದೂರ ಹೋಗಿದ್ದನೊ ಇಲ್ಲವೊ ಗಾಡಿ ಬಿಟ್ಟುಬಿಟ್ಟಿತು. ಅವನು ಹಿಂತಿರುಗಿ ಬಂದು ಪುನಃ ಒಂದುಬಾರಿ ಕ್ಷಮೆಯನ್ನು ಯಾಚಿಸಿದನು. ಆ ಆಟದೊಡವೆಯ ಉಳಿದ ಚೂರುಗಳನ್ನು ಆರಿಸತೊಡಗಿದನು. ನಾನು ಅದನ್ನು ಕಂಡು ಸ್ವಲ್ಪ ನಕ್ಕು "ಇದರಿಂದ ಇನ್ನೇನು ಆಗಬೇಕಾಗಿದೆ?" ಎಂದು ನುಡಿದೆ.

ಅವನೆಂದ ಏನೊ, ಇಲ್ಲ ಮಹಾಶಯರೆ. ಮಗಳಿಗೆ ಕಾಯಿಲೆ. ಕಳೆದ ಸೋಮವಾರ ಮನೆಯಿಂದ ಬರುವ ಕಾಲಕ್ಕೆ ಮಗಳು ಹೇಳಿದ್ದಳು —'ನನಗೆ ಒಂದು ಆಟದೊಡವೆ ಕೊಂಡುಕೊಂಡು ಬಾ' ಎಂದು. ಕೊಂಡುಕೊಳ್ಳಲಿಕ್ಕೆ ಹೋದೆ —ಅಂಗಡಿಕಾರ 'ಎರಡು ಆಣೆ' ಎಂದು ಹೇಳಿದ. ಒಂದು ಬಿಲ್ಲಿ ಕೂಡ ಕಡಿಮೆ ಮಾಡುವುದಿಲ್ಲ ಎಂದು ಹೇಳಿದ. ಸರಿ, ಆಗಲಿ ರಾಮ ರಾಮ ಎಂದು, ಎಂಟು ಬಿಲ್ಲಿಗಳನ್ನು ಎಸೆದು ಕೊಂಡು ಕೊಂಡೆ. ಆದರೆ ದುರ್ಭಾಗ್ಯ ನೋಡಿರಿ, ಒಡೆದು ಹೋಯಿತು. ರೋಗಿ ಮಗಳ ಕೈಯ್ಯಲ್ಲಿ ಅದನ್ನು ಒಯ್ದು ಕೊಡುವ ಭಾಗ್ಯವಿಲ್ಲ.

ಮಗಳು ಆಳುತ್ತ 'ಅಪ್ಪ, ತರಲಿಲ್ಲವೇನು!' ಎನ್ನಬಹುದು. ಏನೇ ಆಗಲಿ, ಅದರ ಚೂರುಗಳನ್ನಾದರೂ ಒಯ್ದು ಆಕೆಗೆ ತೋರಿಸಿ 'ಈ ಬಾರಿ ಸಂಬಳ ಬಂದ ಬಳಿಕ ನಿನಗೆ ಮೊದಲು ಆಟದ ಬೊಂಬೆಯನ್ನು ತಂದುಕೊಡುವೆ' ಎಂದು ಹೇಳುವೆ."

ಇಷ್ಟೆಂದು ಮಣ್ಣಿನ ಹಕ್ಕಿಯ ಚೂರುಗಳನ್ನೆಲ್ಲ ಆರಿಸಿ ಚಾದರದ ಅಂಚಿನಲ್ಲಿ ಕಟ್ಟಿ ಎನ್ನತೊಡಗಿದ "ನಿಮ್ಮ ಶ್ರೀಮತಿಯವರಿಗೆ ಬಹಳ ಪೆಟ್ಟು ತಗಲಿರಬಹುದು, ನಾನು ನೋಡಲಿಲ್ಲ—ಹಾನಿಗೆ ಹಾನಿಯೂ ಆಯಿತು, ಗಾಡಿಯೂ ಸಿಕ್ಕಲಿಲ್ಲ. ಸಿಕ್ಕಿದ್ದರೆ ರೋಗಿ ಮಗಳನ್ನು ಅರ್ಧ ಗಂಟೆ ಮೊದಲು ಹೋಗಿ ನೋಡುತ್ತಿದ್ದೆ." ಹೀಗೆ ಹೇಳುತ್ತ ಹೇಳುತ್ತ ಅವನು ಪ್ಲ್ಯಾಟ್‌ಫಾರ್ಮಿನಕಡೆಗೆ ನಡೆದ ಬಂಕೂ ಪಾಂಡೇಜೀಯನ್ನು ಕರೆದುಕೊಂಡು ಬೇರೆ ಕೆಲಸಕ್ಕೆ ಹೋದ. ನಾನು ಕೂಡಲೇ ಹಿಂತಿರುಗಿ ನೋಡಿದೆ. ಶ್ರಾವಣಮಾಸದ ಧಾರೆಯಂತೆ ರಾಜಲಕ್ಷ್ಮಿಯ ನಯನಗಳು ನೀರನ್ನು ಹರಿಸುತ್ತಿದ್ದುವು. ನಾನು ವ್ಯಸ್ತನಾಗಿ ಆಕೆಯ ಬಳಿಗೆ ಹೋಗಿ "ಹೆಚ್ಚು ಪೆಟ್ಟು ಹತ್ತಿರುವುದೇನು? ಎಲ್ಲಿ ಹತ್ತಿದೆ?" ಎಂದು ಕೇಳಿದೆ.

ರಾಜಲಕ್ಷ್ಮಿಯು ಕಂಬನಿಗಳನ್ನು ಒರೆಸಿಕೊಂಡು "ಹೌದು ಬಹಳ ಪೆಟ್ಟು ಹತ್ತಿದೆ—ಆದರೆ ನಿಮ್ಮಂಥ ಕಲ್ಲುಗಳು ಕಾಣದಂತಹ ಅರಿಯಲಾರದಂಥ ಸ್ಥಾನಕ್ಕೆ ಹತ್ತಿದೆ!" ಎಂದ ನುಡಿದಳು.

೬

ಶ್ರೀಮಾನ್ ಬಂಕೂ ನಮಗೋಸ್ಕರವಾಗಿ ಒಂದು ಸ್ವತಂತ್ರವಾದ ಡಬ್ಬಿಯನ್ನು 'ರಿಜರ್ವ' ಮಾಡಿಸಬೇಕಾಗಿದ್ದಿತು. ಆದುದರಿಂದ ಈ ವಿಷಯವಾಗಿ ನಾನು ಅವನನ್ನು ವಿಚಾರಿಸತೊಡಗಿದ್ದೆ. ರಾಜಲಕ್ಷ್ಮಿಯು ನಾನು ಬಂಕೂನೊಡನೆ ಆಡುವ ಮಾತುಗಳನ್ನು ಕಿವಿಗೊಟ್ಟು ಆಲಿಸುತ್ತಿದ್ದಳು, ಬಂಕೂ ಸ್ವಲ್ಪ ಬೇರೆ ಕಡೆಗೆ ಹೋದ ಕೂಡಲೇ ನನಗೆ—"ನಾನು ನನಗೋಸ್ಕರ ವೆಚ್ಚಮಾಡಲು ಬಯಸುವುದಿಲ್ಲ. ನನ್ನ ಸಲುವಾಗಿ ವೆಚ್ಚಮಾಡಿಕೊಳ್ಳುವುದು ಅಥವಾ ಮಾಡಿಸುವುದು ನನಗೆ ಇಷ್ಟವಿಲ್ಲ. ಆದಾಗ್ಯೂ ಹೆಚ್ಚು ವೆಚ್ಚಮಾಡುವಂಥ ಈ ಎಲ್ಲ ವಿಡಂಬನೆ

ಗಳು ನನಗೆ ಸೌಭಾಗ್ಯದಿಂದಲೇ ದೊರಕುವುವು. ' ಸೆಕಂಡ್ ಕ್ಲಾಸ್, ಫಸ್ಟ್‌ಕ್ಲಾಸ ಡಬ್ಬಿಯಲ್ಲಿಯೇ ನಾವು ಹೋಗುವುದು ಒಳ್ಳೆಯದ್ದೆಂದು' ಎನಿಸಿ ಅವರಿಗೆ ಸಮಾಧಾನ ವಾಗುತ್ತಿದ್ದರೆ ಆಗಲಿ. ಆದರೆ ನನಗೇಕೆ ಬೇಕು ಸೆಕೆಂಡ್‌ಕ್ಲಾಸ್ ಡಬ್ಬಿ ? ನನಗೆ ಇದ್ದಿತಲ್ಲ ಹೆಂಗುಸರ ಡಬ್ಬಿ ! ರೇಲ್ವೆದವರಿಗೆ ಇಷ್ಟು ರೂಪಾಯಿಗಳನ್ನು ವ್ಯರ್ಥ ವಾಗಿ ಏಕೆ ಕೊಡಬೇಕು ? " ಎಂದು ಹೇಳಿಬಿಟ್ಟಳು.

ಬಂಕೂ ನನಗೆ ಹೇಳಿದ ಮಾತಿಗೂ ಅವನ ತಾಯಿಯ ಈ ಮಾತಿಗೂ ನಡುವೆ ಯಾವ ಮಿತವ್ಯಯ-ನಿಷ್ಠೆಯ ಸಾಮಂಜಸ್ಯವೂ ಕಾಣಿಸಲಿಲ್ಲ. ಈ ಮಾತನ್ನು ಸ್ತ್ರೀಯರಿಗೆ ಹೇಳಿದರೆ ವ್ಯರ್ಥವಾಗಿ ಕಲಹ ಬೆಳೆಯುವುದೆಂದು ಭಾವಿಸಿ ನಾನು ಸುಮ್ಮಗಾದೆ ಮತ್ತು ರಾಜ ಲಕ್ಷ್ಮಿಯು ಹೇಳುವ ಮಾತುಗಳನ್ನು ಆಲಿಸುತ್ತಿದೆ. ನಾನು ಇನಿತೂ ಮಾತನಾಡಲಿಲ್ಲ.

ಪ್ಲ್ಯಾಟ್‌ಫಾರ್ಮಿನ ಬೆಂಚಿನ ಮೇಲೆ ಈ ಮೊದಲೇ ನಾವು ಹೇಳಿದ ಮಹಾಶಯರು ಕುಳಿತು ಗಾಡಿಯನ್ನು ನೋಡುತ್ತಿದ್ದರು. ಅವರ ಎದು ರಿಗಿಂದ ನಾನು ಹೋಗುವಾಗ ಅವರನ್ನು " ನೀವು ಎಲ್ಲಿಗೆ ಹೋಗುವಿರಿ? ಎಂದು ಕೇಳಿದೆ.

ಅವರು " ಬರ್ದವಾನಕ್ಕೆ " ಎಂದರು.

ಸ್ವಲ್ಪ ಮುಂದಕ್ಕೆ ಹೋಗುತ್ತಲೇ ರಾಜಲಕ್ಷ್ಮಿಯು ಮೆಲ್ಲಗೆ " ಹಾಗಾದರೆ, ಅವರು ಅನಾಯಾಸವಾಗಿ ನಮ್ಮ ಡಬ್ಬಿಯಲ್ಲಿಯೆ ಕುಳಿತು ಕೊಂಡು ಹೋಗಬಹುದಲ್ಲವೆ ? ಬಾಡಿಗೆ ( ರೈಲ್ ಚಾರ್ಜು)ಯನ್ನಂತೂ ಕೊಡಬೇಕಾದುದಿಲ್ಲ— ಅವರನ್ನು ಏಕೆ ನೀವು ಕರೆಯಬಾರದು ? " ಎಂದಳು.

ನಾನೆಂದೆ " ಅವರು ಟೀಕೀಟನ್ನು ನಿಶ್ಚಯವಾಗಿಯೂ ಕೊಂಡು ಕೊಂಡೇ ಬಿಟ್ಟಿರುವರು. "

ಇದಕ್ಕೆ ರಾಜಲಕ್ಷ್ಮಿಯು " ಕೊಂಡಿದ್ದರೇನಾಯಿತು ? ಗದ್ದಲದಲ್ಲಿ ಕುಳಿತುಕೊಳ್ಳುವ ಕಷ್ಟವಾದರೂ ಅವರಿಗೆ ತಪ್ಪೀತು " ಎಂದು ಉತ್ತರ ವಿತ್ತಳು.

ಪುನಃ ನಾನು "ಅವರಿಗೆ ಅಭ್ಯಾಸವಿರುವುದು, ಗದ್ದಲದ ಪರಿವೆ ಅವರಿಗೆ ಇಲ್ಲವೇ ಇಲ್ಲ" ಎಂದೆ.

ಆಗ ರಾಜಲಕ್ಷ್ಮಿಯು ಸ್ವಲ್ಪ ಜಿದ್ದಿನಿಂದ "ಅದು ಏನೇ ಇರಲಿ, ನೀವು ಅವರನ್ನು ಕರೆಯಿರಿ. ನಾವು ಮೂವರೂ ಕುಳಿತುಕೊಂಡು ಮಾತನಾಡುತ್ತ ಹೋಗುವೆವು. ದಾರಿಯೂ ಆನಂದದಿಂದ ಕಳೆಯುವುದು" ಎಂದಳು.

ಈಗ ಆಕೆಗೆ ತನ್ನ ತಪ್ಪು ತಿಳಿದುಬಂದಿರುವುದೆಂದೂ ಅದಕ್ಕಾಗಿ ಆಕೆಗೆ ಕೆಡುಕೆನಿಸುತ್ತಿರುವುದೆಂದೂ ನಾನು ತಿಳಿದುಕೊಂಡೆ. ಬಂಕೂ ಮತ್ತು ಆಳುಮಕ್ಕಳ ಎದುರಿನಲ್ಲಿ ನಾವಿಬ್ಬರೇ ಒಂದೇ ಡಬ್ಬಿಯಲ್ಲಿ ಕುಳಿತು ಹೋಗಬೇಕಾಗಿದ್ದ ಸಂಗತಿಯಿಂದ ಉಂಟಾದ ಮನಸ್ಸಿನ ದುಗುಡವನ್ನು ಆಕೆಯ ಕಡಿಮೆ ಮಾಡಿಕೊಳ್ಳಬಯಸುತ್ತಿರುವಳೆಂಬುದೂ ನನಗೆ ಗೊತ್ತಾಯಿತು. ಆಕೆಯ ಮನದೊಳಗಿನ ಇದೇ ಮಾತನ್ನು ಇನ್ನೂ ಚೆನ್ನಾಗಿ ಅರಿತುಕೊಳ್ಳಬೇಕೆಂಬ ಅಭಿಪ್ರಾಯದಿಂದ ನಾನು ಅನ್ಯ ಮನಸ್ಕನಾಗಿ "ಅನಾವಶ್ಯಕ ಮನುಷ್ಯನನ್ನು ಡಬ್ಬಿಯಲ್ಲಿ ಕರೆದು ಕುಳ್ಳಿರಿಸಿಕೊಳ್ಳುವ ಆವಶ್ಯಕತೆಯಾದರೂ ಏನಿರುವುದು? ನೀನು ಬೇಕಾದಷ್ಟು ನನ್ನ ಕೂಡ ಮಾತನಾಡಬಹುದು. ಆನಂದದಿಂದ ಸಮಯವು ಕಳೆದುಹೋಗುವುದು" ಎಂದು ನುಡಿದೆ.

ರಾಜಲಕ್ಷ್ಮಿಯು ನನ್ನ ಮೇಲೆ ಒಂದು ತೀಕ್ಷ್ಣ ಕಟಾಕ್ಷವನ್ನು ಬೀರಿ "ಅದನ್ನು ನಾನು ಬಲ್ಲೆ. ನನ್ನನ್ನು ಮೋಸಗೊಳಿಸಲು ದೊರೆಯುವ ಈ ಸಮಯವನ್ನು ನೀವು ವ್ಯರ್ಥ ಹೋಗಗೊಡಬಲ್ಲಿರೇನು?" ಎಂದು ನುಡಿದಳು.

ಇಷ್ಟೆಂದು ಆಕೆಯು ಸುಮ್ಮಗಾದಳು. ಗಾಡಿಯು ಸ್ಟೇಶನ್ನಿಗೆ ಬರುತ್ತಲೇ ನಾನು ಆ ಮನುಷ್ಯನ ಬಳಿಗೆ ಹೋಗಿ "ನೀವು ನಮ್ಮ ಡಬ್ಬಿಯಲ್ಲೆ ಕುಳಿತುಕೊಳ್ಳಬಾರದೇಕೆ? ನಮ್ಮಿಬ್ಬರ ಹೊರತು ಆ ಡಬ್ಬಿಯಲ್ಲಿ ಯಾರೂ ಇಲ್ಲ. ಗದ್ದಲದಿಂದ ನೀವು ಮುಕ್ತರಾಗುವಿರಿ. ನಿಮಗೆ ತೊಂದರೆಯಾಗುವುದು ತಪ್ಪುವುದು" ಎಂದೆ.

ನಮ್ಮ ಡಬ್ಬಿಗೆ ಬಂದು ಕುಳಿತುಕೊಳ್ಳಲು ಮನವೊಲಿಸಲಿಕ್ಕೆ ತಡವಾಗಲಿಲ್ಲ ಎಂಬುದನ್ನು ಇಲ್ಲಿ ಹೇಳುವುದು ಅಗತ್ಯವಿಲ್ಲ. ಆಗ್ರಹ ಮಾಡಿ

ದೊಡನೆಯೆ ಆವರು ತಮ್ಮ ಚಿಕ್ಕ ಗಂಟನ್ನು ತೆಗೆದುಕೊಂಡು ಬಂದು ನಮ್ಮ ಡಬ್ಬಿಯಲ್ಲಿ ಕುಳಿತರು.

ಗಾಡಿಯು ಎರಡು ಮೂರು ಸ್ಟೇಶನ್ನುಗಳನ್ನು ದಾಟಿ ಹೋಗುವಷ್ಟರೊಳಗೇ ರಾಜಲಕ್ಷ್ಮಿಯು ಅವರ ಕೂಡ ಬಹಳ ಮಾತುಕತೆಯನ್ನು ಪ್ರಾರಂಭಿಸಿಬಿಟ್ಟಳು. ನಾಲ್ಕೈದು ಸ್ಟೇಶನ್ನು ದಾಟುವುದರೊಳಗಾಗಿ ಅವರ ಮನೆಯ ಬೀದಿಯ, ಊರಿನ, ಅಕ್ಕಪಕ್ಕದ ಊರುಗಳ ಸಮಾಚಾರವನ್ನೆಲ್ಲ ಕೆದರಿ ಕೆದರಿ ಕೇಳಿ ಅರಿತುಕೊಂಡಳು.

ರಾಜಲಕ್ಷ್ಮಿಯ ಗುರುದೇವರು ಕಾಶಿಯಲ್ಲಿರುವರು. ಅವರ ಸಲುವಾಗಿ ಆಕೆಯು ಅನೇಕ ವಸ್ತುಗಳನ್ನು ತೆಗೆದುಕೊಂಡಿದ್ದಳು. ಬರದ್ವಾನ ಸ್ಟೇಶನದ ಬಳಿಗೆ ಬರುತ್ತಲೇ ಆಕೆಯು ತನ್ನ ಟ್ರಂಕನ್ನು ತೆರೆದು, ಅದರೊಳಗೆ ಇದ್ದ ಸೀರೆಗಳಲ್ಲಿ ಆರಿಸಿ ಹಸಿರು ಬಣ್ಣದ ರೇಷ್ಮೆಯ ಸೀರೆಯೊಂದನ್ನು ಹೊರಗೆ ತೆಗೆದಳು ಮತ್ತು ಎಂದಳು "ಗೊಂಬೆಗೆ ಬದಲಾಗಿ ಸರಳಾಗೆ ಈ ಸೀರೆಯನ್ನು ಕೊಡಿರಿ."

ಆ ಸಜ್ಜನರು ಮೊದಲು ದಿಙ್ಮೂಢರಾದರು, ಬಳಿಕ ಸ್ವಲ್ಪ ಲಜ್ಜಾಭಾವದಿಂದ ಬೇಗ ಬೇಗ ನುಡಿದರು "ಬೇಡ, ಬೇಡ, ಮಗೂ. ಈ ಬಾರಿ ಸರಳಾಗೆ ಗೊಂಬೆಯನ್ನು ಕೊಂಡುಕೊಡುವೆ. ಈ ಸೀರೆಯು ನಿಮ್ಮ ಹತ್ತಿರವೇ ಇರಲಿ— ಮೇಲಾಗಿ ಇದು ಬಹಳ ಬೆಲೆಯುಳ್ಳದ್ದೂ ಇದೆ!"

ರಾಜಲಕ್ಷ್ಮಿಯು ಸೀರೆಯನ್ನು ಅವರ ಬಳಿಯಲ್ಲಿ ಇಡುತ್ತ "ಬಹಳ ಕಿಮ್ಮತ್ತಿನದಲ್ಲ. ಇದರ ಕಿಮ್ಮತ್ತು ಎಷ್ಟೇ ಇರಲಿ, ಅದನ್ನು ಆಕೆಯು ಕೈಯಲ್ಲಿ ಕೊಟ್ಟು 'ಇದನ್ನು ನಿನ್ನ ಚಿಕ್ಕಮ್ಮ ನೀನು ಗುಣಹೊಂದಿದ ಬಳಿಕ ಉಟ್ಟುಕೊಳ್ಳಬೇಕೆಂದು ಕೊಟ್ಟಿದ್ದಾಳೆ' ಎಂದು ಹೇಳಿರಿ" ಎಂದು ನುಡಿದಳು.

ಆ ಸಜ್ಜನರ ಕಣ್ಣುಗಳು ಒದ್ದೆಯಾದುವು— ಕಂಬನಿಗಳು ತುಂಬಿಬಂದುವು. ಒಂದು ಅರ್ಧ ಗಂಟೆಯ ಮಾತುಕತೆಯಿಂದ ಒರ್ವ ಅಪರಿಚಿತ ಮನುಷ್ಯನ ಪೀಡಿತ ಕನ್ಯೆಗೆ ಒಂದು ಬಹಳ ಬೆಲೆಯ ವಸ್ತುವನ್ನು ಕಾಣಿಕೆಯಾಗಿ ಕೊಡುವುದನ್ನು ಅವರು ತಮ್ಮ ಜೀವನದಲ್ಲಿ ಬಹುಶಃ ಎಂದೂ ಕಂಡಿರಲಿಕ್ಕಿಲ್ಲ. ಅವರೆಂದರು "ನನ್ನ ಮಗಳು ಬೇಗನೆ ಗುಣ

ಹೊಂದಲೆಂದು ಆಶೀರ್ವಾದ ಮಾತ್ರ ಕೊಟ್ಟುಬಿಡಿರಮ್ಮ, ಬಡವನ ಮನೆಗೆ ಈ ಇಷ್ಟು ಬೆಲೆಯ ಬಟ್ಟೆ ಶೋಭಿಸದು, ಇಂಥದನ್ನು ತೆಗೆದು ಕೊಂಡು ಆಕೆಯೇನು ಮಾಡುವಳು ಮಗೂ? ತಾವು ಅದನ್ನು ಎತ್ತಿ ಕೊಂಡು ಟ್ರಂಕಿನೊಳಗೆ ಇಟ್ಟುಬಿಡಿರಿ." ಇಷ್ಟೆಂದು ಅವರು ನನ್ನ ಕಡೆಗೂ ನೋಡಿದರು. ಆಗ ನಾನೆಂದೆ "ಆಕೆಯ ಚಿಕ್ಕಮ್ಮ ಕೊಡು ತ್ತಿರುವಳೆಂದ ಬಳಿಕ ಅದನ್ನು ತೆಗೆದುಕೊಳ್ಳುವುದೇ ಒಳಿತು." ಪುನಃ ನಕ್ಕು "ಸರಳೆಯ ಭಾಗ್ಯ ಒಳ್ಳೆಯದು. ನಮಗೂ ಚಿಕ್ಕಮ್ಮ ದೊಡ್ಡಮ್ಮ ಯಾರಾದರೂ ಇದ್ದಿದ್ದರೆ ಬಹಳ ಅನುಕೂಲವಾಗುತ್ತಿತ್ತು! ಈ ಬಾರಿ ಮಹಾಶಯರೆ, ನಿಮ್ಮ ಮಗಳು ಬಹಳ ಬೇಗ ಗುಣ ಹೊಂದುವಳು ನೋಡಿರಿ" ಎಂದೆ.

ಆಗ ಆ ಮನುಷ್ಯನ ಅಂಗ ಅಂಗದಿಂದ ಕೃತಜ್ಞತೆಯು ಹೊರ-ಸೂಸತೊಡಗಿತು. ಬಳಿಕ ಅವರು ಮರುಮಾತನಾಡದೆ ಆ ಸೀರೆಯನ್ನು ತೆಗೆದುಕೊಂಡರು. ಪುನಃ ಅವರಿಬ್ಬರೊಳಗೆ ಮಾತುಕತೆಯು ಸುರು ವಾಯಿತು. ಗೃಹಸ್ಥಾಶ್ರಮ, ಸಮಾಜ, ಸುಖದುಃಖದ ಮಾತುಗಳು ಮತ್ತೂ ಯಾವು ಯಾವುವೊ ಮಾತುಗಳು ನಡೆದುವು. ಆದರೆ ನಾನು ಮಾತ್ರ ಕಿಡಿಕಿಯ ಹೊರಗೆ ತಲೆ ಹಾಕಿಕೊಂಡು ಸ್ತಬ್ಧವಾಗಿ ಕುಳಿತಿದ್ದೆ. ಯಾವ ಪ್ರಶ್ನೆಯನ್ನು ನಾನು ಆಗಾಗ್ಗೆ ನನ್ನನ್ನೇ ಕೇಳಿಕೊಳ್ಳುತ್ತಿದ್ದನೊ ಅದೇ ಈ ದಿನ ಈ ಚಿಕ್ಕ ಘಟನೆಯಿಂದ ಪುನಃ ನನ್ನ ಮನದಲ್ಲಿ ತಲೆ ಯೆತ್ತಿ ನಿಂತಿತು. ಆ ಪ್ರಶ್ನೆಯೆಂದರೆ ಇದು "ಈ ಯಾತ್ರೆಯ ಕೊನೆಯು ಎಲ್ಲಿರುವುದು?"

ಈ ಒಂದು ಹತ್ತು ಹನ್ನೆರಡು ರೂಪಾಯಿಗಳ ವಸ್ತುವನ್ನು ದಾನ ಮಾಡುವುದು ರಾಜಲಕ್ಷ್ಮಿಗೆ ಕಷ್ಟದಾಯಕವಾದುದೂ ಇರಲಿಲ್ಲ, ಹೊಸದೂ ಇರಲಿಲ್ಲ. ಬಹುಶಃ ಆಕೆಯ ದಾಸ-ದಾಸಿಯರು ಇಂಥ ಆಕೆಯ ದಾನದ ಬಗ್ಗೆ ಮಾತುಕತೆಯನ್ನು ಆಡುವುದಿಲ್ಲ. ಅವರಿಗೆ ಇಂಥ ಅಥವಾ ಇದಕ್ಕಿಂತ ಹೆಚ್ಚು ಬೆಲೆಯ ವಸ್ತುಗಳು ಎಷ್ಟು ದಾನ ವಾಗಿ ದೊರೆತಿವೆಯೊ ಏನೊ ಆದರೆ ನನ್ನ ವಿಚಾರವೇ ಬೇರೆಯಾಗಿದ್ದಿತು. ಈ ದಾನವಾಗಿ ಕೊಟ್ಟ ವಸ್ತುವು ಲೆಕ್ಕ ಹಾಕಿ ನೋಡಿದರೆ ಅಷ್ಟೇನೂ ದೊಡ್ಡದಲ್ಲ— ಎಂಬುದನ್ನು ಬಲ್ಲವನಾಗಿದ್ದೆ. ಆದರೆ ನಾನು ಯೋಚಿ

ಸುತ್ತಿದ್ದುದು ಇದು "ಆಕೆಯ ಹೃದಯದ ಪ್ರವಾಹವು ಯಾವುದನ್ನು ಗುರಿಯಾಗಿಟ್ಟುಕೊಂಡು ತನ್ನನ್ನು ನಿಃಶೇಷ ಮಾಡಿಕೊಳ್ಳುವುದಕ್ಕಾಗಿ ಪ್ರಬಲ ವೇಗದಿಂದ ಹರಿಯುತ್ತಿರುವುದು!— ಅದರ ಅವಸಾನವೆಲ್ಲಾಗುವುದು? ಯಾವ ರೀತಿಯಲ್ಲಾಗುವುದು?"

ಸಮಸ್ತ ರಮಣಿಯರ ಹೃದಯದಲ್ಲಿ 'ನಾರಿ'ಯು ವಾಸ ಮಾಡುತ್ತಿರುವಳೋ ಇಲ್ಲವೋ ಎಂಬುದನ್ನು ಎದೆ ತಟ್ಟಿ ಹೇಳುವುದು ಅತ್ಯಂತ ದುಃಸಾಹಸದ ಕೆಲಸ. ಆದರೆ, ನಾರಿಯ ಚರಮ ಸಾರ್ಥಕ್ಯವು ಮಾತೃತ್ವದಲ್ಲುಂಟು ಎಂದು ಅತ್ಯಂತ ಉಚ್ಚ ಸ್ವರದಿಂದ ಹೇಳಬಹುದು.

ರಾಜಲಕ್ಷ್ಮಿಯನ್ನು ನಾನು ಗುರುತಿಸಿದ್ದೆ. ರಾಜಲಕ್ಷ್ಮಿಯಲ್ಲಿ ವಾಸವಾಗಿದ್ದ ಪ್ಯಾರಿಬಾಯಿಯಯು ತನ್ನ ಅಪರಿಣತ ಯೌವನದ ಸಮಸ್ತ ದುರ್ದಮ್ಯ ಮನಸ್ತಾಪಗಳೊಡನೆ ಪ್ರತಿ ಪ್ರತಿ ಪಳಕ್ಕೂ ಸಾಯುತ್ತಿರುವಳು, ಪ್ಯಾರಿಬಾಯಿ ಎಂಬ ಹೆಸರನ್ನು ಉಚ್ಚರಿಸಿದ ಕೂಡಲೇ ಆಕೆಯು ನಾಚಿಕೆಯಿಂದ ಹುಡಿಗೂಡಿ ಹೋಗುತ್ತಿರುವಳು ಎಂಬುದನ್ನು ನಾನು ವಿಶೇಷವಾಗಿ ಲಕ್ಷ್ಯಗೊಟ್ಟು ನೋಡಿದ್ದೆ. ನನಗೆ ಇದೇ ಒಂದು ಸಮಸ್ಯೆಯಾಯಿತು.

ತನ್ನ ಸರ್ವಸ್ವವನ್ನೂ ಕೊಟ್ಟು ಸಂಸಾರದಲ್ಲಿರುವ ಸಮಸ್ತ ಸುಖವನ್ನು ಅನುಭೋಗಿಸಬೇಕೆನ್ನುವ ಉತ್ತಪ್ತ ಆವೇಗವು ರಾಜಲಕ್ಷ್ಮಿಯಲ್ಲಿ ಈಗಿಲ್ಲ. ಇಂದು ಆಕೆಯು ಶಾಂತಳಾಗಿರುವಳು, ಸ್ಥಿರಳಾಗಿರುವಳು. ಆಕೆಯ ಸಮಸ್ತ ಇಚ್ಛೆ-ವಾಸನೆಯೆಲ್ಲವೂ ಆಕೆಯಲ್ಲಿಯೇ ಇಂದು ಪೂರ್ಣ ಮುಳುಗಿಹೋಗಿದೆ. ಹೊರಗಿನಿಂದ ನೋಡುವವರಿಗೆ ಅದು ಇಂದು ಆಕೆಯಲ್ಲಿದೆಯೊ ಇಲ್ಲವೊ ಎಂಬುದು ತಿಳಿಯದಂತಾಗಿದೆ. ಅದೇ ಇಂದು ಈ ಸಾಮಾನ್ಯ ಘಟನೆಯೊಂದರಿಂದ ನನಗೆ ಸ್ಮರಣಕ್ಕೆ ತಂದುಕೊಟ್ಟಿತು—ಈ ದಿನ ಆಕೆಯ ಪರಿಣತ ಯೌವನದ ಸುಗಂಭೀರ ತಳಪ್ರದೇಶದಿಂದ ಯಾವ ಮಾತೃತ್ವವು ನಿಂತಿದೆಯೊ, ಕೂಡಲೇ ಎಚ್ಚತ್ತು ನಿಂತ ಕುಂಭಕರ್ಣನ ಹಾಗೆ ಇರುವ ಆಕೆಯ ಈ ವಿರಾಟ್ ಕ್ಷುಧೆಗೆ ಆಹಾರವೆಲ್ಲಿ ದೊರಕುವುದು? ಆಕೆಗೆ ತನ್ನ ಸ್ವಂತ ಮಕ್ಕಳಿದ್ದರೆ ಈ ಮಾತು ಸ್ವಾಭಾವಿಕವಾಗಬಹುದಾಗಿದ್ದಿತು. ಸಂತಾನ ಅಭಾವದಿಂದ ಈ ಮಾತು ಅತ್ಯಂತ ಜಟಿಲವಾಗಿರುವುದು.

ಆ ದಿನ ಪಾಟಣಾದಲ್ಲಿ ನಾನು ಆಕೆಯ ಯಾವ ತಾಯ ರೂಪವನ್ನು ನೋಡಿ ಮುಗ್ಧನಾಗಿದ್ದೆನೊ ಈ ದಿನವೂ ಅದೇ ಮೂರ್ತಿಯನ್ನು ಸ್ಮರಿಸಿ ಅತ್ಯಂತ ವ್ಯಥೆಯಿಂದ ನಾನು ಕೇವಲ ಇದನ್ನೇ ಯೋಚಿಸತೊಡಗಿದೆ— ‘ ಇಷ್ಟು ದೊಡ್ಡ ಬೆಂಕಿಯನ್ನು ಬಾಯಿಂದ ಊದಿ ಆರಿಸುವುದು ಕಷ್ಟ. ಆದುದರಿಂದಲೇ ಈ ದಿನ ಪರಕೀಯ ಹುಡುಗನನ್ನು ತನ್ನ ಮಗನೆಂದು ಭಾವಿಸುವ ಈ ಆಟದಿಂದ ರಾಜಲಕ್ಷ್ಮಿಯ ಹೃದಯದ ತೃಷ್ಣೆಯು ಯಾವ ರೀತಿಯಿಂದಲೂ ಆರುತ್ತಿರುವುದಿಲ್ಲ. ಆದುದರಿಂದಲೇ ಏಕ ಬಂಕೂ ಆಕೆಗೆ ಸಾಕಾಗಿಲ್ಲ. ಆದರೆ ಈ ದಿನ ಜಗತ್ತಿನಲ್ಲಿರುವ ಮಕ್ಕಳೆಲ್ಲರ ಸುಖದುಃಖವು ಆಕೆಯ ಹೃದಯವನ್ನು ಆಲ್ಲೋಲಕಲ್ಲೋಲ ಮಾಡುತ್ತಿರುವುದು ?

ಬರ್ದವಾನದಲ್ಲಿ ಆ ಮಹಾಶಯರು ಇಳಿದರು. ರಾಜಲಕ್ಷ್ಮಿಯು ಬಹಳ ಹೊತ್ತಿನವರೆಗೆ ಸುಮ್ಮನೆ ಕುಳಿತುಕೊಂಡಿದ್ದಳು. ನಾನು ಕಿಡಕಿಯ ಕಡೆಯಿಂದ ದೃಷ್ಟಿಯನ್ನು ಹೊರಳಿಸಿ “ ಇಷ್ಟೆಲ್ಲ ಅಳುವುದು ಯಾರ ಸಲುವಾಗಿ ಆಯಿತು ? ಸರಳೆಯ ಸಲುವಾಗಿಯೊ ಆಕೆಯ ತಾಯಿಯ ಸಲುವಾಗಿಯೋ ? ” ಎಂದು ಕೇಳಿದೆ.

ರಾಜಲಕ್ಷ್ಮಿಯು ತಲೆಯನ್ನು ಮೇಲಕ್ಕೆತ್ತಿ “ ಇಷ್ಟೊತ್ತಿನವರೆಗೆ ನೀವು ನಮ್ಮ ಮಾತುಕತೆಯನ್ನು ಕೇಳುತ್ತಿದ್ದಂತೆ ತೋರುತ್ತಿದೆ” ಎಂದು ನುಡಿದಳು.

“ಹೀಗೆಯೇ ಕೇಳುತ್ತಿದ್ದೆ. ಮನುಷ್ಯನು ಸ್ವತಃ ಯಾವ ಮಾತನ್ನು ಕೇಳದೆ ಇದ್ದರೂ ಎಷ್ಟೋ ಮಾತುಗಳು ತಾವಾಗಿಯೇ ಬಂದು ಅವನ ಕಿವಿಗೆ ಬೀಳುವುವು. ಪ್ರಪಂಚದಲ್ಲಿ ಪರಮಾತ್ಮನು ಕಡಿಮೆ ಮಾತನಾಡುವವರಿಗೆ ಈ ಬಗೆಯ ಶಿಕ್ಷೆಯನ್ನು ವಿಧಿಸಿರುವ. ಇದರಿಂದ ತನ್ನನ್ನು ಅವನು ಉಳಿಸಿಕೊಳ್ಳಲಾರ. ಕಣ್ಣೀರು ಹರಿದುದು ಯಾರಿಗಾಗಿ ಎಂಬುದನ್ನು ಕೇಳಲಿಲ್ಲವಲ್ಲ ? ”

“ ನನ್ನ ಕಣ್ಣುಗಳಿಂದ ಕಂಬನಿಗಳು ಯಾರಿಗಾಗಿ ಎಂಬುದನ್ನು ಕೇಳುವುದರಿಂದ ನಿನಗಾವ ಲಾಭವೂ ಇಲ್ಲ.”

“ ಲಾಭದ ಆಸೆಯಿಲ್ಲ ನನಗೆ. ಉಕ್ಸಾಹವಾಗದಂತೆ ನೋಡಿಕೊಂಡಿದ್ದರೆ ಸಾಕು ಎನ್ನಿಸುವುದು. ಸರಳೆಗಾಗಿಯೆ ಆಗಲಿ, ಆಕೆಯ

ಾಯಿಗಾಗಿಯೆ ಆಗಲಿ, ಬೇಕಾದಷ್ಟು ನೀನು ಕಂಬನಿಗಳನ್ನು ಸುರಿಸಿದರೆ ಡ್ಡಿಯಿಲ್ಲ.— ಆದರೆ ಆಕೆಯ ತಂದೆಯ ಸಲುವಾಗಿ ಕಂಬನಿ ಸುರಿಸು ವುದು ನನಗೆ ಇಷ್ಟವಿಲ್ಲ. ”

ರಾಜಲಕ್ಷ್ಮಿಯು ಕೇವಲ ‘ ಹೂಂ ’ ಎಂದು ಕಿಡಿಕಿಯ ಹೊರಗೆ ೋಡತೊಡಗಿದಳು.

ಈ ತಮಾಷೆಯು ನಿಷ್ಫಲವಾಗಲಿಕ್ಕಿಲ್ಲವೆಂದೂ ಕಟ್ಟುಹಾಕಿದ ನೇಕ ಜರಿಗಳ ಒಡ್ಡನ್ನು ಒಡೆಯಬಹುದೆಂದೂ ನಾನು ಬಗೆದಿದ್ದೆನು. ದರೆ, ಹಾಗಂತೂ ಆಗಲೇ ಇಲ್ಲ; ಆದರೆ ಆದುದು ಇದು— ಇಷ್ಟು ೊತ್ತಿನವರೆಗೆ ಆಕೆಯು ಇತ್ತ ನೋಡುತ್ತಿದ್ದಳು, ಈ ತಮಾಷೆಯನ್ನು ೕಳಿ ಅತ್ತ ಕಡೆಗೆ ಮುಖವನ್ನು ತಿರುಗಿಸಿ ಕುಳಿತುಕೊಂಡಳು.

ನಾನೂ ಬಹಳ ಹೊತ್ತಿನವರೆಗೆ ಮಾತನಾಡಲಿಲ್ಲ. ಮನದೊಳಗೇ ಾತನಾಡಬೇಕೆಂಬ ಉದ್ವೇಗವು ಕುದಿಯುತ್ತಿದ್ದಿತು. ಆದುದರಿಂದ ಚ್ಚು ಹೊತ್ತು ಸುಮ್ಮಗಿರಲಾಗಲಿಲ್ಲ. ಆದುದರಿಂದ “ ಬರ್ದವಾನದಲ್ಲಿ ನ್ನುವುದಕ್ಕೆ ಏನಾದರೂ ಕೊಂಡುಕೊಂಡಿದ್ದರೆ ಚೆನ್ನಾಗಿರುತ್ತಿತ್ತು ! ” ಂದು ನುಡಿದೆ.

ರಾಜಲಕ್ಷ್ಮಿಯು ಮಾತನಾಡಲೇ ಇಲ್ಲ. ಮೊದಲಿನಂತೆಯೆ ುಮ್ಮಗೆ ಕುಳಿತಿದ್ದಳು.

ನಾನು ಪುನಃ “ ಅಸ್ಯರ ದುಃಖವನ್ನು ಕಂಡು ಅತ್ತು ಅತ್ತು ನದಿ ುನ್ನು ಹರಿಸಿಬಿಟ್ಟೆ, ಮನೆಯವರ ದುಃಖವನ್ನು ಕೇಳಲಿಕ್ಕೆ ಕೂಡ ುನಸ್ಸಿಲ್ಲ ! ವಿಲಾಯತಿಯಿಂದ ತಿರುಗಿ ಬಂದ ಜನರ ಈ ವಿದ್ಯೆಯನ್ನು ಲ್ಲಿ ಕಲಿತುಕೊಂಡೆ ? ” ಎಂದು ಕೇಳಿದೆ.

ಈ ಬಾರಿ ರಾಜಲಕ್ಷ್ಮಿಯು ಮೆಲ್ಲಗೆ “ ವಿಲಾತಿಯಿಂದ ಹಿಂತಿರುಗಿ ಂದವರ ಮೇಲೆ ನಿಮ್ಮ ಭಕ್ತಿ ಬಹಳ ಇರುವುದೆಂಬುದನ್ನು ನೋಡು ರುವೆ ! ” ಎಂದಳು.

“ ಹೌದು, ಅವರು ಭಕ್ತಿಗೆ ಪಾತ್ರರಿರುವರು !

“ ಏಕೆ ? ಅವರು ನಿಮಗೇನು ಕೆಡಕು ಮಾಡಿರುವರು ? ”

"ಇದುವರೆಗೆ ಕೆಡಕನ್ನೇನೂ ಮಾಡಿಲ್ಲ. ಇನ್ನು ಮೇಲೆ ಏನಾದರೂ ಕೆಡಕನ್ನುಂಟು ಮಾಡಬಹುದಲ್ಲ, ಎಂಬ ಅಂಜಿಕೆಯಿಂದ ಮೊದಲಿಗೇ ಭಕ್ತಿ ಮಾಡುವೆ!"

ರಾಜಲಕ್ಷ್ಮಿಯು ಸ್ವಲ್ಪ ಹೊತ್ತು ಸುಮ್ಮಗಿದ್ದು "ಇದು ನಿಮ್ಮ ಅನ್ಯಾಯ. ನೀವು ಅವರನ್ನು ನಿಮ್ಮ ಗುಂಪಿನಿಂದ, ಜಾತಿಯಿಂದ, ಸಮಾಜದಿಂದ ಬಹಿಷ್ಕಾರ ಹಾಕಿಬಿಟ್ಟಿದ್ದೀರಿ. ಆದಾಗ್ಯಾವರೂ ಅವರು ನಿಮ್ಮ ಸಲುವಾಗಿ ಏನಾದರೂ ಸ್ವಲ್ಪ ಮಾಡಿದರೆ, ಅದಕ್ಕಾಗಿ ನೀವು ಅವರಿಗೆ ಕೃತಜ್ಞರಾಗಿರಬೇಕು" ಎಂದಳು.

"ನಾವು ಜಾತಿಯಿಂದ ಅವರನ್ನು ಹೊರಗೆ ಹಾಕಿದ್ದಕ್ಕಾಗಿ ಅವರು ಸಿಟ್ಟಾಗಿ ಮುಸಲ್ಮಾನರಾಗಲಿ ಕ್ರಿಶ್ಚಿಯನ್ನರಾಗಲಿ ಆಗಿದ್ದರೆ ನಾವು ಅವರಿಗೆ ಹೆಚ್ಚು ಕೃತಜ್ಞರಾಗಿರುತ್ತಿದ್ದೆವು! ಅವರಲ್ಲಿ ತಾವು ಬ್ರಾಹ್ಮಣರೆಂದು ತಿಳಿದುಕೊಳ್ಳುವವರು ಬ್ರಾಹ್ಮಣ ಸಮಾಜವನ್ನೂ ಹಿಂದೂ ಎಂದು ತಿಳಿದುಕೊಳ್ಳುವವರು ಹಿಂದೂ ಸಮಾಜವನ್ನೂ ಹೆಚ್ಚು ನಾಶಗೊಳಿಸುತ್ತಿರುವರು. ಒಂದು ವೇಳೆ ಅವರು ತಾವು ಯಾರು ಎಂಬುದನ್ನು ಅರಿತುಕೊಂಡು ಪರರಿಗಾಗಿ ಅಳುತ್ತ ಕುಳಿತಿದ್ದರೆ ಅವರ ಕಲ್ಯಾಣವಾದರೂ ಆಗುತ್ತಿದ್ದಿತು ಮತ್ತು ಯಾರಿಗಾಗಿ ಅಳುತ್ತಿದ್ದರೊ ಅವರಿಗೂ ಸ್ವಲ್ಪ ಉಪಕಾರ ಮಾಡಿದಂತಾಗುತ್ತಿದ್ದಿತು."

"ಅದರೆ ನನಗೆ ನಿಮ್ಮ ಹಾಗೆ ಅನಿಸುವುದಿಲ್ಲ."

"ಅನಿಸದಿದ್ದರೆ ಹಾನಿಯೇನೂ ಆಗುವುದಿಲ್ಲ. ಆದರೆ ಈಗ ನಾನು ಯಾವುದನ್ನು ವಿಚಾರ ಮಾಡುತ್ತಿರುವೆನೋ ಆ ಮಾತೇ ಇದರಿಂದ ತೀರ ಬೇರೆಯಾಗಿರುವುದು. —ಹಾಂ, ನೀನು ನನ್ನ ಆ ಮಾತಿಗೆ ಉತ್ತರವನ್ನೇ ಕೊಡಲಿಲ್ಲ?

ರಾಜಲಕ್ಷ್ಮಿಯು ಈ ಬಾರಿ ನಕ್ಕು "ರಾಯರೇ, ನೀವು ಆ ಮಾತಿನ ಬಗ್ಗೆ ವಿಚಾರ ಮಾಡಬೇಕಾಗಿಲ್ಲ. ಮೊದಲು ಹಸಿವು ಶಾಂತವಾಗಲಿ— ಆ ಮೇಲೆ ವಿಚಾರ ಮಾಡಲಾದೀತು." ಎಂದು ನುಡಿದಳು.

"ಆ ಮೇಲೆ, ವಿಚಾರ ಮಾಡಲಾದೀತು, ಯಾವ ಸ್ಟೇಶನ್ನಿನ ಮೇಲೆ ಯಾವುದು ಸಿಕ್ಕುವುದೊ ಅದನ್ನೇ ನುಂಗಲು ಕೊಡುವಿ! — ಹಾಗೆ ಆಗುವಂತಿಲ್ಲ ನೋಡು, ಮೊದಲೇ ಹೇಳಿಬಿಡುವೆ."

ನನ್ನ ಉತ್ತರವನ್ನು ಕೇಳಿ ರಾಜಲಕ್ಷ್ಮಿಯು ಸ್ವಲ್ಪ ಹೊತ್ತು ನನ್ನ ಕಡೆಗೆ ನೋಡುತ್ತ ಕುಳಿತಳು. ಬಳಿಕ ನಕ್ಕು "ಹಾಗೆ ನಾನು ಮಾಡ ಬಲ್ಲೆನೆಂದು ನಿಮಗೆ —ನಿಮಗೆ ಎನಿಸುವುದೇನು ? ವಿಶ್ವಾಸವಾಗುವುದೇನು ? " ಎಂದು ನುಡಿದಳು.

" ಛಲೆ! ಇಷ್ಟು ಕೂಡ ನಿನ್ನ ಮೇಲೆ ವಿಶ್ವಾಸವಿಲ್ಲವೆ ನನಗೆ ? "

"ಸರಿ ! " ಎಂದು ಆಕೆಯು ಪುನಃ ಕಿಡಕಿಯ ಹೊರಗೆ ತನ್ನ ಮುಖ ಹಾಕಿ ಸುಮ್ಮಗೆ ಕುಳಿತಳು.

ಮುಂದಿನ ಸ್ಟೇಶನ್ನಿನಲ್ಲಿ ರತನನನ್ನು ಕೂಗಿ ಊಟಕ್ಕಾಗಿ ಸ್ಥಳವನ್ನು ಸರಿಪಡಿಸಿದಳು; ಮತ್ತು ತಟ್ಟೆಯಲ್ಲಿ ಖಾದ್ಯಪದಾರ್ಥಗಳನ್ನೆಲ್ಲ ಓರಣವಾಗಿರಿಸಿ ನನ್ನ ಮುಂದೆ ಇಟ್ಟಳು; ಮತ್ತು ರತನನಿಗೆ ಗುಡಗುಡಿಯನ್ನು ಸಿದ್ಧ ಮಾಡಿಕೊಂಡು ಬರಲು ಅಪ್ಪಣೆಕೊಟ್ಟಳು. ಊಟದ ವಿಷಯದಲ್ಲಿ ಇನಿತಾದರೂ ಅಸ್ತವ್ಯಸ್ತವಾಗಗೊಟ್ಟಿಲ್ಲವೆಂಬುದನ್ನು ನೋಡಿವೆ. ನನಗೆ ಸೇರುವ ಎಲ್ಲ ಪದಾರ್ಥಗಳನ್ನೂ ಸಂಗ್ರಹಿಸಿಟ್ಟಿದ್ದಳು.

ಬೆಂಚಿನ ಮೇಲೆ ರತನ ಹಾಸುಗೆಯನ್ನು ಹಾಸಿದ. ಊಟವನ್ನು ಚೆನ್ನಾಗಿ ಮಾಡಿ ಮುಗಿಸಿ, ಗುಡಗುಡಿಯ ನಳಿಕೆಯನ್ನು ಬಾಯಲ್ಲಿಟ್ಟುಕೊಂಡು ತಂಬಾಕು ಸೇವನೆ ಮಾಡುತ್ತ ನಾನು ಕಣ್ಣು ಮುಚ್ಚುವ ಸಿದ್ಧತೆಯಲ್ಲಿದ್ದೆ. ಇಷ್ಟರಲ್ಲಿ ರಾಜಲಕ್ಷ್ಮಿಯು " ರತನ, ಊಟದ ಎಲ್ಲ ಪದಾರ್ಥಗಳಿನ್ನೂ ತೆಗೆದುಕೊಂಡು ಹೋಗು. ನಿನಗೆ ಬೇಕಾದವುಗಳನ್ನು ನೀನು ತೆಗೆದು ಕೊ. ಬಾಕಿ ಉಳಿದುವನ್ನು ನಿನ್ನ ಡಬ್ಬಿಯಲ್ಲಿರುವವರಿಗೆ ಕೊಟ್ಟು ಬಿಡು " ಎಂದು ಹೇಳಿದಳು.

ರತನ ಸ್ವಲ್ಪ ಸಂಕೋಚಪಟ್ಟುಕೊಂಡ, ಸ್ವಲ್ಪ ನಾಚಿಕೆಯೂ ಅವನಿಗೆ ಬಂದಿತು. ನನಗೆ ಅವನನ್ನು ನೋಡಿ ಆಶ್ಚರ್ಯವಾಯಿತು. ನಾನು ಕೇಳಿದೆ "ನೀನು ಊಟ ಮಾಡಲೇ ಇಲ್ಲವಲ್ಲ? "

ರಾಜಲಕ್ಷ್ಮಿಯೆಂದಳು "ಇಲ್ಲ, ನನಗೆ ಹಸಿವು ಇಲ್ಲ. ಹೋಗು ರತನ. ಏಕೆ ನಿಂತುಕೊಂಡೆ. ಗಾಡಿ ಬಿಟ್ಟುಬಿಡುವುದು ! "

ರತನ ನಾಚಿಕೆಯಿಂದ ಬಹಳ ದಿಙ್ಮೂಢನಾಗಿಬಿಟ್ಟ. ಅವನು 'ನನ್ನಿಂದ ದೊಡ್ಡ ತಪ್ಪಾಯಿತು ಬಾಬೂ, ಮುಸಲ್ಮಾನ ಕೂಲಿ

ಯೊಬ್ಬನು ಖಾದ್ಯಪದಾರ್ಥಗಳೆನ್ನು ಮುಟ್ಟಬಿಟ್ಟ. ಎಷ್ಟು ಸಾರೆ ಹೇಳಿದೆ '—ಅಮ್ಮನವರೇ ಸ್ಟೇಶನ್ನಿನಲ್ಲಿ ಏನಾದರೂ ಖರೀದಿ ಮಾಡಿ ತಂದು ಕೊಡುವೆ' ಎಂದು. ಒಪ್ಪಲೇ ಇಲ್ಲ" ಎಂದು ನನ್ನ ಕಡೆಗೆ ಕಾತರ ದೃಷ್ಟಿಯಿಂದ ನೋಡುತ್ತ ನನ್ನ ಅಪ್ಪಣೆಯ ದಾರಿ ಕಾಯುತ್ತ ನಿಂತ.

ಆದರೆ ನಾನ. ಹೇಳುವುದಕ್ಕೆ ಮೊದಲೇ ರಾಜಲಕ್ಷ್ಮಿಯು ಅವನಿಗೆ "ನೀನು ಹೋಗುವಿಯೊ ಇಲ್ಲವೊ ? ನಿಂತುನಿಂತು ತರ್ಕ ಮಾಡುವಿಯಾ ?" ಎಂದು ಬೆದರಿಸಿದಳು.

ರತನ ಏನನ್ನೂ ನುಡಿಯದೆ ಅಡುಗೆಯ ಪಾತ್ರೆಯನ್ನು ತೆಗೆದುಕೊಂಡು ಹೊರಟುಹೋದ. ಗಾಡಿಯು ಸ್ಟೇಶನನ್ನು ಬಿಡುತ್ತಲೇ ರಾಜಲಕ್ಷ್ಮಿಯು ನನ್ನ ದಿಂಬಿನ ಬಳಿ ಬಂದು ಕುಳಿತಳು. ನನ್ನ ತಲೆಗೂದಲುಗಳಲ್ಲಿ ಕೈಬೆರಳುಗಳನ್ನಾಡಿಸತೊಡಗಿದಳು.

ಮುದ್ರಕರು: ಶ್ರೀ. ಫಕೀರಪ್ಪಾ ಎಲ್ಲಪ್ಪಾ ಮಿಂಡಗುದ್ಲಿ,
ರವೀಂದ್ರ ಮುದ್ರಣಾಲಯ, ಉಳವೀಬಸವೇಶ್ವರಗುಡ್ಡ, ಧಾರವಾಡ.
ಪ್ರಕಾಶಕರು: ಶ್ರೀ. ಬೆಳಗಾವಿ ರಾಮಚಂದ್ರರಾಯರು,
ಮನೋರಂಜನ ಪ್ರಕಾಶನ ಸಮಿತಿ, ರೈಟರ ಓಣಿ, ಧಾರವಾಡ.

ಸ್ವಲ್ಪೇ ಪ್ರತಿಗಳು ಉಳಿದಿವೆ! ತ್ವರೆ ಮಾಡಿರಿ!!

## ಮೂಲ ಸಂಸ್ಕೃತ ಗ್ರಂಥದ ಅಧಿಕೃತ ಪ್ರಕಟನೆ

### ಎರಡು ಸಾವಿರ ವರ್ಷಗಳ ಹಿಂದೆ ಬರೆಯಲಾದ ಹಿಂದುಗಳ ಪವಿತ್ರ ಧರ್ಮ-ಕಾಮಶಾಸ್ತ್ರ ಗ್ರಂಥ

# ವಾತ್ಸ್ಯಾಯನ ಕಾಮಸೂತ್ರ

ಮೂಲ [illegible] ರಾಯಣ, ಸುವರ್ಣನಾಭ, ಘೋಟಕಮುಖ, ಗೋನರ್ದೀಯ, ಗಣಿಕಪುತ್ರ, ಕುಚುಮಾರ, ದತ್ತಕ, ಶ್ವೇತಕೇತು, ಬಾಭ್ರವ್ಯ, ವಾತ್ಸ್ಯಾಯನ ಮೊದಲಾದ ಪೂರ್ವಾಚಾರ್ಯರ ಸೂತ್ರಗಳೂ ಮತ್ತು ಮನು, ಗೌತಮ, ವಶಿಷ್ಠ ಮೊದಲಾದ ಮಹರ್ಷಿಗಳ ಸ್ಮೃತಿಗಳೂ ಇವೆಲ್ಲವುಗಳ ಕನ್ನಡ ಟೀಕಾ ರೂಪದಲ್ಲಿ ಸಂಪೂರ್ಣ ಭಾಷಾಂತರವನ್ನು ಕೊಡಲಾಗಿದೆ.

ಅಲ್ಲದೆ

ಆಧುನಿಕ ಕಾಮವಿಜ್ಞಾನಿಗಳಾದ **ಪ್ರೊ. ಹ್ಯಾವಲಾಕ್ ಎಲಿಸ್, ಪ್ರೊ. ಪ್ರಾಯಿಡ್, ಡಾ. ಕೆಲ್ಲರ, ಡಾ. ರಾಬಿನ್‌ಸನ್** ಮೊದಲಾದ ಪಾಶ್ಚಿಮಾತ್ಯ ವಿಜ್ಞಾನಿಗಳ ಅಭಿಪ್ರಾಯವನ್ನೂ ಕೊಡಲಾಗಿದೆ. ಪೌರ್ವಾತ್ಯ-ಪಾಶ್ಚಿಮಾತ್ಯ ಕಾಮಶಾಸ್ತ್ರದ ಅಧ್ಯಯನ ಮಾಡುವವರಿಗೆ ಇದೊಂದು ಅತ್ಯಂತ ಉಪಯುಕ್ತ ಗ್ರಂಥವಾಗಿದೆ. ಇಷ್ಟು ಸರಳವಾದ ಮತ್ತು ಸ್ಪಷ್ಟವಾದ ಭಾಷೆಗಳಲ್ಲಿ ಬರೆದ ಗ್ರಂಥವು ಕನ್ನಡದಲ್ಲಿ ಮತ್ತೊಂದಿಲ್ಲ.

## ಒಮ್ಮೆ ಇದನ್ನು ಓದಿ ಮನಗಾಣಿರಿ!

| | |
|---|---|
| **ಕಾಮಸೂತ್ರ (ಭಾಗ ೧)** | ೧—೮—೦ |
| **ಕಾಮಸೂತ್ರ (ಭಾಗ ೨)** | ೧—೮—೦ |
| **ನಪುಂಸಕತೆ ( ಸಚಿತ್ರ )** | ೦—೫—[illegible] |

ಪುಸ್ತಕಗಳು ದೊರೆಯುವ ಒಂದೇ ಒಂದು ಸ್ಥಳ:

## ಜನಜೀವನ ಕಾರ್ಯಾಲಯ, ಧಾರವಾಡ.